ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 27

ಡಿಸೆಂಬರ್ 2, 2007

ರೂ. 5/-



ಪೇಜ್ 5

ಕರ್ನಾಟಕ ರಾಜಕೀಯ : ಜನಪರ ಚಳುವಳಿಗಳ ಹೊಣೆಗಾರಿಕೆ

ಪೇಜ್ 9

ಯಡ್ಯೂರಪ್ಪಗೆ ಅಪಘಾತ ನಾಡಿಗೆ ತಪ್ಪಿದ ಅಘಾತ



ಬೆಳ್ತಂಗಡಿ : ಬಲಗೊಳ್ಳುತ್ತಿರುವ ಜನ ಚಳುವಳಿ



ಐಕ್ಯ ಹೋರಾಟದತ್ತ ಕಾರ್ಮಿಕ ವರ್ಗ



ಕಲಾಸಿಪಾಳ್ಯ ಒಂದು ಕಪ್ಪು ಚುಕ್ಕೆ

ನಂದಿಗ್ರಾಮ : ನಂದದ ವಿಷ ಪ್ರಚಾರ

ಇದ್ದದ್ದು ಇದ್ದಾಂಗ

ಹೃದಯದಲ್ಲಿ ಕೊಲ್ಕತ್ತಾಗೆ ವಿಶೇಷ ಸ್ಥಾನ



"ನನ್ನ ಹೃದಯದಲ್ಲಿ ಕೊಲ್ಕತ್ತಾಗೆ ವಿಶೇಷ ಸ್ಥಾನವಿದೆ ಮತ್ತು ಮತ್ತೆ ಅಲ್ಲಿಗೆ ಹೋಗಿ ಇರಬಲ್ಲೆ ಎಂಬ ನಂಬಿಕೆಯೂ ಇದೆ. ಕೊಲ್ಕತ್ತಾ ಮೂಲಭೂತವಾದಿಗಳ ಸ್ಥಳ ಎಂಬುದನ್ನು ನಾನು ನಂಬುವುದಿಲ್ಲ. ಕೈ ಬೆರಳಣಿಕೆಯಷ್ಟಿರುವ ಕೆಲವೇ ಜನರ ಪ್ರಚೋದನೆಯಿಂದಾಗಿ ಬುಧವಾರ ಒಂದಿಷ್ಟು ಜನ ಗೂಂಡಾಗಳು ಹಿಂಸಾಚಾರ ನಡೆಸಿದ್ದಾರೆ.

ಕೊಲ್ಕತ್ತಾ ಒಂದು ಪ್ರಗತಿಪರ ನಗರ. ಅಲ್ಲಿಯ ಜನ ಜಾತ್ಯಾತೀತತೆಯಲ್ಲಿ ನಂಬಿಕೆಯಿಟ್ಟವರಾಗಿದ್ದಾರೆ. ನಗರದ ಈ ಸ್ಫೂರ್ತಿಯನ್ನು ನಾನು ಅಭಿನಂದಿಸುತ್ತೇನೆ".

-ತಸ್ಲಿಮಾ ನಸ್ರಿನ್

ಬಾಂಗ್ಲಾದೇಶದ ಲೇಖಕಿ, ಕೊಲ್ಕತ್ತಾದಿಂದ ರಾಜಸ್ಥಾನದ ಜೈಪುರಕ್ಕೆ ತೆರಳುತ್ತಾ,

★

ಯಡಿಯೂರಪ್ಪ ಕೇಳಿದ್ದ 5 ಕೋಟಿ


"ಅನಂತಕುಮಾರ್‌ಗೆ 5 ಕೋಟಿ ನೀಡಬೇಕ. ಅದನ್ನು ನೀಡಿದ್ರೆ ಅವರ ಮುಖದ ಮೇಲೆ ಬಿಸಾಕಿ ನಿಮ್ಮ ಪಕ್ಷ ಸೇರುತ್ತೇನೆ ಎಂದಿದ್ದ ಯಡಿಯೂರಪ್ಪ ಅವರಿಗೆ ಕೃತಜ್ಞತೆಯಿಲ್ಲ.

'ಬಿಜೆಪಿಯಲ್ಲಿದ್ದು ಸಾಕಾಗಿದೆ. ಜೆಡಿ(ಎಸ್) ಸೇರುತ್ತೇನೆ. ಸಚಿವ ಸ್ಥಾನ ನೀಡಲಾಗುವುದೇ ಎಂದು ಯಡಿಯೂರಪ್ಪ ಕೋರಿದ್ದರು. ಸಚಿವ ಸ್ಥಾನ ಕೇಳಿದ್ದ ಇವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿದ್ದಕ್ಕೆ ಈಗ ಟೀಕೆ ಮಾಡುತ್ತಿದ್ದಾರೆ"

-ಕುಮಾರಸ್ವಾಮಿ,
ಮಾಜಿ ಮುಖ್ಯಮಂತ್ರಿ

★

ಎರಡು ಪರಿಣಾಮಗಳು



"ಖಾಸಗಿ ಟಿ.ವಿ. ಚಾನೆಲ್‌ಗಳು ತಮ್ಮ ಆದಾಯಕ್ಕಾಗಿ ಜಾಹೀರಾತಿನ ಮೇಲೆ ಅವಲಂಬಿತರಾಗಿದ್ದು, ಜಾಹೀರಾತುದಾರರನ್ನು ಸೆಳೆಯಲು, ಹೆಚ್ಚು ಹೆಚ್ಚಾಗಿ ನೋಡುಗರನ್ನು ಆಕರ್ಷಿಸುವಂತೆ ಮಾಡುತ್ತಾರೆ. ಇದರಿಂದಾಗಿ ಎರಡು ಕೆಟ್ಟ ಪರಿಣಾಮಗಳು ಆಗುತ್ತವೆ. ಒಂದು ಹೆಚ್ಚು ಹೆಚ್ಚಾಗಿ ನೋಡುವವರನ್ನು ಆಕರ್ಷಿಸುವ ಸ್ಪರ್ಧೆಯಲ್ಲಿ ಕೆಲವು ಚಾನಲ್‌ಗಳು ಸತ್ಯವನ್ನು ಮರೆಮಾಚುವಷ್ಟು ಮುಂದೆ ಹೋಗಿರುತ್ತಾರೆ. ಇನ್ನು ಕೆಲವರು, ಉದ್ರೇಕಕಾರಿ ಸುದ್ದಿಗಳಿಗೆ ಮಾರುಹೋಗಿದ್ದಾರೆ ಮತ್ತು ಎಲ್ಲಾ ವಿಧದ ಕತೆಗಳನ್ನು ಸುದ್ದಿಗಳೆಂದು ಬಿಂಬಿಸುತ್ತಾರೆ".

- ಸೋಮನಾಥ ಚಟರ್ಜಿ,
ಲೋಕಸಭಾ ಅಧ್ಯಕ್ಷರು, ಹಿಂದೂ, 22-11-07

ಇಎಂಎಸ್ ಭವನ ನಿಧಿ

ಎರಡನೇ ಹಂತದ ಸಂಗ್ರಹ



ಹಿಂದಿನ ಸಂಚಿಕೆಯಿಂದ	ರೂ. 7,70,304.00
ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಮೂಲಕ	
ಸಿಪಿಐ(ಎಂ) ಬಿಜಾಪುರ ಜಿಲ್ಲಾ ಸಮಿತಿ ಮೂಲಕ	7,100
(ಅಣ್ಣಾರಾಯ ಈಳಗೇರ 500 ಮತ್ತು ಸಂಜೀವರಾವ್ 1000)	
ಸಿಪಿಐ(ಎಂ) ಉ.ಕ.ಜಿಲ್ಲಾ ಸಮಿತಿ ಮೂಲಕ	1,500
(ವಿ.ಕೆ.ನಾಯ್ಕ, ಗ್ರಾ.ಪ. ಅಧ್ಯಕ್ಷರು, ಶಿರಾಲಿ,ಭಟ್ಕಳ 500	1,000
ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ, ಭಟ್ಕಳ ತಾಲ್ಲೂಕು ಸಮಿತಿ 500	
ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಮೂಲಕ	
ಸೌಮ್ಯರಾಣಿ ಎನ್.ವಿ.	43,402.00
ಒಟ್ಟು	1,000.00
ತಿದ್ದುಪಡಿ	8,24,306

ನವೆಂಬರ್ 11,2007ರ ಸಂಚಿಕೆಯಲ್ಲಿ ಪ್ರಕಟವಾದ ಪಟ್ಟಿಯಲ್ಲಿ ಕೆಲವು ತಪ್ಪುಗಳಾಗಿವೆ.
ಸಿಪಿಐ(ಎಂ) ಮೈಸೂರು ಜಿಲ್ಲಾ ಸಮಿತಿ ಮೂಲಕ
ಎ.ಎಸ್.ನಾಗೇಂದ್ರ ಶರ್ಮ ರೂ.10,000 ಎಂದಾಗಬೇಕು.
ಕೆ.ಎಸ್.ನರಸಿಂಹನ್ ರೂ.1000 ಎಂದಾಗಬೇಕು.
ಎಲ್.ಜಗನ್ನಾಥ ರೂ.1000 ಎಂದಾಗಬೇಕು.
ತಪ್ಪುಗಳಿಗೆ ವಿಷಾದಿಸುತ್ತೇವೆ.

ಚುಚ್ಚುಮದ್ದು

ಯಡಿಯೂರಪ್ಪ ಉವಾಚಗಳು

■ "ನನ್ನನ್ನು ಮುಗಿಸುವುದಕ್ಕೆ ಮಾಟ, ಮಂತ್ರ, ತಂತ್ರಗಳನ್ನು ಮಾಡುತ್ತಿದ್ದಾರೆ. ನನ್ನ ಜೀವಕ್ಕೆ ಭಯ ಇದೆ. ಮುಂಬರುವ ದಿನಗಳಲ್ಲಿ ನನಗೆ ಹೆಚ್ಚು ಕಡಿಮೆ ಆದರೆ ಅದಕ್ಕೆ ದೇವೇಗೌಡ ಮತ್ತು ಅವರ ಕುಟುಂಬವೇ ಕಾರಣ"

→ ನಿಮ್ಮ ಮಾತು ಕೇಳಿ ನಮ್ಮೂರ ಹೈಸ್ಕೂಲ್ ಮಕ್ಳು ನಗ್ತಾ ಇದ್ದಾವೆ.

★

■ "ಕುಮಾರಸ್ವಾಮಿ ಅವರೇ... ನಿಮ್ಮನ್ನು ಮುಖ್ಯಮಂತ್ರಿ ಮಾಡಿದ್ದು ನಿಮ್ಮಪ್ಪ ಅಲ್ಲ. ಈ ಯಡಿಯೂರಪ್ಪ ನೆನಪಿರಲಿ".

→ ಮತದಾರರು, ಕಾರ್ಯಕರ್ತರು, ಶಾಸಕರು... ಮುಂತಾದವರನ್ನೆಲ್ಲಾ ಇಂಥ ಗಳಿಗೆಯಲ್ಲಿ ನೆನೆಯಬಾರದು, ಅಲ್ಲವೇ?

★

■ "ಅಣ್ಣನಿಗೆ (ಹೆಚ್.ಡಿ.ರೇವಣ್ಣ) ಲೋಕೋಪಯೋಗಿ ಮತ್ತು ವಿದ್ಯುತ್ ಖಾತೆಯೇ ಬೇಕು. ತಮ್ಮನಿಗೆ (ಕುಮಾರಸ್ವಾಮಿ) ಗಣಿ ಮತ್ತು ನಗರಾಭಿವೃದ್ಧಿ ಖಾತೆಯೇ ಬೇಕು. ಈ ಖಾತೆಗಳಲ್ಲಿ ಏನಿದೆ?"

→ ನೀವೂ ಅವೇ ಖಾತೆ ಬೇಕೂ ಅಂತಿದ್ರಲ್ಲ. ಏನಿದೆ ಅದರಲ್ಲಿ ನೀವೇ ಹೇಳಬಾರದೇ?

★



ಜನದನಿ

ಆತ್ಮೀಯರೇ,

ತಮ್ಮೆಲ್ಲರ ಬದುಕಿನಲ್ಲಿ ಬೆಳಕು ತುಂಬಿರಲಿ. ಜನಶಕ್ತಿಯನ್ನು ವಿಶ್ವಾಸದಿಂದ ಕಳಿಸುತ್ತಿರುವಿರಿ. ರಾಜಕಾರಣ ಮಾನ ಮರ್ಯಾದೆ ಕಳೆದುಕೊಂಡು ಕರ್ನಾಟಕವನ್ನು ಹರಾಜಿಗಿಟ್ಟಿರುವ ವಿಷಮ ಸಂದರ್ಭದಲ್ಲಿ ಪ್ರತಿಭಟನೆಯ ಅಸ್ತ್ರದೋಪಾದಿಯಲ್ಲಿ ಜನಶಕ್ತಿಯನ್ನು ರೂಪಿಸಿ ತರುತ್ತಿರುವ ನಿಮ್ಮನ್ನು ಹಾರ್ದಿಕವಾಗಿ ಅಭಿನಂದಿಸುವೆ. ಇದು ಹೀಗೆ ಮುಂದುವರಿದರೆ ರಾಜ್ಯದ ಗತಿ ಏನ್ರಿ? ಗೌಡ್ರು ಮತ್ತವರ ಕುಟುಂಬದವರು ತಮಗಿಷ್ಟ ಬಂದಂತೆ ಆಟನ ಆಡ್ತಿದ್ದಾರೆ ಮತ್ತು ಆಡಿಸ್ತಿದ್ದಾರೆ. ಯಡ್ಯೂರಪ್ಪನ ರೂಪದಲ್ಲಿ ಬಿಜೆಪಿ ಏನಾದರೂ ವಿಧಾನಸೌಧದ ಅಟ್ಟಣಿಗೆ ಮೇಲೆ ಕೂತು ಬಿಟ್ತೊಂದ್ರೆ ರಾಜ್ಯ ಕ್ರಿ.ಪೂ.ಕ್ಕೆ ತಳ್ಳಲ್ಪಡುವುದಂತೂ ಗ್ಯಾರಂಟಿ. ಕಾಂಗ್ರೆಸ್ಸಿನವರಿಗೆ ಬುದ್ದಿ ಬರ್ತಿರೋ ಲಕ್ಷಣ ಇಲ್ಲ. ಈಗಂತೂ ಥರ್ಡ್ ಫ್ರಂಟ್ ಅಗತ್ಯ ಎಷ್ಟೋ ಇದೆ. ಸಮಾಜವಾದಿ, ಎಡಪಂಥೀಯರನ್ನು ಒಗ್ಗೂಡಿಸುವ ಕೆಲಸವನ್ನು ಜನಶಕ್ತಿ ವೇದಿಕೆ ಯಾಕೆ ಮಾಡಬಾರದು? ಈಗ ಜನಶಕ್ತಿ ಮತ್ತದರ ಜಾಯಮಾನದ ಪತ್ರಿಕೆಗಳ ಚಿಂತನೆಯೂ ಇದೇ ಆಗಿದೆ. ಜನಪರ ಲೇಖಕರನ್ನಿಸಿ ಕೊಂಡರೋರೆಲ್ಲ ಬೆಸಗೊಂಡೆಡೆ ಸಾಧ್ಯವಾ!


- ಕುಂವೀ (ಕುಂ.ವೀರಭದ್ರಪ್ಪ) ಬಳ್ಳಾರಿ

★

ಆತ್ಮೀಯರೇ,

ಜನಶಕ್ತಿ (ಸಂಚಿಕೆ 28) ಕುರಿತು ಈ ಪತ್ರ 'ಗಡಿಗಳು ಗೋಡೆಗಳೇ' ಎಂಬ ಲೇಖನ ತುಂಬಾ ಚೆನ್ನಾಗಿದೆ. ಆದರೆ ಮುದ್ರಣ ದೋಷಗಳು ಬಹಳ ಇವೆ. ಈ ಲೇಖನಕ್ಕೆ ಪೂರಕವಾಗಿ ಗಡಿ ಕರ್ನಾಟಕವನ್ನು ಒತ್ತಿ ತೋರಿಸುವ ನಕ್ಷೆ ಹಾಕಬೇಕಿತ್ತು. ಪುಟವಿನ್ಯಾಸವನ್ನು ಇನ್ನಷ್ಟು ಆಕರ್ಷಕಗೊಳಿಸಬೇಕಿತ್ತು. 'ಅಕ್ಟೋಬರ್ ಕ್ರಾಂತಿಯ ಹೊಂಬೆಳಕು' ಲೇಖನ ಕೂಡ ತುಂಬ ಚೆನ್ನಾಗಿದೆ. ಲೇಖನದೊಳಗೆ ಅಡಕವಾದ ಅಂಶಗಳಿಗೆ ಪೂರಕವಾಗಿ ಇನ್ನಷ್ಟು ನಕ್ಷೆಗಳನ್ನು ಬಳಸಬೇಕಿತ್ತು. ಪ್ರಪಂಚದ ನಕ್ಷೆ. ಅದರಲ್ಲಿ ಅಂದಿನ ಸಾಮ್ರಾಜ್ಯಗಳ ನಕ್ಷೆ ಹೀಗೆ. ನಂತರ ಲೇಖನದಲ್ಲಿ ಅಂತರ್ಗತವಾದ ಕೆಲವಂಶಗಳನ್ನು ವಿಸ್ತರಿಸಿ ಆಗಾಗ ಲೇಖನ ಬರೆಯುವ ಅಗತ್ಯವೂ ಇದೆ. .... ಮತ್ತೆ 'ಇದ್ದದ್ದು ಇದ್ದಾಂಗ', 'ಚುಚ್ಚುಮದ್ದು' , 'ಕ್ಯಾತೆ' ಈ ಅಂಕಣಗಳು ಪ್ರತಿ ಸಂಚಿಕೆಯಲ್ಲೂ ಇರಲಿ. ಈ ಮೂರು ಅಂಕಣಗಳಿಗೆ ವ್ಯಂಗ್ಯಚಿತ್ರ ಬಳಸಿದರೆ ಇನ್ನೂ ಚೆನ್ನಾಗಿರುತ್ತದೆ. ಈ ಮೂರು ಅಂಕಣಕ್ಕೂ ಕೂಡ ಪುಟ ವಿನ್ಯಾಸ ಆಕರ್ಷಕವಾಗಿರಬೇಕು. ವಿಜ್ಞಾನ ಅಂಕಣವೂ ಚೆನ್ನಾಗಿದೆ. ಈ ಸಲ ಕೆ.ನೀಲಾ ಅವರ 'ನೆಲದ ಪಿಸುಮಾತು' ಕೂಡ ಚೆನ್ನಾಗಿದೆ. ಆದರೆ ಇಲ್ಲಿಯೂ ಅಗತ್ಯ ಫೋಟೋ ಹಾಕಿರಿ. ಒಟ್ಟಾರೆಯಾಗಿ ಪತ್ರಿಕೆಯ ಪುಟ ಸಂಖ್ಯೆ ಕಡಿಮೆ ಮಾಡಬೇಕಾದ ಅಗತ್ಯವೂ ಇದೆ. ಹೆಚ್ಚು ಪುಟಗಳಾದರೆ ಓದುಗ ಎಲ್ಲವನ್ನೂ ಓದಲಾರ. ....ಸಿನಿಮಾ-ಅಂಕಣದ ವಿಶ್ಲೇಷಣೆ ಕೂಡ ಚೆನ್ನಾಗಿದೆ. ಅಭಿನಂದನೆಗಳು.

- ಹುರುಕಡ್ಲಿ ಶಿವಕುಮಾರ
ಬಾಚಿಗೊಂಡನಹಳ್ಳಿ



ಸಂಪಾದಕೀಯ

ಚುನಾವಣೆಯೊಂದೇ.....


ಮತ್ತೆ ಮತ್ತೆ ಮರು ಮೈತ್ರಿ ಏರ್ಪಡಿಸಿಕೊಂಡು ಅಧಿಕಾರದಾಹಕ್ಕಾಗಿ ಸಂದರ್ಭ ಸಾಧಕತೆಯ ಸರ್ಕಾರ ರಚಿಸಿದ್ದ ಬಿಜೆಪಿ ಮತ್ತು ಜೆಡಿ(ಎಸ್)ಗಳ ಸರ್ಕಾರ ಮತ್ತೆ ಪತನ ಹೊಂದಿದ್ದು ಒಂದು ಸ್ವಾಗತಾರ್ಹ ಬೆಳವಣಿಗೆ. ಆರ್.ಎಸ್.ಎಸ್.ನಂತಹ ಸಂವಿಧಾನೇತರ ಕೋಮುವಾದಿ ಫ್ಯಾಸಿಸ್ಟ್ ಮನೋಭಾವದ ಶಕ್ತಿಯ ಹಿಡಿತಕ್ಕೆ ಒಳಪಡುತ್ತಿದ್ದ ಸರ್ಕಾರ ಇದಾಗಿದ್ದು, ಗಂಭೀರ ಅಪಾಯಕಾರಿ ಸನ್ನಿವೇಶವನ್ನು ಹುಟ್ಟುಹಾಕಿತ್ತು. ಈ ಪತನವು ಒಂದು ಸಣ್ಣ ನಿಟ್ಟುಸಿರು ಬಿಡಲು ಅವಕಾಶ ಕಲ್ಪಿಸಿದೆ. ಇಂತಹ ಸರ್ಕಾರ ರಚಿಸುವ ಕೆಲವೇ ದಿನಗಳ ಹಿಂದೆ ಎರಡು ಪಕ್ಷಗಳು ಮನಸೋ ಇಚ್ಛೆ ಆರೋಪ-ಪ್ರತ್ಯಾರೋಪದ ಕೆಸರಾಟದಲ್ಲಿ ತೊಡಗಿದ್ದವು ಮತ್ತು ದಿಢೀರನೇ ಮರು ಮೈತ್ರಿ ಏರ್ಪಡಿಸಿಕೊಂಡು ಬಿಜೆಪಿ ಸರ್ಕಾರ ರಚಿಸುವ ಪ್ರಸ್ತಾಪಕ್ಕೆ ಜೆಡಿ(ಎಸ್) ರಾಜ್ಯಪಾಲರ ಎದುರು ಬೆಂಬಲಿಸಿತ್ತು. ವಿಳಂಬವಾಗುತ್ತಿದೆ ಎಂದು ಬಿಜೆಪಿ ಕೂಗೆಬ್ಬಿಸಿದಾಗ ರಾಷ್ಟ್ರಪತಿಗಳ ಮುಂದೆಯೂ ಶಾಸಕರ ಪ್ರದರ್ಶನ ಪೆರೇಡ್ ನಡೆಸಿತ್ತು. ಆದರೆ 19ರಂದು ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸುವ ಸಂದರ್ಭದಲ್ಲಿ ಜೆಡಿ(ಎಸ್) ಮತದಾನ ಮಾಡಿ ಬೆಂಬಲಿಸಲು ನಿರಾಕರಿಸಿದ್ದು ಯಡಿಯೂರಪ್ಪ ರಾಜೀನಾಮೆ ಕೊಡಬೇಕಾಗಿ ಬಂದಿದೆ.

ಈ ಸರ್ಕಾರ ಮುಂದೆ ಹೇಗೆ ಕಾರ್ಯನಿರ್ವಹಿಸಬೇಕು ಎಂಬ ಬಗ್ಗೆ ಉಭಯ ಪಕ್ಷಗಳ ನಡುವೆ ಸಾಮಾನ್ಯ ತಿಳುವಳಿಕೆಯ ಪತ್ರಕ್ಕೆ ಸಹಿ ಹಾಕಬೇಕು ಎಂಬ ಜೆಡಿ(ಎಸ್)ನ ಹೇಳಿಕೆಗೆ ಬಿಜೆಪಿ ನಿರಾಕರಿಸಿತು. ಇದಕ್ಕೆ ದೇವೇಗೌಡರೇ ಕಾರಣವೆಂದೇ ಹೇಳಲಾಗುತ್ತಿದೆ. ಮುಖ್ಯವಾಗಿ ಮೈತ್ರಿಕೂಟದ ಎರಡೂ ಪಕ್ಷಗಳ ನಡುವೆ ವಿಶ್ವಾಸವೇ ಇರಲಿಲ್ಲ. ಇರಲೂ ಸಾಧ್ಯವಿರಲಿಲ್ಲ ಇರುವ ಅವಕಾಶಗಳನ್ನು ಪೂರ್ಣವಾಗಿ ಬಳಸಲು, ಮೇಲುಗೈ ಸಾಧಿಸಲು ಬಿಜೆಪಿ-ಆರ್‌ಎಸ್‌ಎಸ್‌ಗಳು ಯತ್ನಿಸದೇ ಏನೂ ಇಲ್ಲ. ಅದಕ್ಕಾಗಿ ಇಬ್ಬರಲ್ಲೂ ಅಧಿಕಾರ ದಾಹವೇ ಸಾಮಾನ್ಯ ಕನಿಷ್ಠ ಕಾರ್ಯಕ್ರಮವಾಗಿತ್ತು.

ಅಧಿಕಾರ ಪತನವಾಗಿ ಪರಸ್ಪರ ದೋಷಾರೋಪಣೆ ಮಾಡಿಕೊಳ್ಳುವಾಗ ಸರ್ಕಾರ ಇರುವಾಗ ಮತ್ತು ಸರಕಾರ ನಡೆಸುವ ಮೊದಲು ನಡೆದ ವಿದ್ಯಮಾನಗಳನ್ನು, ಕುಮಾರಸ್ವಾಮಿ, ದೇವೇಗೌಡರು ಈಗ ಬಹಿರಂಗಗೊಳಿಸಿದ ಸಂಗತಿಗಳು ಅತಿ ಗಂಭೀರ ಸ್ವರೂಪದ್ದಾಗಿವೆ. ಉಭಯ ಪಕ್ಷಗಳ ನಾಯಕರ ನಡುವಿನ ತಿಳುವಳಿಕೆ ಪ್ರಮಾಣಪತ್ರವನ್ನು ಆರ್‌ಎಸ್‌ಎಸ್ ನೀಡಿದೆ ಎಂಬ ದೇವೇಗೌಡರ ನೇರ ಆರೋಪಕ್ಕಾಗಲಿ, ವಿಮಾನ ನಿಲ್ದಾಣಗಳ ನಿರ್ಮಾಣ ಖಾಸಗಿ ಕಂಪನಿಗಳಿಗೆ ಏನೂ ಚರ್ಚಿಸದೇ, ಗುತ್ತಿಗೆ ನೀಡಲು, ಹಾಗೇ ಸೈಕಲ್ ನೀಡಿಕೆ, ಕಾಕಂಬಿ ಮಾರಾಟದ ಪ್ರಕರಣ, ಅನಂತಕುಮಾರ್‌ಗೆ 5 ಕೋಟಿ ಹಣ ನೀಡಿ ಮುಕ್ತವಾಗಲು ಹಣ ಬೇಕಾಗಿದೆ ಎಂದು ಕುಮಾರಸ್ವಾಮಿಯನ್ನು ಯಡಿಯೂರಪ್ಪ ಕೇಳಿದ್ದು, ಇಂತಹ ಸಂಗತಿಗಳು ನಿಜಕ್ಕೂ ಗಂಭೀರವಾಗಿವೆ. ಈ ಸಂಗತಿಗಳು ಭ್ರಷ್ಟತೆ ಅಧಿಕಾರದಾಹ, ರಾಜ್ಯ ಹಿತವನ್ನೇ ಬಲಿಕೊಡುವಂತಹವು ಗಳಾಗಿವೆ. ಇಂತಹ ಹಲವಾರು ಪ್ರಸಂಗಗಳು ರಾಜ್ಯದ ಜನರ ಮುಂದೆ ಬಹಿರಂಗಗೊಳ್ಳಬೇಕು, ಇವು ಸಾರ್ವಜನಿಕ ಸಂಗತಿಗಳಾಗಿದ್ದು ಅವುಗಳನ್ನು ಮುಚ್ಚಿಡುತ್ತಾ ಬಂದಿದ್ದು ಖಂಡನೀಯ. ಇನ್ನುಳಿದ ಸಂಗತಿಗಳು ಕೂಡಾ ಜನರ ಮುಂದೆ ತೆರೆದಿಡಬೇಕು.

ಮೈತ್ರಿಯೆಲ್ಲಾ ಮುರಿದು ಬಿದ್ದು ಮತ್ತೆ ರಾಷ್ಟ್ರಪತಿ ಆಡಳಿತ ಹೇರಿಕೆ ಅನಿವಾರ್ಯವಾಗಿರುವಾಗಲೇ, ಮತ್ತೆ ಎಂತಹದ್ದೋ ಸರ್ಕಾರ ರಚನೆಗೆ ತೆರೆಮರೆಯ ಹಿಂದೆ ಪ್ರಯತ್ನಗಳು ಸಾಗಿರುವುದು ಸರಿಯಲ್ಲ. ಜನರನ್ನು ಎದುರಿಸಲು ಸಿದ್ಧರಿಲ್ಲದ, ಅಧಿಕಾರ ದಾಹ ಮೆರೆಯುತ್ತಿರುವ ಶಾಸಕರುಗಳ ವರ್ತನೆಯೂ ಖಂಡನೀಯ. ಇಷ್ಟೊಂದು ಅಸಹ್ಯಕರ, ಹೇಸಿಗೆ ಹುಟ್ಟಿಸಿರುವ ಬೆಳವಣಿಗೆಗಳು ಜನರ ವಿಶ್ವಾಸವನ್ನೇ ಕಳೆದುಕೊಂಡ ಜನಪ್ರತಿನಿಧಿಗಳ ಹಿನ್ನೆಲೆಯಲ್ಲಿ ವಿಧಾನಸಭೆ ವಿಸರ್ಜಿಸಿ ಕೂಡಲೇ ಜನಾದೇಶ ಪಡೆಯಲು ಮಧ್ಯಂತರ ಚುನಾವಣೆಗೆ ಹೋಗಬೇಕು. ಬಾಯಲ್ಲಿ ಚುನಾವಣೆ ಎಂದೂ, ಹೇಗಾದರೂ ಉಳಿದ 19. ತಿಂಗಳು ಅಧಿಕಾರ ಅನುಭವಿಸಿಯೇ ಬಿಡಬೇಕೆಂಬ ಪ್ರವೃತ್ತಿ ಮತ್ತು ಪ್ರಯತ್ನಗಳನ್ನು ಜನತೆ ದಿಟ್ಟವಾಗಿ ವಿರೋಧಿಸಬೇಕು.

ಹೇಸಿಗೆಯ 'ಯುದ್ಧ'ಗಳು !



ವಿಶ್ವಾಸದ್ರೋಹವಾಯಿತೆಂದು
ಬೀದಿಗಿಳಿದು ಬಾಯಿ
ಬಡಿದುಕೊಳ್ಳುವ ಬಿಜೆಪಿಗೆ ಈರುಳ್ಳಿ,
ಟೊಮೊಟೋ ಬೆಳೆದು ಬೆಲೆ ಸಿಗದೇ
ಬೀದಿಪಾಲಾದ ರೈತರು
ಕಾಣಿಸುವುದಿಲ್ಲವೇ? ಆತ್ಮಹತ್ಯೆಗಳ
ಆರ್ತನಾದ ಕೇಳಿಸದೇ?

ತನಗೆ ಅಧಿಕಾರದಿಂದ ವಂಚಿಸಲಾಗಿದೆ ಮತ್ತು ವಿಶ್ವಾಸದ್ರೋಹ ಎಸಲಾಗಿದೆಯೆಂದು ಹುಯಿಲೆಬ್ಬಿಸಿ ರಾಜ್ಯದಾದ್ಯಂತ ಬಿಜೆಪಿ ಪಕ್ಷ ಪ್ರತಿಭಟನೆ-ಚೀರಾಟದಂತಹ ಕೃತ್ಯಗಳನ್ನು ನಡೆಸಿದೆ. ದೊಡ್ಡ ಗಂಟಲಲ್ಲಿ ಕೂಗಾಡಿ, ಟಿ.ವಿ. ಮತ್ತು ಪತ್ರಿಕೆಗಳಲ್ಲಿ ಸುದ್ದಿ ಪ್ರಸಾರಗೊಂಡು ಬಿಟ್ಟರೆ ತಮ್ಮ ಪರಮ ಪಾತಕಗಳು ಪವಿತ್ರ ಕೆಲಸಗಳಾಗಿ ಬಿಡಬಹುದೆಂಬ ಭ್ರಮೆ ಬಿಜೆಪಿಗೆ ಇರುವಂತಿದೆ. ಹಿಂದೊಮ್ಮೆ ಅಧಿಕಾರ ಮತ್ತೆ ಸಿಗಬಹುದು ಎಂಬ ವದಂತಿ ನಂಬಿಕೊಂಡೇ ಯಡಿಯೂರಪ್ಪ, ಸದಾನಂದಗೌಡ ಇತ್ಯಾದಿ ದೊಡ್ಡ ಗಂಟಲಿನ ನಾಯಕರು ತಾವೇ ಸಾರಿದ್ದ 'ಧರ್ಮಯುದ್ಧ'ದ ಯಾತ್ರೆಯನ್ನು ಮೊದಲ ಹೆಜ್ಜೆಯಲ್ಲೇ ಕೈಬಿಟ್ಟು ಬೆಂಗಳೂರಿಗೆ ಓಡಿ ಬಂದಿದ್ದನ್ನು ಯಾರೂ ಮರೆಯಲಾರರು. ಇವರ 'ಯುದ್ಧ' ಎಂಬುದು ಯಾವುದೇ ಅನೈತಿಕ ಮಾರ್ಗವಾದರೂ ಸರಿಯೇ ಅಧಿಕಾರ ಹೊಂದಿರಬೇಕು ಎಂಬುದೂ ಬಯಲಾಗಿದೆ. ಈ ಘಟನೆಯ ನಂತರವೂ ಅನೈತಿಕ ಮೈತ್ರಿ ಮಾಡಿಕೊಂಡು, ಬಳಿಕ ಸರ್ಕಾರ ಉರುಳಿದ ನಂತರ ಮತ್ತೆ 'ಯುದ್ಧ' ಸಾರಲು ಹೊರಟಿರುವುದು ನಾಚಿಕೆಗೇಡು.



ಈಗಾಗಲೇ ರಾಜ್ಯದಲ್ಲಿ ಧರಣಿ-ಮೆರವಣಿಗೆ, ದೇವೇಗೌಡ- ಕುಮಾರಸ್ವಾಮಿ ಪ್ರತಿಕೃತಿ ದಹನದಂತಹ ಕಾರ್ಯಕ್ರಮಗಳು ನಡೆದಿವೆ. ಪ್ರತಿಭಟಿಸಲು ಅವರಿಗೂ, ಬೇರೆಯವರೆಗೂ ಹಕ್ಕು ಇರಬಹುದು. ಆದರೆ ಪ್ರತಿಭಟನೆಗೆ ಒಂದು ಸೌಜನ್ಯದ ಪ್ರಜಾಸತ್ತಾತ್ಮಕ ಚೌಕಟ್ಟು ಇದೆ ಎಂಬುದನ್ನು 'ಚಿಡ್ಡಿ' ಪಡೆ ಮರೆತಿದೆ ಅಥವಾ ನಿರ್ಲಕ್ಷಿಸಿದೆ. ಮಾಜಿ ಪ್ರಧಾನಿ ದೇವೇಗೌಡರು, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಪ್ರತಿಕೃತಿಗೆ ಚಪ್ಪಲಿಯಿಂದ ಹೊಡೆಯುವುದು, ಅಸಹ್ಯಕರ ಕೀಳು ಅಭಿರುಚಿಯ ಭಾಷೆ ಬಳಸುವುದು. ಇದಕ್ಕೆ ಬಿಜೆಪಿ ನಾಯಕರೇ ಕುಮ್ಮಕ್ಕು ನೀಡುವುದು ಅವರ ಕು-ಸಂಸ್ಕೃತಿಯನ್ನಷ್ಟೇ ತೋರಿಸುತ್ತದೆ. ಇವು ಸಭ್ಯತೆ ಸೌಜನ್ಯ ಮೀರಿದ ವರ್ತನೆಗಳು. ಇಂತಹ ಪ್ರದರ್ಶನ ಮಾಡಲು ತಮಗೂ ಗೊತ್ತು ಎಂದು ಗೌಡರು ಹೇಳಿರುವುದು ಅಂತಹದಕ್ಕೆ ಮುಂದಾದರೆ ಆಗಬಹುದಾದ ಅನಾಹುತ ಅರಿಯಬೇಕು.

ಇಂತಹ ಬೀದಿ ದೊಂಬರಾಟಗಳಿಂದ ಈಗ ಉದ್ಭವಿಸಿರುವ ರಾಜಕೀಯ ಸೂಕ್ಷ್ಮ ಹಾಗೂ ಸಂದಿಗ್ಧತೆಯ ಪ್ರಶ್ನೆಗಳು ಮತ್ತು ಜನರು ಇದರಿಂದ ಕಲಿಯಬೇಕಾದ ಪಾಠಗಳನ್ನು ಮರೆಮಾಚಿ ಬಿಡುತ್ತವೆ. ಜನರನ್ನು ಭಾವೋದ್ವೇಕತೆಗೆ ಎಳೆಯುವುದರಿಂದ ಜನರು ವಸ್ತುಸ್ಥಿತಿಯನ್ನು ಅರಿತು, ರಾಜಕೀಯ ಶಿಕ್ಷಣ ಪಡೆಯಲು ಅಸಾಧ್ಯವಾಗಿಸಿ ಬಿಡುತ್ತದೆ.

ಮಾಟ-ಮಂತ್ರದಿಂದ ತಮ್ಮನ್ನು ಕೊಲ್ಲಬಹುದೆಂದು ಯಡಿಯೂರಪ್ಪ ಹೇಳಿದ್ದು ನಗೆಪಾಟಲಿಗೆ ಈಡು ಮಾಡಿದೆ. ಅಂಧಶ್ರದ್ಧೆ, ಮೂಢನಂಬಿಕೆಗಳನ್ನು ನಂಬುವುದು, ನಂಬಿಸುವುದೂ ಅಕ್ಷಮ್ಯ, ಸಂವಿಧಾನದ ವೈಜ್ಞಾನಿಕ ತಿಳುವಳಿಕೆಯ ಆಶಯಕ್ಕೆ ವಿರುದ್ಧವಾದುದು. ಬಿಜೆಪಿ ನಾಯಕರು ಈಗಿನ ತಮ್ಮ ಈ ವರಸೆಗಳನ್ನು ಬಿಡಬೇಕು. ಹಾಗೇ ಜೆಡಿ(ಎಸ್), ಕಾಂಗ್ರೆಸ್‌ಗಳೂ ಇಂತಹದ್ದನ್ನು ಆಶ್ರಯಿಸಲೂಬಾರದು. ಹಾಗೊಂದು ವೇಳೆ ಹರಿಯಬಿಟ್ಟರೆ ಅದು ಜನ ವಂಚನೆಯೇ ಆಗಿದೆ.

ಪ್ರಸಕ್ತವಾಗಿ ರಾಜ್ಯದಲ್ಲಿ ಹಲವು ಹೊಸ ಪ್ರಶ್ನೆಗಳನ್ನೆತ್ತಿ ಸೂಕ್ಷ್ಮಗೊಳಿಸಲಾಗುತ್ತಿದೆ. ಈಗಾಗಲೇ ರಾಮಸೇತು ಹೆಸರಿನಲ್ಲಿ ಸಂಘ ಪರಿವಾರ ಒಂದು ರಥಯಾತ್ರೆ ನಡೆಸುತ್ತಿದೆ. ಬಾಬಾಬುಡನ್‌ಗಿರಿ ವಿಷಯದಲ್ಲಿ ಮತ್ತೆ ಒಂದು ಸುತ್ತಿನ ಉದ್ರಿಕ್ತಗೊಳಿಸುವ ಯತ್ನ ನಡೆಸಿದ್ದು ಈಗ ಡಿಸೆಂಬರ್‌ನಲ್ಲಿ 'ದತ್ತ ಜಯಂತಿ' ಹೆಸರಿನಲ್ಲಿ ಸಿದ್ಧತೆಗಳೂ ನಡೆದಿವೆ. ಈಗ ಬಿಜೆಪಿ ಹುಟ್ಟುಹಾಕುವ ವಾತಾವರಣ ದ್ವೇಷ ಹೆಚ್ಚಿಸಬಹುದೇ ಹೊರತು ಶಾಂತಿ-ಸೌಹಾರ್ದತೆಯನ್ನಲ್ಲ. ಈ ಒಟ್ಟು ಸ್ಥಿತಿಗೆ ಬಿಜೆಪಿಯೂ ಪ್ರಮುಖ ಹೊಣೆ ಎಂಬುದನ್ನು ಮರೆಯಬೇಕಿಲ್ಲ.

ರಾಜ್ಯದಲ್ಲಿ ದಿನಕ್ಕೆ ಎರಡು-ಮೂರು ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಲೇ ಇದ್ದಾರೆ. ತೀರಾ ಇತ್ತೀಚಿಗೆ ಬೆಳೆದ ಈರುಳ್ಳಿಗೆ, ಟೊಮ್ಯಾಟೋಗೆ ಬೆಲೆಯೇ ಇಲ್ಲವೆಂದು ಬೀದಿಗೆ ಸುರಿದು ಹತಾಶೆಯಿಂದ ರೈತರು ಪ್ರತಿಭಟಿಸಿದ್ದಾರೆ. ರೈತರ ಹೆಸರಿನಲ್ಲೂ ಪ್ರಮಾಣ ವಚನ ಸ್ವೀಕರಿಸಿ ಮಣ್ಣಿನಮಗ ತಾನೂ ಎಂದು ಬೀಗಿದ ಯಡಿಯೂರಪ್ಪನವರಿಗೆ ಇವೆಲ್ಲಾ ಪ್ರಶ್ನೆಗಳು ಅಂತಾ ಅನ್ನಿಸುತ್ತಿಲ್ಲದಿರುವುದೇ ಅವರ ಜನವಿರೋಧಿ 'ಕಾಳಜಿ'ಗಳ ಹೂರಣ ಹೊರ-ಹಾಕುತ್ತಿವೆ. ಇಂತಹ ಸನ್ನಿವೇಶದಲ್ಲಿ ಜನ ಚಳುವಳಿ ವಿಶಾಲಗೊಳ್ಳುವ ಮೂಲಕ, ಚುರುಕುಗೊಂಡು ಕುರ್ಚಿಯ ಹುಸಿ ಯುದ್ಧಗಳನ್ನು ಹಿಮ್ಮೆಟ್ಟಿಸಬೇಕು.

ಬೆಂಗಳೂರು, ಮಂಗಳೂರು ರೈಲು ಬಿಜೆಪಿಯ ಹೋರಾಟದ ನಾಟಕ

ಬೆಂಗಳೂರು ಮಂಗಳೂರು ರೈಲು ಸಂಚಾರ ಆರಂಭಕ್ಕೆ ಮೀನಮೇಷ ಎಣಿಸುತ್ತಿರುವುದು ನಿಜಕ್ಕೂ ವಿಷಾದನೀಯ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ನಿಯೋಗವೊಂದು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆಯವರ ನೇತೃತ್ವದಲ್ಲಿ ರೈಲ್ವೆಗೆ ಸಂಬಂಧಪಟ್ಟ ಸಂಸತ್ತಿನ ಸ್ಥಾಯಿ ಸಮಿತಿ ಅಧ್ಯಕ್ಷರಾದ ಬಸುದೇವ ಆಚಾರ್ಯರವರನ್ನು 18.11.07ರಂದು ಭೇಟಿಮಾಡಿತು. ಈ ಸಂದರ್ಭದಲ್ಲಿ ಮಾತನಾಡಿದ ಬಸುದೇವ ಆಚಾರ್ಯರವರು ರೈಲ್ವೆ ಸಚಿವಾಲಯದ ಮೇಲೆ ಈಗಾಗಲೇ ಸಾಕಷ್ಟು ಒತ್ತಡ ಹೇರಲಾಗಿದ್ದು, ತನಗೆ ತಿಳಿದ ಮಾಹಿತಿ ಪ್ರಕಾರ ಸಂಸತ್ತಿನ ಅಧಿವೇಶನ ಮುಗಿದ ಕೂಡಲೇ ಬೆಂಗಳೂರು, ಮಂಗಳೂರು ರೈಲು ಉದ್ಘಾಟನೆ ಸಂಭವವಿದೆಯೆಂದು ತಿಳಿಸಿದರು.

ಬಿಜೆಪಿಯ ನಾಟಕ :

ಈ ಸಂದರ್ಭದಲ್ಲಿ ಬಿಜೆಪಿಯ ಹೋರಾಟದ ನಾಟಕ ಮಾತ್ರ ತಾರಕಕ್ಕೇರಿದೆ. 1998ರಿಂದ 2004ರವರೆಗೆ ಬಿಜೆಪಿ ನೇತೃತ್ವದ ಎನ್.ಡಿ.ಎ ಸರಕಾರ ಕೇಂದ್ರದಲ್ಲಿತ್ತು, ತಮ್ಮವರೇ ಕೇಂದ್ರದಲ್ಲಿ ಮಂತ್ರಿಗಳಾಗಿದ್ದರು ಎನ್ನುವುದನ್ನು ಅವರು ಮರೆತಿದ್ದಾರೆ. ಕರ್ನಾಟಕದವರೇ ಆದರೆ ಬಿಜೆಪಿಯ ಸಂಸತ್ ಸದಸ್ಯ ಬಸವರಾಜ್ ಪಾಟೀಲ್ ಯತ್ನಾಳ್ ರೈಲ್ವೇ ರಾಜ್ಯ ಸಚಿವರಾಗಿದ್ದರು. ಅವರು ಹಳಿ ಇಲ್ಲದ 'ರೈಲು' ಬಿಟ್ಟರೆ ಹೊರತು ನಿಜವಾಗಿಯೂ ರೈಲು ಓಡಿಸಲು ಸಹಾಯ ಮಾಡಲಿಲ್ಲ.

ಬಿಜೆಪಿಯ ಇನ್ನೊಬ್ಬ ಸಂಸತ್ ಸದಸ್ಯ ಮೈಸೂರಿನ ವಿಜಯಶಂಕರ್ ರೈಲ್ವೆ ಸ್ಥಾಯಿ ಸಮಿತಿಯ ಸದಸ್ಯರೂ ಆಗಿದ್ದಾರೆ. ಆದರೆ ಬಲ್ಲ ಮೂಲಗಳ ಪ್ರಕಾರ ಅವರು ಕೂಡಾ ಬೆಂಗಳೂರು ಮಂಗಳೂರು ರೈಲು ಆರಂಭಿಸುವ ಬಗ್ಗೆ ತುಟಿ ಪಿಟುಕ್ಕೆನ್ನಲಿಲ್ಲ.

ಅಷ್ಟೆಲ್ಲಾ ಯಾಕೆ? 1998ರಲ್ಲಿ ಹುಬ್ಬಳ್ಳಿ, ಅಂಕೋಲಾ ರೈಲುಮಾರ್ಗಕ್ಕೆ ಅಡಿಗಲ್ಲು ಹಾಕಿದ್ದೇ ಅಂದಿನ ಪ್ರಧಾನಿ

ಪುಟ 7 ಕ್ಕೆ

ನಂದಿಗ್ರಾಮ : ನಂದದ ವಿಷ ಪ್ರಚಾರ

ನಂದಿಗ್ರಾಮ ಎಂಬ ವಿಷಯವನ್ನು ಯಾವ ಯಾವ ರೀತಿಯಲ್ಲೆಲ್ಲಾ ಬೆಳೆಸಲಾಗುತ್ತಿದೆ, ಬಿಂಬಿಸಲಾಗುತ್ತಿದೆ ಎಂಬುದಕ್ಕೆ ಕಳೆದ ಕೆಲವು ದಿನಗಳ ಮಾಧ್ಯಮಗಳ ವರದಿಗಳು ಸಾಕ್ಷಿಯಾದವು.

3500 ಜನ ಸಿಪಿಐ(ಎಂ) ಬೆಂಬಲಿಗರು ಗ್ರಾಮ ಬಿಟ್ಟು 11 ತಿಂಗಳು ನಿರಾಶ್ರಿತ ಶಿಬಿರದಲ್ಲಿ ವಾಸ ಇದ್ದಾಗ ಅವರ ಬಗ್ಗೆ ಬಹುತೇಕ ಕಣ್ಣು ಮುಚ್ಚಿಕೊಂಡಿದ್ದ ಮಾಧ್ಯಮಗಳು ಈಗ ಅವರು ವಾಪಸ್ ಮರಳುವಾಗ ಬೊಬ್ಬೆ ಹಾಕುತ್ತಿದ್ದಾರೆ. 27 ಜನ ಸಿಪಿಐ(ಎಂ) ಕಾರ್ಯಕರ್ತರು ಮುಖಂಡರು,



ನಂದಿಗ್ರಾಮದಿಂದ ಹೊರದೂಡಲ್ಪಟ್ಟ ಮುಗ್ಧ ಮಕ್ಕಳು - ನಿರಾಶ್ರಿತರ ಶಿಬಿರದಲ್ಲಿ

ನಕ್ಸಲ್, ತೃಣಮೂಲ ಇತರೆ ಗೂಂಡಾ ದಾಳಿಗೆ, ಬಲಿಯಾದ ಬಗ್ಗೆ ಬಾಯೇ ಬಿಡದ ಮಾಧ್ಯಮಗಳು ಸರ್ಕಾರದ ಬಗೆಗೆ, ಸಿಪಿಐ(ಎಂ) ಬಗೆಗೆ ವಿಷ ಪ್ರಚಾರವನ್ನು ನಡೆಸುತ್ತಿವೆ.

ಪಶ್ಚಿಮ ಬಂಗಾಳ ಸರ್ಕಾರ ಕೇಳಿಕೊಂಡಂತೆ ಇನ್ನು ಬೇಗ ಕೇಂದ್ರ ಮೀಸಲು ಪಡೆಯನ್ನು ಕೇಂದ್ರ ಸರ್ಕಾರ ಒದಗಿಸದಿದ್ದರೆ ಈಗ ಆಗಿರುವ ಕೆಲವು ಹಿಂಸಾಚಾರಗಳನ್ನು ತಪ್ಪಿಸಬಹುದಿತ್ತು. ಅದಕ್ಕೂ ರಾಜ್ಯ ಸರ್ಕಾರವೇ ಹೊಣೆಯೇ?!

ನಂದಿಗ್ರಾಮದಲ್ಲಿ ಕೇಂದ್ರ ಮೀಸಲು ಪಡೆ ನಿಯೋಜನೆಗೆ ಅಡ್ಡಿ ಮಾಡಿದವರು ಪ್ರಿಯರಂಜನ್ ದಾಸ್ ಮುನ್ಷಿಯಂತಹ ಕಾಂಗ್ರೆಸ್ ಮುಖಂಡರು. ಈಗ ಕಾಂಗ್ರೆಸ್ ಹಿಂಸೆ, ದಬ್ಬಾಳಿಕೆ ಅಂತ ಸಿಪಿಐ(ಎಂ) ಮೇಲೆ ಹೊಣೆ ಹೊರಿಸಿದರೆ ಹೇಗೆ?

ಇನ್ನು ಬಿಜೆಪಿ ಕತೆ ಹೇಳುವುದೇ ಬೇಡ. ಬುದ್ಧದೇವರನ್ನು ಹಿಟ್ಲರ್ ಎಂದೆಲ್ಲಾ ಕರೆದು, ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವನ್ನು ವಜಾ ಮಾಡಬೇಕೆಂದು ಒತ್ತಾಯಿಸಿದ್ದಾರೆ. ಇನ್ನು ಕೆಲವರು ಮಹನೀಯರು ನಂದಿಗ್ರಾಮ, ಗುಜರಾತ್ ಗಲಭೆ ಒಂದೇ ಎಂದೂ ಬಿಟ್ಟರು.


ಪಶ್ಚಿಮ ಬಂಗಾಳದಲ್ಲಿ ಒಟ್ಟು 341 ಬ್ಲಾಕ್‌ಗಳಿವೆ. ಅದರಲ್ಲಿ ಉದ್ವಿಗ್ನಗೊಂಡಿರುವುದು ಕೇವಲ ಒಂದು ಬ್ಲಾಕ್ ಮತ್ತು ಮತ್ತೊಂದು ಅರ್ಧ. ಇಡೀ ಗುಜರಾತ್ ರಾಜ್ಯ ಹತ್ತಿ ಉರಿಯುತ್ತಿದ್ದಾಗ ಸರ್ಕಾರವೇ ದಹನ ನಡೆಸುತ್ತಿದ್ದಾಗ ಈ ಜನ ಅಲ್ಲಿನ ಸರ್ಕಾರದ ವಜಾ ಬೇಡಿಕೆಯನ್ನು ಸಹಿಸಲಿಲ್ಲ.

ಮುಸ್ಲಿಂ ಮೂಲಭೂತವಾದಿಗಳು ಬಾಂಗ್ಲಾ ಮೂಲದ ಲೇಖಕಿ ತಸ್ಲಿಮಾ ನಸ್ರಿನ್ ವೀಸಾ ರದ್ದು ಮಾಡಿ, ಮುಂತಾದ ಬೇಡಿಕೆ ಇಟ್ಟು ಕೋಲ್ಕತ್ತಾದಲ್ಲಿ ರಸ್ತೆ ತಡೆ, ಗಲಭೆ ನಡೆಸಿದರೆ ಅದಕ್ಕೂ ನಂದಿಗ್ರಾಮದ ವಿಷಯವೇ ಮುಖ್ಯ ಕಾರಣ ಎಂಬಂತೆ ಮಾಧ್ಯಮಗಳು ಬಿಂಬಿಸುತ್ತವೆ. ಮತ್ತೆ ಒಟ್ಟಾರೆ ಹಿಂಸೆಗೆ ಮಾವೋವಾದಿಗಳ ರಕ್ತದಾಹ, ಸಿಪಿಐ(ಎಂ) ವಿರೋಧಿ ಹಗೆತನ ಪ್ರಧಾನ ಕಾರಣ ಎಂಬ ಬಗ್ಗೆ ಬಹುತೇಕ ಮಾಧ್ಯಮಗಳು 'ಬೆಳಕನ್ನೇ ಚೆಲ್ಲು'ವುದಿಲ್ಲ.

ನೋಮ್ ಚಾಮ್ಸ್ಕಿ ಸೇರಿದಂತೆ ಜಗತ್ತಿನ ದೊಡ್ಡ ಸಂಖ್ಯೆಯ ಗಣ್ಯರು ನಂದಿಗ್ರಾಮ ಘಟನೆಗಳ ಬಗೆಗೆ ಬರೆದ ಪತ್ರವೊಂದು 22 ನವೆಂಬರ್ 2007 ರಂದು 'ದಿ ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದರ ಯಥಾವತ್ ರೂಪವನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ.

ಕೋಲ್ಕತ್ತಾ ಬಗೆಗೆ ಅಲ್ಲಿಯ ಜನರ ಬಗೆಗೆ ತಸ್ಲಿಮಾ ನಸ್ರಿನ್ ಹೇಳಿರುವ ಮಾತುಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದೆ. ಪ್ರಾಮಾಣಿಕರಾದವರು ನಿಜ ಏನೆಂದು ಕಂಡುಕೊಳ್ಳಲು ಇಂಥ ಒಂದು ಮಾಹಿತಿ, ದೃಷ್ಟಿ ಕಿಂಚಿತ್ತಾದರೂ ಸಹಾಯ ಮಾಡಬಹುದು.

ನೋಮ್ ಚಾಮ್ಸ್ಕಿ ಮತ್ತು ಇತರ ಖ್ಯಾತ ಲೇಖಕರ ಪತ್ರ



ಪಶ್ಚಿಮ ಬಂಗಾಳದ ಸ್ನೇಹಿತರಿಗೆ,

ಒಂದೇ ರೀತಿಯ ವಿಚಾರಧಾರೆಗಳನ್ನು ಹೊಂದಿರುವವರ ನಡುವೆ ಒಂದುಗೂಡಲಾರದಂತಹ ಕಂದರವು ಉಂಟಾಗಿರುವಂತೆ ಕಾಣುತ್ತಿರುವುದರ ಬಗೆಗೆ ನಮಗೆ ಆತಂಕವಾಗಿದೆ. ಪಶ್ಚಿಮ ಬಂಗಾಳದಿಂದ ನಮಗೆ ತಲುಪಿದ ಸುದ್ದಿಯಿಂದ ಪಶ್ಚಿಮ ಬಂಗಾಳಕ್ಕೆ ನಾವು ಭೇಟಿ ನೀಡಿದಾಗ ಮೂಡಿದ್ದ ಆಶಾವಾದಕ್ಕೆ ಧಕ್ಕೆ ಬಂದಂತಾಗಿದೆ. ಇದು ನಮ್ಮನ್ನು ನಿರಾಶೆಗೊಳಿಸುತ್ತದೆ.


ನಾವು ಎರಡೂ ಕಡೆಯ ಜನರಿಂದ ಬರುತ್ತಿರುವ ವರದಿಗಳನ್ನು ಕೇಳುತ್ತಿದ್ದೇವೆ. ಮತ್ತು ಘಟನೆಗಳ ವಾಸ್ತವವನ್ನು ಮತ್ತು ಅದರ ಚಲನಾತ್ಮಕತೆಯನ್ನು ಗ್ರಹಿಸಲು ಪ್ರಯತ್ನಿಸುತ್ತಿದ್ದೇವೆ. ನಾವು ಬಹುದೂರದಲ್ಲಿರುವ ಕಾರಣದಿಂದ ಈ ವಿಷಯದಲ್ಲಿ ಖಚಿತವಾಗಿ ಹೀಗೆ ಎಂದು ಹೇಳುವುದಕ್ಕೆ ತೊಂದರೆಗಳಿವೆ.

ಪಶ್ಚಿಮ ಬಂಗಾಳದಲ್ಲಿ ಭೂಸುಧಾರಣೆ, ಅಧಿಕಾರ ವಿಕೇಂದ್ರೀಕರಣದ ಪಂಚಾಯತಿ ವ್ಯವಸ್ಥೆ ಮುಂತಾದ ಬಹುಮುಖ್ಯ ಪ್ರಯೋಗಗಳನ್ನೇನು ಕೈಗೊಳ್ಳಲಾಗಿದೆ ಅವುಗಳ ಸಾಧನೆಯನ್ನು ಕೆಲವು ವಿಷಯಗಳಲ್ಲಿನ ಭಿನ್ನಾಭಿಪ್ರಾಯಗಳಿಂದಾಗಿ ನಾಶವಾಗಲು ಪಶ್ಚಿಮ ಬಂಗಾಳದ ಜನತೆ ಬಿಡುವುದಿಲ್ಲ ಎಂಬ ವಿಶ್ವಾಸ ನಮಗಿದೆ.

ಬಲವಂತದಿಂದ ಹೊರಗಟ್ಟಲಾದ ರೈತರ ಪರವಾಗಿ ನಾವು ನಮ್ಮ ಸಂಪೂರ್ಣ ಸೌಹಾರ್ದತೆಯನ್ನು ತೋರುತ್ತೇವೆ. ಮತ್ತು ನಂದಿಗ್ರಾಮದ ಸುತ್ತಮುತ್ತಲಿನಲ್ಲಿ ಕೈಗಾರಿಕಾ ಸಮುಚ್ಚಯವನ್ನು ಸ್ಥಾಪಿಸುವುದಿಲ್ಲ ಎಂದು ಪಶ್ಚಿಮ ಬಂಗಾಳದ ಸರ್ಕಾರ ಭರವಸೆ ನೀಡಿದೆ ಎಂದು ನಾವು ಅರ್ಥ ಮಾಡಿಕೊಂಡಿದ್ದೇವೆ. ಹಿಂಸಾಚಾರಗಳ ಮೂಲಕ ಹೊರ ದಬ್ಬಲ್ಪಟ್ಟವರನ್ನು ಈಗ ಯಾವುದೇ ಹಗೆತನವಿಲ್ಲದೇ ಗ್ರಾಮಕ್ಕೆ ಮರಳಲು ಅವಕಾಶ ನೀಡಲಾಗುತ್ತಿದೆ ಎಂದು ತಿಳಿದುಕೊಂಡಿದ್ದೇವೆ. ಈಗ ಸಾಮರಸ್ಯ ಮೂಡಿಸುವ ಸಂಬಂಧ ಮಾತುಕತೆಗಳು ನಡೆದಿವೆ ಎಂದೂ ನಾವು ತಿಳಿದಿದ್ದೇವೆ.

ಜಗತ್ತಿನ ಇಂದಿನ ಬಲಾಬಲಗಳ ಸ್ಥಿತಿಯು ಎಡಶಕ್ತಿಗಳ ಐಕ್ಯತೆಯನ್ನು ಛಿದ್ರಗೊಳಿಸುವಷ್ಟು ಬಲವಾಗಿದೆ. ಇರಾಕ್‌ನಂತಹ ಒಂದು ದೇಶವನ್ನು ನಾಶ ಮಾಡಿದ ಜಾಗತಿಕ ಶಕ್ತಿಯನ್ನು ನಾವು ಇಂದು ಎದುರಿಸಬೇಕಾಗಿದೆ. ಈಗ ಈ ಶಕ್ತಿಯು ಇರಾನ್‌ನ್ನು ಸಹ ಬೆದರಿಸುತ್ತಿದೆ. ವಿಭಜನೆಗೆ ಕಾರಣವಾಗಿದ್ದ ಅಂಶಗಳು ಇಂದು ಇಲ್ಲವಾಗಿರುವುದರಿಂದ ಇಂದು ಎಡಶಕ್ತಿಗಳ ವಿಭಜನೆಗೆ ಕಾರಣವಿಲ್ಲ ಎಂದು ನಾವು ಭಾವಿಸುತ್ತೇವೆ.

ಹೆದರಬೇಡಿ, ಇದು ದೇವೇಗೌಡರ ಪತ್ರ ಅಲ್ಲ



ಸನ್ಮಾನ್ಯ ಯಡ್ಯೂರಪ್ಪನವರೇ, ನಿಮಗೆ ಅಭಿನಂದನೆಗಳು. ಹೆದರಬೇಡಿ, ಇದು ದೇವೇಗೌಡರ ಪತ್ರ ಅಲ್ಲ. ನೀವು ಕರ್ನಾಟಕದಲ್ಲಿ ಅನೇಕ ಇತಿಹಾಸಗಳನ್ನು ನಿರ್ಮಿಸಿ ಇತಿಹಾಸ ಪುರುಷರಾಗಿ ಬಿಟ್ಟಿರಿ. ಸಾಡೆಸಾತ್ ದಿನಗಳ ಮುಖ್ಯಮಂತ್ರಿಯಾದರೂ ಇನ್ನು ಯಾರೂ ನಿಮ್ಮಿಂದ ಮಾಜಿ ಮುಖ್ಯಮಂತ್ರಿ ಪದವಿ ಕಿತ್ತುಕೊಳ್ಳಲಾಗುವುದಿಲ್ಲ. ನಿಮ್ಮಿಂದ ಕೆಲವು ಗಾದೆಗಳೂ ಬದಲಾಗಬೇಕಾಯಿತು. 'ಕೈಗೆ ಬಂದ ತುತ್ತು ಬಾಯಿಗೆ ಇಲ್ಲ' ಅಂತಾರೆ. ನಿಮ್ಮನ್ನು ನೋಡಿ 'ಬಾಯಿಗೆ ಬಂದ ತುತ್ತು ಗಂಟಲಿಗಿಳಿಯಲಿಲ್ಲ' ಎನ್ನುವಂತಾಗಿದೆ. ನೀವೇನೋ ಮಾಡೋ ಪ್ರಯತ್ನವಲ್ಲ ಚೆನ್ನಾಗಿಯೇ ಮಾಡಿದಿರಿ. ಆದರೆ ಸಚಿನ್ 90 ರಿಂದ 99ರಲ್ಲಿ ಔಟಾಗುವ ಹಾಗೆ ಸ್ವಲ್ಪದರಲ್ಲಿ ಎಡವಿದರು. ಆದರೂ ತೆಂಡೂಲ್ಕರ್ ಥರ ದಾಖಲೆ ಮೇಲೆ ದಾಖಲೆ ಸ್ಥಾಪಿಸಿದ್ದೀರಿ.

ವಿಧಾನಸೌಧದಲ್ಲಿ ಪುಳಿಚಾರು ದೇವರಿಗೆ ಪೂಜೆ, ಪುನಸ್ಕಾರ, ಹೋಮ ಮಾಡಿದ್ರೆ ಸಾಕೆ? ಕುರಿ, ಕೋಳಿ, ಕೋಣ ಇವುಗಳನ್ನು ಬಲಿಕೊಡಬಾರದಿತ್ತೇ? ಆ ನಾನ್ ವೆಜ್ ಪ್ರಿಯ ದೇವರುಗಳನ್ನು ಕಡೆಗಣಿಸಿದ್ದು ಸರಿಯೇ? ಸೀದಾ ಮುಖ್ಯಮಂತ್ರಿಯ ಆದೇ ಕೊಠಡಿಗೆ ಓಡಿಹೋಗಿ ಕುರ್ಚಿಯಲ್ಲಿ ಕೂತುಬಿಟ್ಟಿರಿ. ತಪ್ಪಲ್ಲವೇ? ಆ ಕೊಠಡಿಯ ಸಂಖ್ಯೆ ನಿಮಗೆ ಸರಿ ಹೋಗುತ್ತದೋ ಇಲ್ಲವೋ ವಿಚಾರಿಸಬಾರದಿತ್ತೇ? ಆ ಕೊಠಡಿಯ ವಾಸ್ತು, ವಿಧಾನಸೌಧ ವಾಸ್ತು ಸರಿಪಡಿಸಿ ಹೋಗಬಾರದಿತ್ತೇ?

ನಿಮಗೆ ಮುಖ್ಯಮಂತ್ರಿ ಯಾಗುವ ಯೋಗವಿಲ್ಲ ಎಂದು ಹೇಳಿದ ಜ್ಯೋತಿಷಿ ಮನೆ ಮುಂದೆ ನಿಮ್ಮ ಹಿಂಬಾಲಕರು ಧರಣಿ ಮಾಡಿದ್ದು ಸರಿಯೇ? ಎಲ್ಲಾ ಜ್ಯೋತಿಷಿಗಳ, ಸ್ವಾಮಿಗಳ ದೇವರುಗಳ ಬಳಿಗೆ ಹೋಗಿ ಅಡ್ಡ ಬಿದ್ದಿದ್ರಿ. ಈ ಒಬ್ಬ ಜ್ಯೋತಿಷಿಯನ್ನು ಎದುರು ಹಾಕಿಕೊಂಡಿದ್ದೇ ತಪ್ಪಾಯ್ತು. ನೀವು ಅವರ ಬಳಿಗೂ ಹೋಗಿ ಸಾಷ್ಟಾಂಗ ಬಿದ್ದಿದ್ದರೆ ಅವರು ನಿಮ್ಮ ಜಾತಕವನ್ನು ಬದಲಾಯಿಸಿ ಕೊಡುತ್ತಿದ್ದರೋ ಏನೋ? ಹೆಸರನ್ನು ಬದಲಾಯಿಸಿಕೊಂಡಿದ್ದಕ್ಕೆ ಮುಖ್ಯಮಂತ್ರಿಯಾದಿರಿ? ಇನ್ನೂ ಸ್ವಲ್ಪ ಸರಿಯಾಗಿ ಎಲ್ಲಾ ಅಕ್ಷರಗಳಿಗೂ ಒತ್ತುಕೊಟ್ಟು ಯಡ್ಯೂರಪ್ಪ ಅಂತ ಮಾಡ್ಕೊಂಡಿದ್ರೆ ಇನ್ನೂ ಒಂದು 3-4 ದಿನ ಹೆಚ್ಚಿಗೆ ಮುಖ್ಯಮಂತ್ರಿಯಾಗ ಬಹುದಾಗಿತ್ತೇನೋ? ಹಾಗಂತ ಆ ಜ್ಯೋತಿಷಿಯ ಮನೆಯ ಮುಂದೆಯೂ ಧರಣಿ ಮಾಡದಂತೆ ನಿಮ್ಮ ಹಿಂಬಾಲಕರಿಗೆ ಹೇಳಿ. ಯಾರಿಗೆ ಗೊತ್ತು ಯಾರ್ಯಾರಿಗೆ ಏನೇನು ಶಕ್ತಿ ಇದೆಯೋ ಏನೋ?

ನೀವೇ ಜಗತ್ ಜಾಹೀರು ಮಾಡಿದ ಹಾಗೆ ದೇವೇಗೌಡರ ಮಾಟ ಮಂತ್ರದ ಮುಂದೆ ನಿಮ್ಮ ಹೋಮ, ಪೂಜೆ, ರಾಮಸೇತು, ದತ್ತ ವ್ರತಗಳು ಎಲ್ಲವೂ ನಿಶ್ಯಕ್ತ ಆದವಲ್ಲ? ಇನ್ನು ನೀವೂ ಮಾಟಗಾರ, ಮಾಟಗಾತಿ, ಮೋಹಿನಿಯರನ್ನು ಮೊರೆ ಹೋಗಿ. ಶಾಕಿಣಿ ಡಾಕಿಣಿಯರು ಎಲ್ಲಿದ್ದಾರೋ ಒಂಚೂರು ಹುಡುಕಿ ಅವರನ್ನೂ ಒಲಿಸಿಕೊಳ್ಳಿ.

ಇರುಳು ಕಂಡ ಬಾವೀಲಿ ಹಗಲು ಬಿದ್ದಂತೆ ಅನ್ನೋ ಗಾದೇನೂ ನಿಮ್ಮಿಂದ ಸ್ವಲ್ಪ ಬದಲಾಗಬೇಕಾಯಿತು. 'ಇರುಳೂ ಕಂಡ ಬಾವೀಲಿ ಹಗಲಲ್ಲಿ ಎರಡೆರಡು ಬಾರಿ ನೆಗೆದು ನೆಗೆದು ಬಿದ್ದಂತೆ'ಎಂದು. ಆಗಿದ್ದಾಯ್ತು ಇನ್ನಾದ್ರೂ ಎಚ್ಚರಿಕೆಯಿಂದ ಹೆಜ್ಜೆ ಇಡಿ. ಮುಂದಿನ ಚುನಾವಣೆಯಲ್ಲಿ ಎಲ್ಲಾ ರೀತಿಯ ಜ್ಯೋತಿಷಿಗಳಿಗೂ, ನಿಮ್ಮ ಹಿಂಬಾಲಕರೋ ಮುಂಬಾಲಕರೋ ಆದ ನಿಮ್ಮ ಮಠಗಳ ಸ್ವಾಮೀಜಿಗಳಿಗೆ, ದೇವಸ್ಥಾನಗಳ ಹೋಮ, ಹವನ, ಪೂಜೆ ಪುನಸ್ಕಾರಗಳ ಪೂಜಾರಿಗಳಿಗೆ, ಮಾಟ ಮಂತ್ರದ ಮಾಟಗಾತಿ, ಶಾಕಿಣಿ, ಡಾಕಿಣಿಯರಿಗೆ ತಪ್ಪದೇ ನಿಮ್ಮ ಪಕ್ಷದ ಟಿಕೆಟ್ ನೀಡಿ. ನೀವು ಬಜೆಟ್‌ನಲ್ಲಿ ಹಂಚಿದ ದುಡ್ಡು ಅವರ ಚುನಾವಣಾ ಖರ್ಚಿಗಾಗುತ್ತೆ. ಯಾರ್ಯಾರನ್ನೋ ತಮ್ಮ ತಮ್ಮ ಶಕ್ತಿ, ಭಕ್ತಿ ಯುಕ್ತಿಗಳಿಂದ ಗೆಲ್ಲಿಸುವ, ಸೋಲಿಸುವ, ಈ ಶಕ್ತಿಶಾಲಿಗಳು ತಾವೇ ಖುದ್ದಾಗಿ ಚುನಾವಣೆಯಲ್ಲಿ ನಿಂತರೆ ಅವರಿಗೆ ಗೆಲುವು ಖಚಿತವಲ್ಲವೇ? ಅವರುಗಳ ಆಸ್ಥಾನದಲ್ಲಿ ನೀವೇ ಅಧಿಪತಿ! ಎಷ್ಟು ಚಂದವಲ್ಲವೇ? ಇಂಥ ಅದ್ಭುತ ಐಡಿಯಾ ಕೊಟ್ಟ ನನ್ನನ್ನು ಕಡೆಗಣಿಸಬೇಡಿ.

ಇಂತಿ ನಿಮ್ಮ ಹಿತೈಷಿ

ಶ್ರೀ

ಕರ್ನಾಟಕ ರಾಜಕೀಯ

ಕರ್ನಾಟಕದ ರಾಜಕಾರಣದಲ್ಲೀಗ ತಲ್ಲಣ, ತಳಮಳ, ತಿರುವುಗಳು. ಕರ್ನಾಟಕದ ರಾಜಕಾರಣ ಸಾಗಿಬಂದ ಹಾದಿ ಏನು? ಇಂದಿನ ಈ ಪರಿಸ್ಥಿತಿ ಏಕೆ? ಈ ಹಂತದ ರಾಜ್ಯದ ಜನಪರ ಚಳುವಳಿಗಳ ಮೇಲಿರುವ ಹೊಣೆಗಾರಿಕೆ ಏನು ಎಂದು ವಿವರಿಸಿದ್ದಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್

ಜನಪರ ಚಳುವಳಿಗಳ ಹೊಣೆಗಾರಿಕೆ

ಜಿ.ಎನ್.ನಾಗರಾಜ್

ಬಿಜೆಪಿಗೆ ಮುಖ್ಯಮಂತ್ರಿ ಸ್ಥಾನ ವರ್ಗಾಯಿಸುವುದೊಂದೆ ಎಲ್ಲ ಮೌಲ್ಯಗಳ ಅಂತಿಮ ಪರೀಕ್ಷೆ 5 ಕೋಟಿ ಜನರ ಏಕೈಕ ಸಮಸ್ಯೆ ಎಂಬಂತೆ ಬಾಲಂಗೋಚಿ ಪತ್ರಕರ್ತರು, ರಾಜಕೀಯ ವಿಶ್ಲೇಷಕರು ಬಿಂಬಿಸಿದರು. ಆದರೆ ಇವೆಲ್ಲ ಮೇಲು ತೋರಿಕೆಯ ದೃಶ್ಯಗಳು. ಇಂದಿನ ರಾಜಕಾರಣದ ಗೊಂದಲಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಈ ಘಟನೆಗಳನ್ನು ಅವುಗಳ ಹಿನ್ನೆಲೆಯ ಪರಿಪ್ರೇಕ್ಷದಲ್ಲಿರಿಸಿ ಅವುಗಳಿಂದ ಒಂದು ದೂರವನ್ನು ಸಾಧಿಸಿ ಪರಿವೀಕ್ಷಿಸಬೇಕು. ಈ ಎಲ್ಲಾ ಬೆಳವಣಿಗೆಗಳೆಂಬ ನೊರೆಬುರುಗುಗಳ ಹಿಂದೆ ಅಂತರ್ಗಾಮಿಯಾಗಿರುವ ಸಾಮಾಜಿಕ ಚಲನೆಯ ನಿರಂತರ ವಾಹಿನಿಯ ಇಂದಿನ ತುಣುಕಾಗಿ ನೋಡಬೇಕು.

ಸ್ವಾತಂತ್ರ್ಯ ಬಂದಂದಿನಿಂದ ಇಂದಿನವರೆಗೆ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಮೇಲ್ನೋಟಕ್ಕೆ ಮೂರು ಘಟ್ಟಗಳನ್ನು ಕಾಣಬಹುದು.

1. 1947-83-ಒಂದೇ ಪಕ್ಷದ ನಿರಂತರ ಆಡಳಿತ
2. 83-2004- ಎರಡು ಪಕ್ಷಗಳ ಅದಲು-ಬದಲು ಆದರೆ ಏಕಪಕ್ಷ ಆಡಳಿತ
3. 2004ರಿಂದ-ಯಾವುದೇ ಪಕ್ಷಕ್ಕೆ ಆಡಳಿತದ ಅವಕಾಶ ನಿರಾಕರಣೆ

ಈ ಬೆಳವಣಿಗೆಯನ್ನು ಗಮನಿಸಿದರೆ ಕರ್ನಾಟಕದ ರಾಜಕೀಯದ ಚಾಲಕಶಕ್ತಿ ಜನರೇ ಎಂಬುದು ಸ್ಪಷ್ಟವಾಗುತ್ತದೆ. ಕಾಂಗ್ರೆಸ್ ಪಕ್ಷದ ಆಡಳಿತದ ಬಗ್ಗೆ ಬೆಳೆಯುತ್ತಿದ್ದ ಜನರ ಅತೃಪ್ತಿ 69ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸ್ವಲ್ಪಮಟ್ಟಿಗೆ ಮಾರ್ಪಡಿಸುವುದಕ್ಕೆ ಕಾರಣವಾಯಿತು. ಆದರೂ ಬೆಳೆಯುತ್ತಲೇ ಹೋದ ಜನರ ಅತೃಪ್ತಿ 1980ರಿಂದ 83ರವರೆಗೆ ಅನೇಕ ಚಳುವಳಿಗಳಲ್ಲಿ ಸ್ಫೋಟಿಸಿ ಒಂದೇ ಪಕ್ಷದ ನಿರಂತರ ಆಳ್ವಿಕೆಯನ್ನು ಕೊನೆಗಾಣಿಸಿತು. ನಂತರ ಎರಡು ಪಕ್ಷಗಳ ನಡುವೆ ಆಡಳಿತಕ್ಕಾಗಿ ಸ್ಪರ್ಧೆಯನ್ನು ಏರ್ಪಡಿಸಿತು. ಕೊನೆಗೆ ಎರಡೂ ಪಕ್ಷಗಳ ಬಗೆಗೂ ಜನರಲ್ಲಿ ತೀವ್ರ ಅಸಹನೆ ಬೆಳೆದು ಎರಡು ಪಕ್ಷಗಳ ಮತ್ತು ರಾಜ್ಯವನ್ನು ಕೋಮುದಂಗೆಯ ಬೆಂಕಿಗೆ ದೂಡಬಯಸುವ ಬಿಜೆಪಿಯನ್ನು ನೆಚ್ಚಲು ಸಾಧ್ಯವಿಲ್ಲ ಎಂದು ಜನತೆ ಘೋಷಿಸಿದೆ. ಹೀಗೆ ಯಾರನ್ನು ನೆಚ್ಚಲಾರದ ಜನತೆಯ ಸ್ಥಿತಿಯೇ ಮೂರು ಪಕ್ಷಗಳಿಗೂ ಅಧಿಕಾರವನ್ನು ವಂಚಿಸಿದೆ. ಅದೇ ಸಮಯದಲ್ಲಿ ಮೂರುಪಕ್ಷಗಳು ಜನತೆಯ





ಈ ತೀರ್ಮಾನವನ್ನು ಒಪ್ಪಿಕೊಳ್ಳಲಾಗದೆ ತಮ್ಮದೇ ಬಹುಮತದ ಆಳ್ವಿಕೆಯನ್ನು ಸಾಧಿಸಬೇಕೆಂದು ಸ್ಪರ್ಧಿಸುತ್ತಿದ್ದಾರೆ. ಈ ಸ್ಪರ್ಧೆ ಬೀದಿ -ಜಗಳದ ಕಚ್ಚಾಟವಾಗಿ ರಾಜ್ಯದ ಜನತೆಯಲ್ಲಿ ಮತ್ತಷ್ಟು ಹೆಚ್ಚು ಅತೃಪ್ತಿಯನ್ನು ಮೂಡಿಸಿದೆ. ಆದರೆ ಪರ್ಯಾಯ ಮಾರ್ಗವೇನು ? ಈ ಮೂರು ಪಕ್ಷಗಳ ಹೊರತಾಗಿ ಅಧಿಕಾರವನ್ನು ವಹಿಯುಬಹುದಾದವರು ಜನಪರ ಆಡಳಿತ ನೀಡಬಹುದಾದ ಸಮರ್ಥ ಶಕ್ತಿ ಜನರ ದೃಷ್ಟಿಗೆ ಬಿದ್ದಿಲ್ಲ. ಅವರ ದೃಷ್ಟಿಗೆ ಬೀಳುವಂತಹ ಜನಪರ ರಾಜಕೀಯ ಶಕ್ತಿಯನ್ನು ರೂಪಿಸುವುದೇ ಇಂದಿನ ಪ್ರಧಾನ ಹೊಣೆಗಾರಿಕೆ.

ಜನಪರ ಚಳುವಳಿಗಳ ಯಶಸ್ಸು ಮತ್ತು ಕೊರತೆಗಳು

ಕರ್ನಾಟಕದ ರಾಜಕೀಯದ ದಿಕ್ಕನ್ನು ರೂಪಿಸುವಲ್ಲಿ ಜನಪರ ಚಳುವಳಿಗಳು ದೊಡ್ಡ ಕಾಣಿಕೆಯನ್ನೇ ನೀಡಿವೆ. ಕರ್ನಾಟಕದ ರಾಜಕೀಯದ ಪ್ರತಿ ತಿರುವನ್ನು ರೂಪಿಸಿದ್ದು ಜನಪರ ಚಳುವಳಿಗಳೇ ಎಂಬುದು ನಿಸ್ಸಂಶಯ. 1947ರಿಂದ67ರವರೆಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಜೋಡಿದಾರ, ಜಹಾಗೀರುದಾರ ಪದ್ಧತಿಯ ವಿರುದ್ಧ, ಗೇಣಿಪದ್ಧತಿಯ ವಿರುದ್ಧ ಕಮ್ಯುನಿಸ್ಟರ ಹಾಗೂ ಸಮಾಜವಾದಿಗಳ ನೇತೃತ್ವದಲ್ಲಿ ನಡೆದ ಚಳುವಳಿಗಳು, ಕರ್ನಾಟಕದ ವಿವಿಧ ನಗರಗಳಲ್ಲಿನ ಕಾರ್ಮಿಕ ಚಳುವಳಿಗಳು, ಕನ್ನಡ ಚಳುವಳಿ ಇವು ಕರ್ನಾಟಕದ ಜನರ ಅತೃಪ್ತಿಯ ಅಭಿವ್ಯಕ್ತಿಗೆ ಕಾರಣವಾದವು. ರಾಷ್ಟ್ರಮಟ್ಟದ ಬೆಳವಣಿಗೆಗಳೂ ಸೇರಿ ಆಗಲೇ ಹೇಳಿದಂತೆ 1969ರಲ್ಲಿ ಕಾಂಗ್ರೆಸ್ ಪಕ್ಷದ ವಿಭಜನೆಗೆ ದೇವರಾಜ ಅರಸರ ಹಿಂದುಳಿದ ವರ್ಗಗಳ ಹಾಗೂ ಗರೀಬಿ ಹಟಾವೋ ರಾಜಕೀಯಕ್ಕೆ ಕಾರಣವಾದವು. ಆದರೆ ಅದೇ ಸಮಯದಲ್ಲಿ ಈ ಚಳುವಳಿಗಳ ಬಲದಿಂದ ಗಣನೀಯ ಶಾಸಕ ಸ್ಥಾನವನ್ನು ಗಳಿಸಿದ್ದ ಸಮಾಜವಾದಿ ಪಕ್ಷದ ವಿವಿಧ ಬಣಗಳನ್ನು ಕಾಂಗ್ರೆಸ್ ಏಕ ಪೋಷನ ತೆಗೆದುಕೊಂಡು ದುರ್ಬಲಲವಾಯಿತು. ಇಡೀ ದೇಶದಲ್ಲಿ ಹೇರಿದ ತುರ್ತುಪರಿಸ್ಥಿತಿಗೆ ಕರ್ನಾಟಕದಲ್ಲಿ ಹೆಚ್ಚಿದ ಕಾಂಗ್ರೆಸ್‌ನ ಬಲವೂ ಒಂದು ಆಧಾರವಾಯಿತು. 1967ರ ಹಿಂದೆ ನಡೆದ ಚಳುವಳಿಗಳು ಬೇರೆ ಬೇರೆ ಸಮಯದಲ್ಲಿ ಅಲ್ಲಲ್ಲಿ ಮೂಡಿ ಬಂದರೆ 1980ರಿಂದ 83ರವರೆಗೆ ನಡೆದ ಚಳುವಳಿಗಳು ಏಕಕಾಲಕ್ಕೆ ರಾಜ್ಯವ್ಯಾಪಿಯಾಗಿ ಮೂಡಿಬಂದವು.



ಜಲಫಿರಂಗಿ, ಲಾಠಿಪ್ರಹಾರವನ್ನೆದುರಿಸಿದ ಗ್ಯಾಟ್ ವಿರೋಧಿ ಹೋರಾಟಗಾರರು. ಏಪ್ರಿಲ್ 15, 1994

ತುರ್ತು ಪರಿಸ್ಥಿತಿಯ ನಂತರ ಅದುಮಿಟ್ಟಿದ್ದ ಅಸಮಾಧಾನವೆಲ್ಲಾ ಭುಗಿಲ್ಲನೆ ಮೇಲೆದ್ದಂತೆ ಚಿಮ್ಮಿದ ರೈತ ಚಳುವಳಿ, ದಲಿತ ಚಳುವಳಿ ಕಾರ್ಮಿಕ ಚಳುವಳಿ, ಸಾಹಿತ್ಯಕ-ಸಾಂಸ್ಕೃತಿಕ ಚಳುವಳಿ, ಭಾಷಾ ಚಳುವಳಿಗಳ ವ್ಯಾಪಕತೆ ಮತ್ತು ಇವುಗಳ ನಡುವೆ ಪರಸ್ಪರ ಸಹಕಾರ ಕೂಡ ಅಪೂರ್ವವಾದುದು. ಕರ್ನಾಟಕದ ರಾಜಕಾರಣದ ಮೇಲೆ ತಕ್ಷಣವೇ ಪರಿಣಾಮ ಬೀರಿತು. ಕಮ್ಯೂನಿಸ್ಟರು ಸಮಾಜವಾದಿಗಳು, ಅಂಬೇಡ್ಕರ್ ವಾದಿಗಳೆಲ್ಲರೂ ಈ ಎಲ್ಲಾ ಚಳುವಳಿಗಳಲ್ಲಿ ಅಲ್ಲದಿದ್ದರೂ ಬಹುತೇಕ ಚಳುವಳಿಗಳಲ್ಲಿ ಒಟ್ಟಿಗೆ ಕೆಲಸ ಮಾಡಿದರು. ಹಿಂದಿನ ಅವಧಿಗೆ ಹೋಲಿಸಿದರೆ ಈ ಪ್ರಕ್ರಿಯೆಯೂ ಒಂದು ಆಶ್ಚರ್ಯಕರ, ಅತಿ ಸ್ವಾಗತಾರ್ಹ ಪ್ರಕ್ರಿಯೆಯಾಗಿತ್ತು. ಆದರೆ ಹಿಂದಿನ ಅವಧಿಯ ಚಳುವಳಿಗಳ ಲಾಭ ಬಹುಮಟ್ಟಿಗೆ ಕಾಂಗ್ರೆಸ್‌ಗೆ ಸೇರಿದಂತೆ ಈ ಚಳುವಳಿಗಳ ಉತ್ಕರ್ಷದ ಫಲವನ್ನು ಈ ಯಾವುದೆ ಚಳುವಳಿಗಳಲ್ಲಿ ನೆಪಮಾತ್ರಕ್ಕೆ ಕೂಡ ಭಾಗವಹಿಸದ ಜನತಾಪಕ್ಷ ಮತ್ತು ಕರ್ನಾಟಕದಲ್ಲಿ ಕೂಡ ಇರದ ಅದರ ನಾಯಕರು ಕೊಳ್ಳೆಹೊಡೆದರು. ಆಡಳಿತಕ್ಕಾಗಿ ಎರಡು ಪಕ್ಷಗಳ ನಡುವಣಾ ಸ್ಪರ್ಧೆ ಮತ್ತು ಅದರ ಫಲವಾಗಿ ಜನರ ಸಮಸ್ಯೆಗಳಿಗೆ ಕಲ ಚಿಲ್ಲರೆ ಪರಿಹಾರಗಳು ಮಾತ್ರ ಜನತೆಗೆ ಸಂದ ಲಾಭವಾಯಿತು.

ಮೂರನೆಯ ತಿರುವು ಕೂಡ ಜನರ ಚಳುವಳಿಗಳಿಂದಲೇ ರೂಪು ಗೊಂಡಿದ್ದು. 1980-83ರ ಸಮಯದಲ್ಲಿ ಏಕಕಾಲಕ್ಕೆ ಚಿಮ್ಮಿದ ಚಳವಳಿಗಳಂತೆ ಅಲ್ಲದಿದ್ದರೂ ಜಾಗತೀಕರಣದ ವಿರುದ್ಧ, ಕೋಮುವಾದದ ವಿರುದ್ಧ ವಿವಿಧ ಸಂಘಟನೆಗಳು ನಡೆಸಿದ ಪ್ರತ್ಯೇಕ ಚಳುವಳಿಗಳೂ, ಈ ನೀತಿಗಳಿಂದ ಜನ ಅನುಭವಿಸಿದ ಸಂಕಷ್ಟಗಳೂ ಇಂದು ಯಾವ ಪಕ್ಷಕ್ಕೂ ಅಧಿಕಾರ ನೀಡದಂತಹ ಪರಿಸ್ಥಿತಿಯನ್ನು ತಂದೊಡ್ಡಿದೆ.



ಜನಪರ ಚಳುವಳಿಗಳು ಕಲಿಯಬೇಕಾದ ಪಾಠಗಳು

ಕರ್ನಾಟಕದ ಎಲ್ಲಾ ರಾಜಕೀಯ ತಿರುವುಗಳು ಕೂಡ ಕರ್ನಾಟಕದ ಜನತೆ ತಮಗೆ ಜನಪರ ಆಡಳಿತ ನೀಡಬಹುದಾದ ರಾಜಕೀಯ ಶಕ್ತಿಗಾಗಿ ಹುಡುಕಾಟ ನಡೆಸಿದೆ ಎಂಬುದನ್ನು ತೋರಿಸುತ್ತದೆ. ಆದರೆ ಅದೇ ಸಮಯದಲ್ಲಿ ಜನಪರ ಚಳುವಳಿಗಳನ್ನು ಸಂಘಟಿಸಿದ ಜನಪರ ಚಳುವಳಿಗಳಿಂದ ಉದ್ಭವಿಸಿದ ಶಕ್ತಿಗಳು ಜನಪ್ರತಿನಿಧಿಗಳಾಗಿ, ಆಡಳಿತದ ಹತ್ತಿರಕ್ಕೂ ಹೋಗಲು ಸಾಧ್ಯವಾಗಿಲ್ಲ ಎಂಬ ಸಮಸ್ಯೆ ಕರ್ನಾಟಕದ ಜನ ಚಳುವಳಿಕಾರರನ್ನೆಲ್ಲ ಕಾಡುತ್ತಿದೆ. ಜನಪರ ಚಳುವಳಿಕಾರರನ್ನು ಆರಿಸಿದ ಜನರನ್ನು ದೂಷಿಸುವಂತೆ, ತಲೆಚಚ್ಚಿಕೊಳ್ಳುವಂತೆ, ಬೇಸರಗೊಂಡು ಚಳುವಳಿಯಿಂದ ದೂರವಾಗುವಂತೆ, ಅಥವಾ ಸ್ವಾರ್ಥದಲ್ಲಿ ಲೋಲುಪರವಾಗುವಂತೆ ಮಾಡಿದೆ. ಬಹಳಷ್ಟು ಚಳುವಳಿಗಳು ವಿಭಜಿತವಾಗುವಂತೆ ಮಾಡಿವೆ. ಜನರು ಆಳುತ್ತಿರುವ ರಾಜಕೀಯ ಪಕ್ಷಗಳ ಬಗ್ಗೆ ಬೇಸತ್ತು ಜನಪರ ಪರ್ಯಾಯವೊಂದನ್ನು ಬಯಸುತ್ತಿರುವಾಗಲೇ ರೈತರ ಚಳುವಳಿ, ದಲಿತ ಚಳುವಳಿ ಒಂದು ಉನ್ನತ ಸ್ಥಿತಿಯನ್ನು ತಲುಪಿ ದುರ್ಬಲಗೊಂಡಿವೆ. ಸಮಾಜವಾದಿ ಪಕ್ಷ ಬಿಜೆಪಿ- ಕಾಂಗ್ರೆಸ್-ಜನತಾದಳಗಳಲ್ಲಿ ಅದೃಶ್ಯವಾಗಿದೆ. ಭಾಷಾ ಚಳುವಳಿ ಅನಾರೋಗ್ಯಕರ ಪ್ರವೃತ್ತಿಗಳ ಗೂಡಾಗಿ ಯಾರೂ ಅದನ್ನು ಪ್ರಗತಿಪರ ಚಳುವಳಿಗಳ ಜೊತೆ ಗುರುತಿಸದಂತಾಗಿದೆ. ಕಮ್ಯುನಿಸ್ಟ್ ಪಕ್ಷಗಳು ರಾಜಕೀಯವಾಗಿ ಆರಕ್ಕೇರದೆ ಮೂರಕ್ಕಿಳಿಯದೆ ತಮ್ಮನ್ನು ತಾವು ಉಳಿಸಿಕೊಂಡಿವೆ ಚಳುವಳಿಯಾಗಿ ರಾಷ್ಟ್ರ ರಾಜಕಾರಣದಲ್ಲಿ ವಹಿಸುತ್ತಿರುವ ಪಾತ್ರದಿಂದ ಜನತೆ ಗುರುತಿಸುವಂತಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಅತ್ಯಂತ ಅವಶ್ಯವಾದುದು ಜನಪರ ಚಳುವಳಿಗಳು ಮತ್ತೆ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಒಗ್ಗೂಡಿ ಹೋರಾಟ ನಡೆಸುತ್ತಾ ತಮ್ಮ ಹಿಂದಿನ ಪ್ರಭಾವವನ್ನು ಗಳಿಸಿಕೊಳ್ಳಬೇಕಾಗಿದೆ ಮತ್ತು ಬೆಳೆಸಿಕೊಳ್ಳಬೇಕಾಗಿದೆ. ಆಗಮಾತ್ರ ಜನರ ಕಣ್ಣಮುಂದೆ ಚೈತನ್ಯ ಶೀಲವಾಗಿ ಕಾಣಿಸಿಕೊಳ್ಳಲು, ಜನ ರಾಜಕೀಯವಾಗಿ ಗುರುತಿಸಲು ಸಾಧ್ಯವಾಗುತ್ತದೆ.

ಇನ್ನೊಂದು ಪ್ರಮುಖ ಹಾಗೂ ತುರ್ತು ಅವಶ್ಯಕತೆಯೆಂದರೆ. ಚುನಾವಣೆಗಳಿಗೂ-ಚಳುವಳಿಗೂ ಇರುವ, ಇರಬೇಕಾದ ಆರೋಗ್ಯಕರ ಸಂಬಂಧದ ಬಗ್ಗೆ ಆಳವಾದ ಚರ್ಚೆ ಮತ್ತು ಕೆಲಸದ ವಿಧಾನಗಳನ್ನು ರೂಪಿಸಿಕೊಳ್ಳಬೇಕಾಗಿದೆ. ಒಂದುಕಡೆ ಜನಪರ ಚಳುವಳಿಗಳು ಚುನಾವಣೆಯಲ್ಲಿ ಯಶಸ್ವಿಯಾಗದಿರುವುದು ಮತ್ತೊಂದು ಕಡೆ ಯಾವುದೇ ಚಳುವಳಿಯಲ್ಲಿ ಭಾಗವಹಿಸದ ಜನತಾ ಪಕ್ಷ ಜನಚಳುವಳಿಗಳ ಅಲೆಯ ಮೇಲೆ ಅನಾಯಾಸವಾಗಿ ಅಧಿಕಾರಕ್ಕೆ ಬರುವುದು ಎರಡೂ ರೀತಿಯ ಅನುಭವಗಳಿಂದಲೂ ಸರಿಯಾದ ಪಾಠ ಕಲಿಯಬೇಕಾಗಿದೆ. ಭ್ರಷ್ಟತೆ ಪರಮಾವಧಿ ಗೇರುತ್ತಿರುವ ಚುನಾವಣಾ ವ್ಯವಸ್ಥೆಯನ್ನು ಚಳುವಳಿ ಮತ್ತು ಸಂಘಟನೆಯ ತತ್ವನಿಷ್ಠ ಮಾರ್ಗಗಳಿಂದ ಎದುರಿಸುವುದು ಹೇಗೆ ಎಂಬ ಬಗ್ಗೆ ಸಮರ್ಥವಾದ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಜನತೆಗೆ ಈ ಚಳುವಳಿಗಳ ಸಂಯುಕ್ತ ಶಕ್ತಿ ರಾಜಕೀಯವಾಗಿಯೂ ಯಶಸ್ವಿಯಾಗುತ್ತದೆ ಎಂಬ ಭರವಸೆಯನ್ನು ಮೂಡಿಸದ ಹೊರತು ಅಧಿಕಾರ ರಾಜಕೀಯದ ಹೊರ ಅಂಚಿನಲ್ಲಿಯೇ ಉಳಿಯಬೇಕಾಗುತ್ತದೆ ಎಂಬುದನ್ನು ನಾವೆಲ್ಲರೂ ಮನಗಾಣಬೇಕಾಗಿದೆ. ಮೇಲಿನ ಎರಡೂ ಹೊಣೆಗಾರಿಕೆಗಳನ್ನು ನಿರ್ವಹಿಸದ ಹೊರತು ಜನತೆ ರಾಜಕೀಯ ಪರ್ಯಾಯದ ಹುಡುಕಾಟದಲ್ಲಿ ಬಿಜೆಪಿಯತ್ತ ಸಾಗುವುದಕ್ಕೆ ನಾವೇ ಹೊಣೆಯಾಗಬೇಕಾಗುತ್ತದೆ. ಇನ್ನು ತಕ್ಷಣದ ಅವಶ್ಯಕತೆಯಾಗಿ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್)ಗಳನ್ನು ಹೊರತುಪಡಿಸಿ ಜಾತ್ಯಾತೀತ ಪಕ್ಷ ಮತ್ತು ಶಕ್ತಿಗಳ ಮೈತ್ರಿಯೊಂದನ್ನು ರೂಪಿಸಬೇಕು. ಎಷ್ಟೇ ದುರ್ಬಲವಾಗಿದ್ದರೂ ಇದು ಜನರ ಕಣ್ಣಮುಂದೆ ಒಂದು ಸಂಯುಕ್ತಶಕ್ತಿಯಾಗಿ ಕಾಣಿಸಿಕೊಳ್ಳಬೇಕಾಗಿದೆ.



ಕಲಾಸಿಪಾಳ್ಯ ಎಂಬ ಕಪ್ಪು ಚುಕ್ಕೆ

ಸಿಲಿಕಾನ್ ಸಿಟಿ, ಹೈಟೆಕ್ ನಗರ ಎಂದೆಲ್ಲಾ ಕರೆಯಲಾಗುವ ಬೆಂಗಳೂರಿನ ಹೃದಯಭಾಗವಾದ ಕೆ.ಆರ್. ಮಾರುಕಟ್ಟೆ, ಕಲಾಸಿಪಾಳ್ಯಂ ಪ್ರದೇಶಗಳ ಗಬ್ಬು, ದುರ್ನಾತ, ಅಲ್ಲಿ ನಡೆಯುತ್ತಿರುವ ಪಾತಕಗಳನ್ನು ಕೇಳುವವರೇ ಇಲ್ಲವಾಗಿದೆ. ವಿಧಾನಸೌಧ, ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಯಿಂದ ಈ ಜಾಗ ಕೇವಲ ಕೂಗಳತೆಯ ದೂರದಲ್ಲಿದೆ ಎನ್ನುವುದು ಇನ್ನೂ ಒಂದು ದುರಂತ.


ಅಂಗರಾಜು

ಕೃಷ್ಣರಾಜ ಮಾರುಕಟ್ಟೆ ಹೆಸರೆತ್ತಿದಾಗ ಕೊಳೆತ ಹಣ್ಣು ತರಕಾರಿಗಳ ಗಬ್ಬುನಾಥ, ಬಿಟಿಎಸ್‌ಬಸ್ ಹಾದು ಹೋಗುವಾಗ ಹೊಗೆ ಧೂಳು, ವಾಹನಗಳ ಶಬ್ದವನ್ನು ನಿಶಬ್ದವಾಗಿಸುವ ಬೀದಿ ವ್ಯಾಪಾರಸ್ಥರ ಕಿರುಚಾಟ, ಈ ದೃಶ್ಯಗಳು ಸಾಮಾನ್ಯವಾಗಿ ಕಣ್ಣಿಗೆ ಕಟ್ಟುತ್ತವೆ.

ನೂರಾರು ವರ್ಷಗಳ ಇತಿಹಾಸ ಹೊಂದಿರುವ ಕೃಷ್ಣರಾಜ ಮಾರುಕಟ್ಟೆ ಸರ್ವ ವರ್ಗದ ಕೊಂಡುಕೊಳ್ಳುವ ಏಕೈಕ ಕೇಂದ್ರವಾಗಿ ಬೆಂದಕಾಳೂರಲ್ಲಿತ್ತು. ಈಗಿನ ಬಳೇಪೇಟೆ, ಚಿಕ್ಕಪೇಟೆ, ಅವಿನ್ಯೂರಸ್ತೆ, ಒಳಗೊಂಡಂತೆ ಹಲವು ಪ್ರದೇಶಗಳನ್ನು ಕೆ.ಆರ್. ಮಾರುಕಟ್ಟೆಯ ಭಾಗವಾಗಿ ವರ್ಗೀಯ ವ್ಯಾಪಾರ ವ್ಯವಸ್ಥೆ ಚಾಲ್ತಿಯಲ್ಲಿತ್ತು. ಹೀಗಾಗಿ ಜನ ಸುಲಭವಾಗಿ ಕೊಂಡು ಕೊಳ್ಳುವಿಕೆಯಲ್ಲಿ ಭಾಗಿಯಾಗಿಸಿದ್ದರು.

ಬೆಂಗಳೂರಿನ ಮೂಲೆ ಮೂಲೆಗಳಿಂದ ಬಂದು ಕೊಂಡುಕೊಳ್ಳುತ್ತಿದ್ದ ಪರಿಸ್ಥಿತಿ, ಸ್ವರೂಪ ಈಗ ಸಂಪೂರ್ಣ ಬದಲಾಗಿದೆ. ಐ.ಟಿ., ಬಿ.ಟಿ. ಗಳ ವೇಗದಲ್ಲಿ ಫ್ಯಾಬ್ ಮಾಲ್, ಟೋಟಲ್, ಸೂಪರ್ ಮಾರ್ಕೆಟ್, ಮೆಟ್ರೋನಂತಹ ದೈತ್ಯ ಮಳಿಗೆಗಳಿಂದಾಗಿ ಮೇಲ್ವರ್ಗ ಹಾಗೂ ಮಧ್ಯಮವರ್ಗದ ಜನ ಇಂದು ಇತ್ತ ಸುಳಿದಾಡುವುದು ಇಲ್ಲವಾಗಿದೆ. ಕೆ.ಆರ್.ಮಾರುಕಟ್ಟೆ ಸದ್ಯ ಬೆವರ ಬಸಿವ ಜನರ ಬಂದರಾಗಿ ಮಾರ್ಪಟಾಗಿದೆ. ಸಾಮಾನ್ಯ ಬಡ ಜನ ಮಾತ್ರವೇ ಓಡಾಡುವ ಪ್ರದೇಶವಾಗಿ ಬೆಳೆಯುತ್ತಿರುವ ಮಧ್ಯೆ ಹಲವು ಸಮಸ್ಯೆಗಳ ಸಂತೆಯಾಗಿದೆ.

4 ರಿಂದ 5 ಸಾವಿರ ಜನ ಬೀದಿ ವ್ಯಾಪಾರಸ್ಥರ ಹೊಟ್ಟೆ ತುಂಬಿಸುವ ಕೇಂದ್ರವಾಗಿರುವ ಈ ಮಾರುಕಟ್ಟೆ ಯಾವುದೇ ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲದ, ರಾಜಕಾರಣಿಗಳ, ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದ ನತದೃಷ್ಟ ಕೇಂದ್ರವಾಗಿ ತನ್ನ ನಿತ್ಯದ ವ್ಯಥೆ ಹೇಳುವ ಭಿಕ್ಷುಕನಂತೆ ನಿಂತಿದೆ.



ಕುಡಿಯುವ ನೀರು, ಶೌಚಾಲಯ, ಒಳಚರಂಡಿ, ಕಸವಿಲೇವಾರಿ ಇತ್ಯಾದಿ ಸೌಲಭ್ಯಗಳಿಲ್ಲದೆ ವ್ಯಾಪಾರಗಳಿಗೆ ಬರುವ ಜನರ ಪರಿಸ್ಥಿತಿ ಹೇಳ ತೀರದಾಗಿದೆ. ಶೌಚಾಲಯ ವಿಲ್ಲದಿರುವುದರಿಂದ ಮಹಿಳೆಯರು ಯಾತನೆ ಅನುಭವಿಸುವಂತಾಗಿದೆ.. ವ್ಯಾಪಾರಸ್ಥರು ಮತ್ತು ಜನರ ಮೂತ್ರ ವಿಸರ್ಜನೆಯಿಂದಾಗಿ ದುರ್ನಾತದ ನಡುವೆ ತಮ್ಮ ಕಾರ್ಯ ಮುಂದುವರೆಸಬೇಕು. ಬೇರೆ ದಾರಿ ಇಲ್ಲ. ಇದು ಪ್ರತ್ಯಕ್ಷ ನಿದರ್ಶನಗಳಾದರೆ ಸೆರಗ ಹಿಂದಿನ ಹಾದರಗಳಿಗೆ ಇಲ್ಲಿ ಎಲ್ಲೇ ಇಲ್ಲವಾಗಿದೆ.

ಕನಿಷ್ಠ ಶಿಕ್ಷಣವಿಲ್ಲದೆ ದಾರಿ ತಪ್ಪುತ್ತಿರುವ ಯುವಕರು

ದಿನವಿಡಿ ದುಡಿದರೂ ಹೊಟ್ಟೆ ಹೊರೆಯುವುದು ಕಷ್ಟವಾಗಿರುವಾಗ ಮಕ್ಕಳನ್ನೂ, ಓದಿಸಬೇಕೆಂಬ ಯೋಚನೆ ಎಲ್ಲಿಂದ ಬರಬೇಕು? ಹೀಗಾಗಿ ಬಹುತೇಕ ಯುವಕರು ರಾಜಕಾರಣಿಗಳ ಹಿಂಬಾಲಕರಾಗಿ ಇವರು ಮಾಡಿಸುವ ಕೃತ್ಯಗಳಿಗೆ ಕರ್ತೃಗಳಾಗಿ ರೌಡಿ ಹಣೆಪಟ್ಟಿ ಕಟ್ಟಿಕೊಂಡು ಮಾಮೂಲು ವಸೂಲು ಮಾಡುವುದು, ಗಲಾಟೆಯಾದಾಗ ಮಚ್ಚು ಲಾಂಗು ಹಿಡಿಯುವುದು, ಮಹಿಳೆಯರನ್ನು ಚುಡಾಯಿಸುವುದು ಇತ್ಯಾದಿಗಳೇ ಇಲ್ಲಿನ ಯುವಕರ ದೈನಂದಿನ ಚಟುವಟಿಕೆಗಳು. ತುಂಡು ಸಿಗರೇಟ್, ಡ್ರಗ್ಸ್, ಗಾಂಜಾ ಅಫೀಮು ಯಾವುದೂ ಕೂಡ ಕೊರತೆ ಇಲ್ಲ ಎಂಬಂತಾಗಿದೆ. ಇಲ್ಲಿನ ಒಬ್ಬ ಹಣ್ಣಿನ ವ್ಯಾಪಾರಿಯ ಹೇಳಿಕೆ ಪ್ರಕಾರ 'ಇಲ್ಲಿ ಯಾರೂ ಸ್ಕೂಲ್ ಮೆಟ್ಲೇ ಹತ್ತಿಲ್ಲ ಸಾರ್, ಪೋಲಿ ಬೀಳ್ದೆ ಇನ್ನೆನ್ಮಾಡ್ತಾರೆ ಸಾರ್, ಎಂಎಲ್‌ಎ ಗಳು, ಹುಡುಗರನ್ನ ಚೆನ್ನಾಗಿ ಯೂಸ್ ಮಾಡ್ಕೋತಾರೆ, ಹೊಡೆಯೋಕೆ, ಬಡಿಯೋಕೆ, ಎಲೆಕ್ಷನ್‌ನಲ್ಲಿ ಜೈ ಅನ್ನೋಕೆ ಬೇಕಲ್ಲಾ ಸಾರ್... ಇಲ್ಲಿಯವರೆಲ್ಲ ಆರ್.ವಿ. ದೇವರಾಜ್ ಹಿಂದಿದ್ರು. ಈಗ ಜಮೀರ್‌ನ ಹಿಂದಿದ್ದಾರೆ' ಎಂದು ತಗ್ಗಿದ ದನಿಯಲ್ಲಿ ಹೇಳುವಾಗ ಮುಖದಲ್ಲಿ ಭಯದ ಗೆರೆಗಳು ಮೂಡುತ್ತಿದ್ದುದು ಸ್ಪಷ್ಟವಾಗಿತ್ತು.



ಕಲಾಸಿಪಾಳ್ಯಂ ಬಸ್ ನಿಲ್ದಾಣದ ಅವಸ್ಥೆ. ಇದಕ್ಕೆ ಮುಕ್ತಿ ಎಂದೋ?

ಹಣ್ಣಿನ ವ್ಯಾಪಾರಿಗಳ ಅತಂತ್ರ ಬದುಕು

ಹಣ್ಣು ವ್ಯಾಪಾರಸ್ಥರ ಗೋಳಿನ ಕಥೆ ಕೇಳಿದರೆ ಎಂತಹವರಿಗೂ ಅಯ್ಯೋ ಅನಿಸದೆ ಇರಲಾರದು. ಹಣ್ಣುಗಳನ್ನು ಹೆಚ್ಚು ದಿನ ಇಡುವ ಹಾಗಿಲ್ಲ. ಮಳೆ ಬಿದ್ದರಂತೂ ಇವರ ಸ್ಥಿತಿ ಹೇಳತೀರದು 'ಲಾಭ' ಮಳೆಗೆ ತೊಯ್ದು ಹೋಗಿರುತ್ತದೆ. ವ್ಯಾಪಾರ ಮಾಡಲು ಸರಿಯಾದ ವ್ಯವಸ್ಥೆ ಇಲ್ಲವಾಗಿದೆ. ಈ ಹಿಂದೆ ಎಸ್.ಎಂ.ಕೃಷ್ಣ ಸರ್ಕಾರವಿದ್ದಾಗ ಸಿಂಗೇನ ಅಗ್ರಹಾರದ ಬಳಿ ಹಣ್ಣು ವ್ಯಾಪಾರಸ್ಥರಿಗೆ ಜಾಗ ನಿಗದಿಪಡಿಸಲಾಗಿತ್ತು. ಆದರೆ ಅಧಿಕಾರಿಗಳ ಎಂಜಲು ತಿನ್ನುವ ಬುದ್ಧಿಯಿಂದಾಗಿ ಈ ವ್ಯಾಪಾರಸ್ಥರಿಗೆ ಮೀಸಲಾಗಿದ್ದ ಈ ಜಾಗ ದುಡ್ಡಿದ್ದವರ ಪಾಲಾಗಿ ಅತಂತ್ರರಾಗಬೇಕಾಯಿತು. ಮೇಲೂ ಇಲ್ಲದ ಕೆಳಗೂ ಇಲ್ಲದ ತ್ರಿಶಂಕುವಿನಂತಾಗಿದ್ದಾರೆ.

ವಲಸಿಗರ ಬೀಡು: ಕೂಲಿ ಅರಸಿ ಬರುವವರಿಗೆ ಸುಲಭವಾಗಿ ಸಿಗುವ ಕೂಲಿ ಕೆಲಸವೆಂದರೆ ಮೂಟೆ ಹೊರುವುದು. ಬಹುಶಃ ಇಡೀ ಬೆಂಗಳೂರಿನಲ್ಲಿ ಕೆ.ಆರ್. ಮಾರುಕಟ್ಟೆಯಲ್ಲಿ ಮಾತ್ರವೇ ಸುಲಭವಾಗಿ ಕೂಲಿ ಸಿಗುವ ಜಾಗ ಎಂದರೆ ತಪ್ಪಾಗಲಾರದೇನೋ...! ಮನೆ ಬಿಟ್ಟು ಬಂದವರು ಬೆವರಿಳಿಸಲು ಸಿದ್ಧವಿದ್ದರೆ ಸಾಕು ಇಲ್ಲಿ ಉದ್ಯೋಗ ಗ್ಯಾರಂಟಿ. ಹೀಗಾಗಿ ಹೊರ ರಾಜ್ಯಗಳಿಂದ ಹೊರ ಜಿಲ್ಲೆಗಳಿಂದ ಬರುವ ವಲಸೆಗಾರರು ಸಾಮಾನ್ಯವಾಗಿ ಕೆ.ಆರ್. ಮಾರ್ಕೆಟ್‌ಗೆ ಬರುತ್ತಾರೆ. ಇದರ ಲಾಭ ಪಡೆದ ಮಾಲೀಕರು ಕಡಿಮೆ ಕೂಲಿಗೆ ಹಗಲುರಾತ್ರಿ ದುಬಾರಿ ಕೆಲಸ ತೆಗೆಯುತ್ತಾರೆ. ರಾತ್ರಿ ಇವರಿಗೆ ಬಸ್ ಸ್ಟ್ಯಾಂಡ್, ಫ್ಲೈ ಓವರ್, ಸಿಮೆಂಟ್ ಪೈಪುಗಳೇ ನಿದ್ರಾತಾಣಗಳು.

ಪಾರ್ಕಿಂಗ್‌ಗಿಲ್ಲ ಜಾಗ... ಟ್ರಾಫಿಕ್ ಜಾಮ್‌ಜಾಮ್...

ಪ್ರೈವೇಟ್ ಬಸ್, ಬಿಎಂಟಿಸಿ ಬಸ್, ಲೋಡ್ ಲಾರಿಗಳು, ಅಂಗಡಿ ಮಾಲೀಕರುಗಳ ಕಾರ್‌ಗಳಿಂದಾಗಿ ಕೆ.ಆರ್. ಮಾರ್ಕೆಟ್‌ನಲ್ಲಿ ಯಾವಾಗಲೂ ಟ್ರಾಫಿಕ್ ಜಾಮ್‌ನಿಂದ ಜನ-ಯಾತನೆ ಅನುಭವಿಸುವಂತಾಗಿದೆ. ಪಾರ್ಕಿಂಗ್‌ಗೆ ಸರಿಯಾದ ಜಾಗವಿಲ್ಲದೆ ದಾರಿಯಲ್ಲಿ ಪಾರ್ಕ್ ಮಾಡುವುದರಿಂದಾಗಿ ಟ್ರಾಫಿಕ್ ಮತ್ತಷ್ಟು ಓವರ್... ಟ್ರಾಫಿಕ್ ಸಮಸ್ಯೆ ನಿಭಾಯಿಸಬೇಕಾದ ಪೋಲೀಸರು ದ್ವಿಚಕ್ರ ವಾಹನದಾರರಿಂದ ಲಾರಿಗಳವರಿಂದ ವಸೂಲಿ ಕೆಲಸದಲ್ಲಿ ಬ್ಯುಸಿಯಾಗಿರುತ್ತಾರೆ.

ಆಶ್ವಾಸನೆಗಳಿಗೆ ಭರವಿಲ್ಲ.....

ಪ್ರತಿ ಚುನಾವಣೆಯಲ್ಲೂ ಇಲ್ಲಿ ಸ್ಪರ್ಧಿಸುವ ಎಲ್ಲಾ ರಾಜಕೀಯ ಪಕ್ಷಗಳು ಆಶ್ವಾಸನೆಗಳ ಮಹಾಪೂರವನ್ನೇ ಹರಿಸುತ್ತಾರೆಯೇ ವಿನಃ ಇಲ್ಲಿನ ಸಮಸ್ಯೆಗಳನ್ನು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಯಾವೊಬ್ಬ ರಾಜಕಾರಣಿಯಿಂದ ನಡೆದಿಲ್ಲ. ಹಣ ಹೆಂಡದ ಹೊಳೆ ಹರಿಸಿ ಗೆದ್ದು ಬರುವುದು ಅದರ ನೂರರಷ್ಟನ್ನು, ಸಂಪಾದಿಸುವುದು ಮಹೋದ್ದೇಶ ವಾಗಿದೆ. ಇವರ ಈ ದಿವ್ಯ ನಿರ್ಲಕ್ಷ್ಯದಿಂದಾಗಿ ಕೆ.ಆರ್.ಮಾರುಕಟ್ಟೆ ಕನಿಷ್ಟ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ.

ಇಲ್ಲಿ ನಡೆಯುವ ಅನೈತಿಕ ಚಟುವಟಿಕೆಗಳು ನಿಲ್ಲಬೇಕು, ರಸ್ತೆ, ಕುಡಿಯುವ ನೀರು, ಒಳಚರಂಡಿ, ವ್ಯಾಪಾರಸ್ಥರಿಗೆ ವಿಭಾಗ ಮಳಿಗೆ, ಶೌಚಾಲಯ, ದಲ್ಲಾಳಿಗಳಿಗೆ ಕಡಿವಾಣ, ಪೋಲೀಸ್/ರೌಡಿ ಕಿರುಕುಳದಿಂದ ವಿಮುಕ್ತಿ, ಸುಗಮ ಸಂಚಾರ ವ್ಯವಸ್ಥೆ, ಪ್ರತ್ಯೇಕ ಪಾರ್ಕಿಂಗ್ ಸೌಲಭ್ಯ, ಬಿಎಂಟಿಸಿ ಖಾಸಗಿ ಬಸ್ ನಿಲ್ಲಲು ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ಹೀಗೆ ಬೇಡಿಕೆಗಳ ದೊಡ್ಡ ಪಟ್ಟಿಯೇ ಇದೆ. ಆದರೆ ಇಲ್ಲಿನ ಜನ ಇವು ಬಗೆಹರಿಯದ ಸಮಸ್ಯೆಗಳೆಂದು ನಿರಾಶೆಯ ಅಂಚಿನಲ್ಲಿದ್ದಾರೆ. ಆದರೆ ಸಂಘಟಿತ ಹೋರಾಟದ ಮೂಲಕವೇ ಏನನ್ನಾದರೂ ಪಡೆಯಲು ಸಾಧ್ಯವಿದೆ ಎಂಬುದನ್ನು ಹಲವು ಹೋರಾಟಗಳು ನಿರೂಪಿಸಿವೆ

ಸೆರಗ ಹಿಂದಿನ ಹಾದರ...

ಜೂಜು, ಮಟ್ಕಾ ದಂಧೆ, ವ್ಯಭಿಚಾರ, ಸರಗಳ್ಳತನ, ಕೊಲೆ, ಸುಲಿಗೆ, ಪೊಲೀಸರ ದೌರ್ಜನ್ಯ,ರೌಡಿಸಂ, ಒಂದೇ ಎರಡೇ.... ಎದೆ ಝಲ್ಲೆನಿಸುವಂತಹ ಪರಿಸ್ಥಿತಿ ಸೆರಗ ಹಿಂದಿನದು. ದಿನ ಒಂದಕ್ಕೆ ಕೋಟ್ಯಾಂತರ ರೂಪಾಯಿ ವಹಿವಾಟು ನಡೆವ ಜಾಗದಲ್ಲಿ ಇಷ್ಟೆಲ್ಲಾ ಎಂದರೆ ಆಶ್ಚರ್ಯವಾಗಬಹುದೇನೋ... ಸ್ಥಳೀಯ ವ್ಯಾಪಾರಸ್ಥರ ಪ್ರಕಾರ ಕನಿಷ್ಠ 60 ಸಾವಿರದಿಂದ 1 ಲಕ್ಷ ರೂಪಾಯಿವರೆಗೆ ಪೋಲೀಸರಿಗೆ ಮಾಮೂಲು, ಇದಕ್ಕಿಂತಲೂ ಹೆಚ್ಚಿನ ಮೊತ್ತದ ಹಣ ಪುಡಿ ರೌಡಿಗಳ ಪಾಲಾಗುತ್ತಿದೆ. ಇದರಿಂದಾಗಿ ಬೀದಿ ವ್ಯಾಪಾರಸ್ಥರು ಬೆವರಿಳಿಸಿ ಗಳಿಸಿದ ಮೂರು ಕಾಸೂ ಕೂಡ ಕೈ ಸೇರದಂತಾಗಿದೆ. ಇನ್ನೊಂದೆಡೆ ಮಾಲು ತರುವ ರೈತರಿಗೆ ಮಧ್ಯವರ್ತಿ ದಲ್ಲಾಳಿಗಳಿಂದಾಗಿ ಹಣ್ಣು ತರಕಾರಿ ಅನ್ಯಾಯದ ಬೆಲೆ ಹೊತ್ತು ಹೋಗಬೇಕಾಗಿದೆ. ಇದರ ನಡುವೆ ಮಟ್ಕಾದಂತ ಜೂಜುಗಳಿಗೆ ರೈತರನ್ನು ಆಕರ್ಷಿಸಿ ಇದ್ದಬದ್ದ ದುಡ್ಡನ್ನು ಕಸಿದು ಬರಿಗೈಲಿ ಕಳುಹಿಸುವುದು ಮಾಮೂಲಾಗಿದೆ. ಜೊತೆಗೆ ಜೇಬು ಕತ್ತರಿಸುವ ಕಳ್ಳರಿಗೇನು ಕಡಿಮೆ ಇಲ್ಲ.

ತಂಗಂ ಲಾಡ್ಜ್ ವ್ಯಭಿಚಾರದ ಕೇಂದ್ರ:

ತಂಗಂ ಲಾಡ್ಜ್ ಪಕ್ಕಾ ವ್ಯಭಿಚಾರದ ಕೇಂದ್ರವಾಗಿದೆ. ಹಳ್ಳಿಗಳಿಂದ ಬರುವ ಬಡ ಹೆಣ್ಣು ಮಕ್ಕಳನ್ನು ವ್ಯಭಿಚಾರಕ್ಕೆ ಪ್ರೇರೇಪಿಸಿ ಆ ಮೂಲಕ ದುಡ್ಡು ಮಾಡುವ ರೌಡಿಗಳು. ಇದರಲ್ಲಿ ರಾಜಕಾರಣಿಗಳ ಪಾಲಿದೆ ಎಂಬುದು ವ್ಯವಸ್ಥೆ ಬಗ್ಗೆ ಅಸಹ್ಯ ಹುಟ್ಟಿಸುತ್ತದೆ. ವೇಶ್ಯಾವಾಟಿಕೆ ಬಹಿರಂಗವಾಗಿ ನಡೆಯುತ್ತಿದ್ದರೂ ಪೋಲಿಸರು 'ಯಾಕೋ' ಕಣ್ಮುಚ್ಚಿಕೊಂಡು ಕುಳಿತಿದ್ದಾರೆ.

ಮಟ್ಕಾ ದಂಧೆ...

ಮಟ್ಕಾ ದಂಧೆ ಇಲ್ಲಿ ಅವ್ಯಾಹತವಾಗಿ ಪೋಲೀಸರ ಸಮ್ಮುಖದಲ್ಲೇ ನಡೆಯುತ್ತಿದೆ. ಸ್ಥಳೀಯರ ಪ್ರಕಾರ ದಿನಕ್ಕೆ ಲಕ್ಷಾಂತರ ರೂಪಾಯಿ ವ್ಯವಹಾರ ಈ ದಂಧೆಯಲ್ಲಿದೆ. ಪೋಲೀಸರಿಗೆ, ಆ ಮೂಲಕ ಜನಪ್ರತಿನಿಧಿಗಳಿಗೆ ಮಾಮೂಲು ಹೋಗುವುದರಿಂದ ಇದಾವುದರ ಕಡೆ ಗಮನಹರಿಸಲು ಪ್ರಯತ್ನಿಸುತ್ತಿಲ್ಲ. ಹೀಗಾಗಿ ಮಟ್ಕಾ ದಂಧೆ ಒಂದು ಬಹಿರಂಗ ಜೂಜಾಗಿ ನಡೆಯುತ್ತಿದೆ. ಕೆಲವರು ಹೇಳುವ ಪ್ರಕಾರ ದಿನದ 24 ಗಂಟೆ ಕೂಡ ನಡೆಯುತ್ತೆ. ಆಳುವ ಜನ, ಕಾನೂನು ಕಾಪಾಡಬೇಕಾದ ಪೋಲೀಸರೇ ಬೇಲಿ ಮೇಯುವಾಗ ಇಂಥವರಿಂದ ಇನ್ನೇನನ್ನು ತಾನೇ ನಿರೀಕ್ಷಿಸಲು ಸಾಧ್ಯ? ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿ(ಎಸ್) ಯಾವ ಪಕ್ಷದ ಶಾಸಕರು ಬಂದರೂ ಪರಿಸ್ಥಿತಿ ಮಾತ್ರ ಬದಲಾಗಿಲ್ಲ.

ಪಿ.ಸಾಯಿನಾಥ್

9 ವರ್ಷಗಳಲ್ಲಿ 1,50,000 ರೈತರ ಆತ್ಮಹತ್ಯೆ



ಅಧಿಕೃತ ಅಂಕಿ-ಅಂಶಗಳ ಪ್ರಕಾರ 1997ರಿಂದ 2005ರ ನಡುವೆ ದೇಶಾದ್ಯಂತ 1,49,244 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಧ್ಯಪ್ರದೇಶ ಈ ನಾಲ್ಕು ರಾಜ್ಯಗಳಲ್ಲೇ ರೈತರ ಆತ್ಮಹತ್ಯೆಗಳ ಸಂಖ್ಯೆ 89,362. 2005ರಲ್ಲಿ ರೈತರ ಆತ್ಮಹತ್ಯೆಗಳಲ್ಲಿ ಮೂರನೇ ಎರಡರಷ್ಟು ಈ ನಾಲ್ಕು ರಾಜ್ಯಗಳಲ್ಲೇ ಸಂಭವಿಸಿದೆ. ಕರ್ನಾಟಕದಲ್ಲಿ ಈ ಅವಧಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ 20,093.

1997 ರಿಂದ 2005ರ ನಡುವೆ ದೇಶದಲ್ಲಿ ಒಟ್ಟು ಸುಮಾರು 1,50,000 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅಧಿಕೃತ ದಾಖಲೆಗಳಿಂದಲೇ ಕಂಡುಬಂದಿದೆ. ಇವುಗಳಲ್ಲಿ ಮೂರನೇ ಎರಡರಷ್ಟು ಕೇವಲ ನಾಲ್ಕೇ ರಾಜ್ಯಗಳಲ್ಲಿ ಸಂಭವಿಸಿದೆ. ಈ ನಾಲ್ಕು ರಾಜ್ಯಗಳ ಜನಸಂಖ್ಯೆ ಒಟ್ಟು ದೇಶದ ಜನಸಂಖ್ಯೆಯ ಮೂರನೇ ಒಂದು ಮಾತ್ರ ಎಂಬುದನ್ನೂ ಗಮನಿಸಬೇಕು ಎನ್ನುತ್ತಾರೆ ಪ್ರಖ್ಯಾತ ಪತ್ರಕರ್ತ ಪಿ.ಸಾಯಿನಾಥ್. ಈ ರಾಜ್ಯಗಳನ್ನು 'ಆತ್ಮಹತ್ಯಾ ಎಸ್‌ಇರ್ಝುಡ್' ಎನ್ನಬಹುದು ಅನ್ನುತ್ತಾರೆ ಅವರು.

ಈ ನಾಲ್ಕು ರಾಜ್ಯಗಳೆಂದರೆ ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಧ್ಯಪ್ರದೇಶ(ಛತ್ತೀಸ್‌ಗಢ ಸೇರಿ). ಈ ಸಾಲಿಗೆ ಸೇರುವ ಐದನೇ ರಾಜ್ಯವೆಂದರೆ ಕೇರಳ. ಆದರೆ ಇಲ್ಲಿ ಈ ಅವಧಿಯಲ್ಲಿ ನಿರಂತರ ಹೆಚ್ಚಳ ಕಂಡುಬರಲಿಲ್ಲ. ಇವೆಲ್ಲಾ ಪ್ರಧಾನವಾಗಿ ಹಣದ ಬೆಳೆಗಳ ಪ್ರದೇಶ ಎಂಬುದು ಗಮನಿಸಬೇಕಾದ ಇನ್ನೊಂದು ಸಂಗತಿ.

ಚೆನ್ನೈನ ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಪ್ರೊಫೆಸರ್ ಕೆ. ನಾಗರಾಜ್‌ರವರ ಅಧ್ಯಯನದಿಂದ ಕಂಡುಬಂದ ಸಂಗತಿಗಳಿವು. ನ್ಯಾಶನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೊ(ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ) 1995ರಿಂದ ಕೃಷಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಕಲೆಹಾಕುತ್ತಿದ್ದು ಈ ಮಾಹಿತಿ ಎಲ್ಲಾ ರಾಜ್ಯಗಳಿಂದ ಸಿಗಲಾರಂಭಿಸಿದ್ದು 1997ರಿಂದಷ್ಟೇ. ಇತ್ತೀಚಿನ ಅಂಕೆ-ಸಂಖ್ಯೆಯೆಂದರೆ 2005ರದ್ದು. ಈ ಅಂಕಿ-ಅಂಶಗಳ ಆಧಾರದಲ್ಲಿ ಪ್ರೊ. ನಾಗರಾಜ್ ಈ ಅಧ್ಯಯನ ನಡೆಸಿದ್ದಾರೆ.

ಕೀಟನಾಶಕ-ಕೃಷಿ ಬಿಕ್ಕಟ್ಟು ಸಂಬಂಧಗಳು

ಭಾರತದಲ್ಲಿ ಒಟ್ಟಾರೆ ಆತ್ಮಹತ್ಯೆಗಳ ಪ್ರಮಾಣ ಈ ಅವಧಿಯಲ್ಲಿ 2.18ಶೇ. ದರದಲ್ಲಿ ಹೆಚ್ಚಿದೆ. ಇದು ಜನಸಂಖ್ಯೆಯ ಏರಿಕೆ ಪ್ರಮಾಣಕ್ಕಿಂತ ಸ್ವಲ್ಪ ಹೆಚ್ಚಷ್ಟೇ. ಆದರೆ ಕೀಟನಾಶಕಗಳಿಂದ ಆತ್ಮಹತ್ಯೆ ಮಾಡಿಕೊಂಡಿರುವವರ ಪ್ರಮಾಣ 2.5ಶೇ. ದರದಲ್ಲಿ ಹೆಚ್ಚಿರುವುದು ಕಂಡು ಬಂದಿದೆ ಮತ್ತು ರೈತರಲ್ಲಿ ಆತ್ಮಹತ್ಯೆಗಳ ಪ್ರಮಾಣ ಇನ್ನೂ ಹೆಚ್ಚು-ಇದು 2.91 ಶೇ. ಕೀಟನಾಶಕಗಳು ರೈತರಿಗೆ ಅತ್ಯಂತ ಸುಲಭವಾಗಿ ಕೈಗೆ ಸಿಗುವ ಸಾಧನವಾದ್ದರಿಂದ ಕೀಟನಾಶಕಗಳಿಂದ ಮಾಡಿಕೊಳ್ಳುವ ಆತ್ಮಹತ್ಯೆಗಳಿಗೂ ಕೃಷಿ ಬಿಕ್ಕಟ್ಟಿಗೂ ನಿಕಟ ಸಂಬಂಧವಿದೆ ಎಂದು ಹೇಳಲಾಗುತ್ತದೆ.

ಈ ಒಂಭತ್ತು ವರ್ಷಗಳಲ್ಲಿ ಮೇಲೆ ಹೇಳಿದ ಆ ರಾಜ್ಯಗಳಲ್ಲಿ 89,362 ರೈತರ ಆತ್ಮಹತ್ಯೆಗಳ ಪ್ರಕರಣಗಳು ದಾಖಲಾದವು. ಇವುಗಳಲ್ಲಿ ಅತಿ ಹೆಚ್ಚು ಅಂದರೆ 28,911 ಮಹಾರಾಷ್ಟ್ರದಲ್ಲಿ ದಾಖಲಾದವು. ಮಧ್ಯಪ್ರದೇಶ (ಛತ್ತೀಸ್‌ಗಢವೂ ಸೇರಿ)ದಲ್ಲಿ 23,588 ದಾಖಲಾದರೆ, ಕರ್ನಾಟಕದಲ್ಲಿ 20,093 ರೈತರ ಆತ್ಮಹತ್ಯೆ ಪ್ರಕರಣಗಳು ಮತ್ತು ಆಂಧ್ರಪ್ರದೇಶದಲ್ಲಿ 16,770 ದಾಖಲಾದವು. ದೇಶಾದ್ಯಂತ ದಾಖಲಾದ ಈ ಆತ್ಮಹತ್ಯೆಗಳ ಪ್ರಮಾಣ 2001 ರ ನಂತರ ತೀವ್ರಗೊಂಡಿತು ಎಂಬುದೂ ಈ ಅಂಕಿ-ಅಂಶಗಳ ಅಧ್ಯಯನದಿಂದ ಕಂಡು ಬಂದಿದೆ. 1997ರಿಂದ 2001ರವರೆಗೆ 78,737 ರೈತರ ಆತ್ಮಹತ್ಯೆಗಳು ದಾಖಲಾದವು, ಅಂದರೆ ವಾರ್ಷಿಕ ಸರಾಸರಿ 15,747. 2001ರಿಂದ 2005ರ ನಡುವೆ ಒಟ್ಟು 70,507 ಪ್ರಕರಣಗಳು ದಾಖಲಾದವು. ಅಂದರೆ ವಾರ್ಷಿಕ ಸರಾಸರಿ 17,627ಕ್ಕೆ ಏರಿತು.



ಇಲ್ಲಿ ಗೇಣಿದಾರರು ಮಹಿಳೆಯರು. ರೈತರಲ್ಲ!!

ಈ ಅಂಕಿ-ಅಂಶಗಳು ಕೂಡಾ ಸಮಗ್ರವೇನೂ ಅಲ್ಲ ಎನ್ನುತ್ತಾರೆ ಪ್ರೊ. ನಾಗರಾಜ್. ಬಹುಶಃ ಇವು ಕನಿಷ್ಟ ಸಂಖ್ಯೆಗಳು ಎನ್ನುವುದೇ ಹೆಚ್ಚು ಸರಿ. ಏಕೆಂದರೆ ಸ್ವಂತ ಹೊಲ ಹೊಂದಿರುವಾತನನ್ನು ಮಾತ್ರ ರೈತ ಎಂದು ದಾಖಲಿಸಲಾಗುತ್ತದೆ. ಆದ್ದರಿಂದ ಗೇಣಿದಾರರು, ಮಹಿಳಾ ರೈತರು ಲೆಕ್ಕಕ್ಕೆ ಬರುವುದಿಲ್ಲ.

ಎಲ್ಲಿ ತೀವ್ರತೆ - ಯಾಕೆ?

ಈ ಐದು ರಾಜ್ಯಗಳಲ್ಲೇ ಹೆಚ್ಚು ಆತ್ಮಹತ್ಯೆಗಳು ಸಂಭವಿಸಲು ಕಾರಣ ಈ ಮೇಲೆ ಹೇಳಿದಂತೆ ಇವು ಹಣದ ಬೆಳೆಗಳ, ವಾಣಿಜ್ಯ ಕೃಷಿಯ ಪ್ರದೇಶಗಳು. ತೊಂಭತ್ತರ ದಶಕದಿಂದ ಇಡೀ ದೇಶದಲ್ಲಿ ವ್ಯಾಪಿಸಿರುವ ಕೃಷಿ ಬಿಕ್ಕಟ್ಟು ಈ ಪ್ರದೇಶಗಳನ್ನು ಅತಿ ಹೆಚ್ಚಾಗಿ ತಟ್ಟಿದೆ. ಸಾಗುವಳಿ ಖರ್ಚು ಏರಿದೆ, ಕೆಲವು ಲಾಗುವಾಡುಗಳ ಖರ್ಚು ಇಮ್ಮಡಿಗೊಂಡಿದೆ. ಜತೆಗೆ ಕೃಷಿಯಲ್ಲಿ ಸರಕಾರಗಳ ಹೂಡಿಕೆಯೆಂಬುದೇ ಇಲ್ಲವಾಗಿದೆ. ಅದರೊಂದಿಗೆ ಜಮೀನು ಮತ್ತು ನೀರಿನ ಸಮಸ್ಯೆಗಳು. ಅತ್ತ ಈ ವಾಣಿಜ್ಯ ಬೆಳೆಗಳ ಬೆಲೆಗಳು ಕುಸಿದಿವೆ. ಉದಾ: ಅಮೆರಿಕ ಮತ್ತು ಯುರೋಪಿಯನ್ ದೇಶಗಳು ತಮ್ಮ ಬೆಳೆಗಾರರಿಗೆ ನೀಡುವ ಅಪಾರ ಸಬ್ಸಿಡಿಗಳಿಂದಾಗಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹತ್ತಿಯ ಬೆಲೆ ಇಳಿದಿದೆ. ಇದು ವಿದರ್ಭಾದ ರೈತರನ್ನು ಬಹುವಾಗಿ ತಟ್ಟಿದೆ. ಅಲ್ಲದೆ ಕೃಷಿ ವ್ಯಾಪಾರದಲ್ಲಿ ಪ್ರವೇಶಿಸಿರುವ ದೊಡ್ಡ ಕಂಪನಿಗಳ ಹಿಡಿತ ಬೆಲೆಗಳನ್ನು ವಿರೂಪಗೊಳಿಸಿದೆ. ಇವೆಲ್ಲವುಗಳಿಂದಾಗಿ ತೊಂಭತ್ತರ ದಶಕದಿಂದ ರೈತರು ಸಾಲದ ಬಲೆಯಲ್ಲಿ ಸಿಲುಕಿಕೊಂಡಿದ್ದಾರೆ, ಅವರಿಗೆ ಕನಿಷ್ಟ ಜೀವನ ಬೆಂಬಲವೂ ಇಲ್ಲವಾಗಿದೆ ಎನ್ನುತ್ತಾರೆ ಪ್ರೊ. ನಾಗರಾಜ್.

ಕೇರಳದಲ್ಲಿ ಪರಿಸ್ಥಿತಿ ಸುಧಾರಣೆ

ಕೇರಳದಲ್ಲಿ ಪರಿಸ್ಥಿತಿ ಸುಧಾರಿಸಲು ಕಾರಣ ಅಲ್ಲಿ 2005ರಲ್ಲಿ ಎಲ್‌ಡಿಎಫ್ ಸರಕಾರ ಬಂದ ಮೇಲೆ ಒಂದು "ಸಾಲ ಪರಿಹಾರ ಆಯೋಗ" ವನ್ನು ನೇಮಿಸಿ ಕೆಲವು ಕ್ರಮಗಳನ್ನು ಕೈಗೊಂಡದ್ದರಿಂದ ಎಂಬುದನ್ನು ಪ್ರೊ. ನಾಗರಾಜ್ ಗಮನಿಸುತ್ತಿದ್ದಾರೆ. ಈ ಆಯೋಗ ಪ್ರತಿಯೊಬ್ಬ ರೈತನ ಸಾಲದ ತಪಾಸಣೆ ನಡೆಸಿತು. ಅತ್ತ ಸರಕಾರ ಬ್ಯಾಂಕುಗಳು ಮತ್ತು ಲೇವಾದೇವಿಗಾರರ ಜೀವ ಹಿಂಡುವ ರೀತಿಯ ವಸೂಲಾತಿಗಳನ್ನು ನಿಲ್ಲಿಸಿತು. ಆಯೋಗದ ಶಿಫಾರಸಿನ ಮೇಲೆ ಇಡೀ ವೈನಾಡು ರೆವಿನ್ಯೂ ಜಿಲ್ಲೆಯನ್ನು ಸಂಕಟ-ಪೀಡಿತ ಜಿಲ್ಲೆಯೆಂದು ಘೋಷಿಸಲು ಸರಕಾರ ನಿರ್ಧರಿಸಿತು. ಸ್ವಲ್ಪ ಮಟ್ಟಿಗೆ ಆಂಧ್ರಪ್ರದೇಶದಲ್ಲಿಯೂ ಇಂತಹ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಪಂಜಾಬ, ಹರ್‍ಯಾಣ, ರಾಜಸ್ತಾನ ಮತ್ತು ಗುಜರಾತಿನಲ್ಲಿ ಈ ಅಂಕೆ-ಸಂಖ್ಯೆಗಳ ಪ್ರಕಾರ ರೈತರ ಆತ್ಮಹತ್ಯೆಗಳ ಪ್ರಕರಣಗಳು ಕಡಿಮೆ. ಆದರೆ ಈ ಅಂಕಿ-ಅಂಶಗಳಿಗೆ ಅಲ್ಲಿನ ರೈತ ಸಂಘಟನೆಗಳು ಸವಾಲು ಹಾಕಿವೆ. ಉದಾಹರಣೆಗೆ, ಗುಜರಾತಿನಲ್ಲಿ ಕೀಟನಾಶಕಗಳಿಂದಾದ ಆತ್ಮಹತ್ಯೆಗಳ ಸಂಖ್ಯೆ ರೈತರ ಆತ್ಮಹತ್ಯೆಗಳ ಸಂಖ್ಯೆಗಿಂತ 84ಶೇ. ಹೆಚ್ಚಿದೆ. ಅಖಿಲ ಭಾರತ ಮಟ್ಟದಲ್ಲಿ ಈ ವ್ಯತ್ಯಾಸ ಕೇವಲ 28ಶೇ. ಮೇಲೆ ಹೇಳಿದ ನಾಲ್ಕು ಅತಿ ಹೆಚ್ಚು ರೈತರ ಆತ್ಮಹತ್ಯೆಗಳ ರಾಜ್ಯಗಳಲ್ಲೂ ಈ ವ್ಯತ್ಯಾಸ 21ಶೇ. ಮಾತ್ರ. ಆದ್ದರಿಂದ ಗುಜರಾತಿನಲ್ಲಿ ಹಲವು ರೈತರ ಆತ್ಮಹತ್ಯೆಗಳು ಕೀಟನಾಶಕ ಆತ್ಮಹತ್ಯೆಗಳೆಂದು ದಾಖಲಾಗಿರಬಹುದೇ ಎಂಬ ಸಂದೇಹ ಬರುವುದು ಸಹಜ.

1997ರಿಂದ 2005ರ ವರೆಗೆ ಭಾರತದಲ್ಲಿ ರೈತರ ಆತ್ಮಹತ್ಯೆಗಳು

ವರ್ಷ	ಮಹಾರಾಷ್ಟ್ರ ಒಟ್ಟು	ಮಧ್ಯಪ್ರದೇಶ ಒಟ್ಟು	ಕರ್ನಾಟಕ ಒಟ್ಟು	ಆಂಧ್ರಪ್ರದೇಶ ಒಟ್ಟು	4 ರಾಜ್ಯಗಳಲ್ಲಿ	ಭಾರತದಲ್ಲಿ	ಭಾರತದ 4 ರಾಜ್ಯಗಳಲ್ಲಿ
1997	1917	2390	1832	1097	7236	13622(100)	53
1998	2409	2278	1883	1813	8383	160159(118)	52
1999	2423	2654	2379	1974	9430	16082(118)	59
2000	3022	2660	2630	1525	9837	16603(122)	59
2001	3536	2824	2505	1509	10374	16415(121)	63
2002	3695	2578	2340	1896	10509	17971(132)	58
2003	3836	2511	2678	1800	10825	17164(126)	63
2004	4147	3033	1963	2666	11809	18241(134)	65
2005	3926	2660	1883	2490	10959	17131(126)	64
ಒಟ್ಟು	28911	23588	20093	16770	89362	149244	60

ಮೂಲ: ಭಾರತ ಸರಕಾರದ ಗೃಹ ಮಂತ್ರಾಲಯ ಪ್ರಕಟಿಸುವ "ಭಾರತದಲ್ಲಿ ಆಕಸ್ಮಿಕ ಸಾವುಗಳು ಮತ್ತು ಆತ್ಮಹತ್ಯೆಗಳು" 7ನೇ ಕಾಲಂ ದೇಶದಲ್ಲಿ ರೈತರ ಒಟ್ಟು ಆತ್ಮಹತ್ಯೆಗಳ ಸಂಖ್ಯೆಯನ್ನು ಕೊಡುತ್ತದೆ. ಆವರಣದಲ್ಲಿ ಇರುವ ಸಂಖ್ಯೆ 1997ರ 100ಕ್ಕೆ ಹೋಲಿಸಿದರೆ ಎಷ್ಟು ಪ್ರಮಾಣದಲ್ಲಿ ಹೆಚ್ಚಿದೆ ಎಂಬುದನ್ನು ಸೂಚಿಸುತ್ತದೆ.

(ಕೃಪೆ: 'ದಿ ಹಿಂದೂ' ದೈನಿಕ 12-15 ನವೆಂಬರ್, 2007)

ಮಂಗಳೂರು ರೈಲು....

ಪುಟ 3 ರಿಂದ

ವಾಜಪೇಯಿಯವರು. ಅವರ ಅಧಿಕಾರ ಅವಧಿಯ 6 ವರ್ಷಗಳ ಕಾಲದ ಬಜೆಟ್ಟಿನಲ್ಲಿ ಈ ಮಾರ್ಗಕ್ಕಾಗಿ ಮೀಸಲಿಟ್ಟ ಹಣ ಹಳಿ ಹಾಕುವ, ಪ್ರದೇಶವನ್ನು ಸಮತಟ್ಟು ಮಾಡಲೂ ಸಾಕಾಗಿಲ್ಲ. ಇದೇ ರೀತಿ ಬಿಜಾಪುರ, ಗದಗ ಬ್ರಾಡ್‌ಗೇಜ್‌ಗಾಗಿ 2003, 2004ರಲ್ಲಿ 53 ದಿನಗಳ ಅವಿರತ ಹೋರಾಟ ನಡೆದಿತ್ತು. ಅಂದು ಹೋರಾಟದಲ್ಲಿ ಭಾಗವಹಿಸಿದ ಮುಖಂಡರೆಲ್ಲ ಅಂದಿನ ಬಿಜೆಪಿ ಮುಖಂಡ ವಿಜಯ ಸಂಕೇಶ್ವರರ ವಿಆರ್‌ಎಲ್ ಬಸ್ಸುಗಳಿಗೆ ಹಾನಿಯಾಗುತ್ತದೆಯೆಂದು ಬಿಜಾಪುರ, ಗದಗ ಬ್ರಾಡ್‌ಗೇಜ್ ಪರಿವರ್ತನೆ ಆಗುತ್ತಿಲ್ಲ ಎಂದು ಆಪಾದಿಸಿದರು. ಬಿಜಾಪುರ, ಗದಗ ಬ್ರಾಡ್‌ಗೇಜ್ ಆದರೆ ಬೆಂಗಳೂರಿನಿಂದ ಉತ್ತರ ಕರ್ನಾಟಕದ ಹಲವಾರು ನಗರಗಳಿಗೆ ನೇರ ಸಂಪರ್ಕವಾಗುತ್ತದೆ. ಇದರಿಂದ ಉತ್ತರಕರ್ನಾಟಕದಲ್ಲಿ ನೂರಾರು ಬಸ್ಸುಗಳನ್ನು ಓಡಿಸುತ್ತಿರುವ ವಿಜಯಸಂಕೇಶ್ವರ ಮಾಲಕತ್ವದ ವಿ.ಆರ್.ಎಲ್.ಗೆ ನಷ್ಟವುಂಟಾಗುತ್ತದೆ.

ಹೀಗೆ ಖಾಸಗಿ ಬಸ್ಸು ಮಾಲಿಕರೊಂದಿಗೆ ಷಾಮೀಲಾಗಿರುವ ಬಿಜೆಪಿಯವರಿಗೆ ರೈಲುಮಾರ್ಗ ಆರಂಭಿಸಿ ಎಂದು ಹೇಳುವ ನೈತಿಕ ಹಕ್ಕು ಎಲ್ಲಿದೆ? ಮೇಲಾಗಿ ಇಲ್ಲಿ ಈಗ ಬೊಬ್ಬೆ ಹೊಡೆಯುತ್ತಿರುವವರು ಸಂಸತ್ತಿನ ರೈಲ್ವೇ ಸ್ಥಾಯಿ ಸಮಿತಿಯಲ್ಲಿ ಸದಸ್ಯರು ಮಾತೇ ಆಡುತ್ತಿಲ್ಲ ಏಕೆ?

- ಬಾಲಕೃಷ್ಣಶೆಟ್ಟಿ

ಯಡ್ಯೂರಪ್ಪಗೆ ಅಪಘಾತ ನಾಡಿಗೆ ತಪ್ಪಿದ ಆಘಾತ

ಕಣ್ಣಿಡಿದು ಅಮಲೇರಿದ ವಾಹನ ಚಾಲಕನೊಬ್ಬ ರಸ್ತೆ ಅಪಘಾತದಲ್ಲಿ ಜೀವ ಕಳೆದುಕೊಳ್ಳುವಂತೆ ಅಧಿಕಾರ ದಾಹದಿಂದ ಕಣ್ಣು ಕಳೆದುಕೊಂಡ ಯಡ್ಯೂರಪ್ಪ ಅಧಿಕಾರವನ್ನೂ ಕಳೆದುಕೊಂಡಿದ್ದಾರೆ. ದಕ್ಷಿಣ ಭಾರತದಲ್ಲೇ ಮೊದಲ ಬಾರಿಗೆ ಬಿಜೆಪಿ ನೇತೃತ್ವದಲ್ಲಿ ಸರ್ಕಾರ ರಚಿಸುವ ಕೆಟ್ಟ ಕನಸು ಭಗ್ನವಾಗಿದೆ. ರಾಜ್ಯದ ಜನತೆಯಂತೂ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಯಡ್ಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ ಕಾಲು ಜಾರಿ ಬಿದ್ದಿದೆ. ಅವಕಾಶವಾದಿ ಅನೈತಿಕ ಮಾರ್ಗದಿಂದ ಅಧಿಕಾರ ಕಬಳಿಸಬೇಕೆಂದು ಹೊರಟಿದ್ದ ಕೋಮುವಾದಿಗಳ ಬಗೆಗೆ ಅನುಕಂಪದ ಅಗತ್ಯವೇನೂ ಇಲ್ಲ, ಅಪಾಯಗಳ ಬಗ್ಗೆ ಎಚ್ಚರ ಅಗತ್ಯ ಅಷ್ಟೆ.

ಜನಾದೇಶವಿಲ್ಲದೆ ಗದ್ದುಗೆ ಏರುವ ಪ್ರಯತ್ನ:

ರಾಜ್ಯ ವಿಧಾನ ಸಭೆಯಲ್ಲಿ ಬಿಜೆಪಿ ಅತ್ಯಧಿಕ ಸ್ಥಾನಗಳನ್ನು ಹೊಂದಿರಬಹುದು. ಆದರೆ 2004ರ ಚುನಾವಣೆಯಲ್ಲಿ ಬಿಜೆಪಿಗೆ ಸಿಕ್ಕ ಮತಗಳೆಷ್ಟು? ಶೇ.28 ಮಾತ್ರ! ಅಂದರೆ ಶೇ.62 ರಷ್ಟು ಮತದಾರರು ಬಿಜೆಪಿಗೆ ವಿರುದ್ಧವಾಗಿ ಬೇರೆ ಪಕ್ಷಗಳಿಗೆ ಮತ ಹಾಕಿದ್ದಾರೆ. ಹೀಗಾಗಿ ರಾಜ್ಯದಲ್ಲಿ ಸರ್ಕಾರ ನಡೆಸಲು ಬಿಜೆಪಿಗೆ ಜನಾದೇಶ ಇರಲಿಲ್ಲ. ಬಾಯಿ ತೆರೆದಾಗೊಮ್ಮೆ 'ನಮಗೆ ಜನರ ಮೇಲೆ ವಿಶ್ವಾಸ ಇದೆ. ನಮಗೆ ಜನತೆಯ ಆಶೀರ್ವಾದ ಇದೆ' ಎನ್ನುವ ಯಡ್ಯೂರಪ್ಪನವರಿಗೆ 2004ರ ಚುನಾವಣೆಯಲ್ಲಿ ಜನತೆ ನೀಡಿದ ತೀರ್ಪು ಅರ್ಥವಾದಂತೆ ಕಾಣುವುದಿಲ್ಲ. ಜನತೆ ಬಯಸದಿದ್ದರೂ ತಾವು ಅಧಿಕಾರಕ್ಕೆ ಬರಬೇಕೆಂಬ ಇವರ ದುರಾಸೆಗೆ ಈಗ ಸರಿಯಾದ ಶಿಕ್ಷೆಯಾಗಿದೆ. ಜಾತ್ಯಾತೀತ ಜನತಾದಳದ ಅಸಹಾಯಕತೆಯ ಲಾಭ ಪಡೆಯುವ ಅದರ ಹುನ್ನಾರ ನೆಲಕಚ್ಚಿದೆ.

2004ರ ಜನಾದೇಶದ ಪ್ರಕಾರ ಬಿಜೆಪಿ ಒಂದು ವಿರೋಧ ಪಕ್ಷವಾಗಿ ಕೆಲಸ ಮಾಡಬೇಕಾದದ್ದು ಅದರ ಧರ್ಮವಾಗಿತ್ತು. ಆದರೆ ಧರ್ಮಸಿಂಗ್ ನೇತೃತ್ವದ ಸರ್ಕಾರ ಅಸ್ತಿತ್ವದಲ್ಲಿದ್ದಾಗ, ಯಡ್ಯೂರಪ್ಪನವರು ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕರಾಗಿದ್ದರೂ ಜನತೆಯು ಎದುರಿಸುತ್ತಿದ್ದ ಸಮಸ್ಯೆಗಳಿಗಾಗಿ ಹೋರಾಡುವ ಬದಲು, ಧರ್ಮಸಿಂಗ್ ಅವರ ಆಪ್ತ ಸಲಹೆಗಾರರಾಗಿ ಕೆಲಸ ಮಾಡಿದರು. ತಮ್ಮ ಶಿಷ್ಯೆ ಶೋಭಾ ಕರಂದ್ಲಾಜೆ ಅವರಿಗೆ 'ಮುಖ್ಯಮಂತ್ರಿ ವಿವೇಚನಾ ಕೋಟಾ'ದಲ್ಲಿ ಬಿಡಿಎ ನಿವೇಶನವನ್ನು ಯಡ್ಯೂರಪ್ಪ ಗಿಟ್ಟಿಸಿಕೊಂಡದ್ದು ಇದೇ ಅವಧಿಯಲ್ಲಿ! ಧರ್ಮಸಿಂಗ್ ಅವರ 20 ತಿಂಗಳ ಅಧಿಕಾರ ಅವಧಿಯಲ್ಲಿ ರಾಜ್ಯದಲ್ಲಿ ಅಧಿಕೃತ ವಿರೋಧ ಪಕ್ಷ ಎನ್ನುವುದು ಆ ರೀತಿ ಇರಲೇ ಇಲ್ಲ.



ಇದೇನು ನರೇಂದ್ರಮೋದಿ ಸ್ಟೈಲಾ?



ನೆತ್ತಿಗೇರಿದ ಅಧಿಕಾರ ದಾಹ:

'ಪಾಪ! ಯಡ್ಯೂರಪ್ಪಗೆ ಹೀಗಾಗಬಾರದಾಗಿತ್ತು' ಎಂಬ ಮಾತು ಅಲ್ಲಲ್ಲಿ ಕೇಳಿ ಬರುತ್ತಿದೆ. ಆದರೆ ಅವರಲ್ಲಿ ತುಂಬಿ ತುಳುಕುತ್ತಿರುವ ಅಧಿಕಾರ ಲಾಲಸೆಯನ್ನು ಬಲ್ಲವರು ಯಾರೂ ಅನುಕಂಪ ವ್ಯಕ್ತಪಡಿಸುವುದಿಲ್ಲ. ಅಧಿಕಾರಕ್ಕಾಗಿ ತಾನು 35 ವರ್ಷಗಳಿಂದ ಬೆಳೆಸಿಕೊಂಡು ಬಂದ ಪಕ್ಷವನ್ನೇ ಒಡೆದು ಹೊರಬರಲು ಯಡ್ಯೂರಪ್ಪ ಪ್ರಯತ್ನ ಪಟ್ಟಿರಲಿಲ್ಲವೇ?

ಇದು ಕೇವಲ ಯಡ್ಯೂರಪ್ಪನವರ ವ್ಯಕ್ತಿಗತವಾದ ಅಧಿಕಾರ ದಾಹವಲ್ಲ. ಇದು ಬಿಜೆಪಿ ಪಕ್ಷದ ಅಧಿಕಾರ ದಾಹ! ಕಾಂಗ್ರೆಸ್ ಮತ್ತು ಜೆಡಿ(ಎಸ್) ನಡುವೆ ಸಂಬಂಧ ಹದಗೆಟ್ಟಾಗ ಅದರ ಲಾಭ ಪಡೆಯಲು ಬಿಜೆಪಿ ಕುಮಾರಸ್ವಾಮಿಯವರೊಂದಿಗೆ ಗುಟ್ಟಾಗಿ ವ್ಯವಹಾರ ಶುರುಮಾಡಿದ್ದು ಅಧಿಕಾರ ದಾಹವಲ್ಲವೇ? ಸೈದ್ಧಾಂತಿಕ ಸಹಮತ ಇಲ್ಲದ ಒಂದು ಪಕ್ಷದೊಂದಿಗೆ ಕೈ ಜೋಡಿಸಿ ಸರ್ಕಾರ ನಡೆಸಲು ಮುಂದಾಗುವುದು ಅಧಿಕಾರ ದಾಹವಲ್ಲದೆ ಮತ್ತೇನು?

ಬಿಜೆಪಿಯ ಅಧಿಕಾರ ದಾಹ ಮತ್ತು ಜೆಡಿ(ಎಸ್)ನ ಸಮಯಸಾಧಕತನಗಳ ನಡುವೆ ಒಪ್ಪಂದವಾಗಿ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬಂತು. ಆಗಲೂ ಯಡ್ಯೂರಪ್ಪ ನವರ ಅಧಿಕಾರ ದಾಹ ಇಂಗಲಿಲ್ಲ. ಉಪಮುಖ್ಯಮಂತ್ರಿಯಾಗಿ ಇಷ್ಟು ಗಳಿಕೆ ಸಾಧ್ಯವಾದರೆ ಮುಖ್ಯಮಂತ್ರಿಯಾಗಿ ಇನ್ನೆಷ್ಟು ಗಳಿಸಬಹುದು ಎಂಬ ಲೆಕ್ಕಾಚಾರವೇ ಅವರ ತಲೆ ಕೆಡಿಸಿತು. ಇತ್ತ ಬಿಜೆಪಿಗೆ ಕರ್ನಾಟಕದಲ್ಲಿ ತನ್ನ ನೆಲೆಯನ್ನು ಭದ್ರಗೊಳಿಸಲು ಸಿಕ್ಕ ಅವಕಾಶ ಕೈ ತಪ್ಪಿಹೋಗಬಹುದೆಂಬ ಆತಂಕ. ಬಿಜೆಪಿಯನ್ನು ತನ್ನ ಮುಷ್ಠಿಯಲ್ಲಿಟ್ಟು ಕೊಂಡಿರುವ ಆರ್‌ಎಸ್‌ಎಸ್‌ಗೆ ತನ್ನ ಗುಪ್ತ ಅಜೆಂಡಾವನ್ನು ಕರ್ನಾಟಕದಲ್ಲಿ ಅನಾವರಣಗೊಳಿಸುವ ಅವಸರ. ಜೆಡಿ(ಎಸ್) ತಮಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡುವುದಿಲ್ಲ ಎಂದಾದಾಗ ಇವರಿಗೆ 'ಕೈಗೆ ಬಂದದ್ದು ಬಾಯಿಗೆ ಬರಲಿಲ್ಲವಲ್ಲಾ' ಎಂಬ ಆಘಾತ. ರಾಜಭವನಕ್ಕೆ ಧಾವಿಸಿದ ಇವರು ಜೆಡಿ(ಎಸ್) ನೇತೃತ್ವದ ಸರ್ಕಾರಕ್ಕೆ ಕೊಟ್ಟ ಬೆಂಬಲವನ್ನು ವಾಪಸ್ ಪಡೆಯುವ ಪತ್ರವನ್ನು ರಾಜ್ಯಪಾಲರಿಗೆ ಕೊಟ್ಟಿದ್ದು ಮಾತ್ರವಲ್ಲ ವಿಧಾನ ಸಭೆಯನ್ನು ವಿಸರ್ಜಿಸಿ ಚುನಾವಣೆ ಘೋಷಣೆಗೆ ಏರ್ಪಾಡು ಮಾಡಬೇಕೆಂದು ಒತ್ತಾಯಿಸಿದರು.

ಬಿಜೆಪಿ ಈ ನಿಲುಮೆಗೂ ಬದ್ಧವಾಗಿ ನಿಲ್ಲಲಿಲ್ಲ. ಆದರ ಅಧಿಕಾರ ದಾಹ ನೆತ್ತಿಗೇರಿತ್ತು. ಜೆಡಿ(ಎಸ್) ವಿರುದ್ಧ ಧರ್ಮಯಾತ್ರೆ ಆರಂಭಿಸಿದ ಇವರು ಮತ್ತೆ ಅಧಿಕಾರ ಸಿಗುತ್ತದೆ ಎಂಬ ಸುಳಿವು ಸಿಕ್ಕ ತಕ್ಷಣ ಧರ್ಮವನ್ನು ಯಾತ್ರೆಯನ್ನೂ ಕೈ ಬಿಟ್ಟರು. ಯಡ್ಯೂರಪ್ಪ ತುಮಕೂರಿನಿಂದ ಎದ್ದೂ ಬಿದ್ದು ರಾಜಧಾನಿಗೆ ತಲುಪಿದರು. ಧರ್ಮ ಯುದ್ಧದ ರಣಕಹಳೆ ಈಗ ಕುಮಾರಸ್ವಾಮಿಯವರ ಗ ಂ ಣ ಗಾ ನ್ ವಾ ಗಿ ಮಾರ್ಪಾಡಾಗಿದ್ದನ್ನು ಕಂಡು, ಕೇಳಿ ಬೆಂಗಳೂರಿನ ಜನ ಅಸಹ್ಯಪಡುವಂತಾಗಿತ್ತು.

ನಿತ್ಯಾನಂದಸ್ವಾಮಿ

ಅನಂತರದ ನಾಟಕ ನಾಡಿನ ಜನತೆಗೆ ಸಾಕಷ್ಟು ಮನೋರಂಜನೆಯನ್ನು ಒದಗಿಸಿದೆ. ಸರ್ಕಾರ ರಚನೆಗೆ ಹಕ್ಕು ಮಂಡಿಸಲಾಯಿತು. ಅಗತ್ಯ ಶಾಸಕರ ಬೆಂಬಲ ಪತ್ರ ಸಲ್ಲಿಸಲಾಯಿತು. ರಾಜ್ಯಪಾಲರ ತೀರ್ಮಾನಕ್ಕೂ ಕಾಯಲು ಸಿದ್ಧವಿಲ್ಲದ ಬಿಜೆಪಿ ಅದನ್ನು ಬೀದಿ ರಂಪವನ್ನಾಗಿಸಲು ಮುಂದಾಯಿತು. ಗಾಂಧಿ ಪ್ರತಿಮೆ ಬಳಿ ಆರಂಭಿಸಲಾದ ಅನಿರ್ದಿಷ್ಟ ಧರಣಿ ಸತ್ಯಾಗ್ರಹಕ್ಕೆ ನಿರೀಕ್ಷಿಸಿದಷ್ಟು ಸಹಾನುಭೂತಿ ವ್ಯಕ್ತವಾಗದಿದ್ದಾಗ ಆದನ್ನು ನಿಲ್ಲಿಸಬೇಕಾಯಿತು. ತಮಗೆ ಬೆಂಬಲ ಘೋಷಿಸಿರುವ ಶಾಸಕರನ್ನು ರಾಜ್ಯಪಾಲರ ಮುಂದೆ ಪರೇಡ್ ಮಾಡಿಸಿದ್ದಲ್ಲದೆ ಅವರನ್ನು ರಾಷ್ಟ್ರಪತಿಯ ಮುಂದೆ ಕರೆದುಕೊಂಡು ಹೋಗಿ ಸಾಲಾಗಿ ನಿಲ್ಲಿಸಿದ್ದು ಬಿಜೆಪಿಯ ಅಧಿಕಾರ

ವಿಶ್ವಾಸದ್ರೋಹ...! ಯಾರಿಗೆ... ಯಾರಿಂದ?

ವಿಶ್ವಾಸ ದ್ರೋಹ...! ಯಾರಿಗೆ... ಯಾರಿಂದ?: ಈ ಸಲ ಬಿಜೆಪಿಗೆ ಬೇಷರತ್ ಬೆಂಬಲ ನೀಡಿದ್ದ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದಿದ್ದ ಸರ್ಕಾರಕ್ಕೆ ಬಹುಮತ ಸಾಬೀತು ಮಾಡುವ ವೇಳೆಗೆ ಷರತ್ತುಗಳ ನೆಪವೊಡ್ಡಿ ಬೆಂಬಲ ವಾಪಸ್ ಪಡೆದ ಜೆಡಿ(ಎಸ್) ಕ್ರಮ ಇಂದು ರಾಜ್ಯಾದ್ಯಂತ ಚರ್ಚೆಯ ಪ್ರಮುಖ ವಿಷಯವಾಗಿದೆ. ಬಿಜೆಪಿಗೆ-ಜೆಡಿ(ಎಸ್) ವಿಶ್ವಾಸ ದ್ರೋಹ ಮಾಡಿದೆ ಎಂಬ ಆರೋಪದಲ್ಲಿ ಹುರುಳಿಲ್ಲ ಎನ್ನಲಾಗದು. ಆದರೆ ಈ ಎರಡು ಪಕ್ಷಗಳ ನಡುವೆ ಎಂದಾದರೂ ಪರಸ್ಪರ ವಿಶ್ವಾಸ ಇತ್ತಾ? 2004ರ ವಿಧಾನಸಭಾ ಚುನಾವಣೆಯಲ್ಲಿ ಮಾತ್ರವಲ್ಲ ಒಟ್ಟಿಗೆ ಅಧಿಕಾರ ಹಂಚಿಕೊಂಡು ಸರ್ಕಾರ ನಡೆಸುತ್ತಿರುವಾಗ ನಡೆದ ಪೌರ ಚುನಾವಣೆಗಳ ಸಂದರ್ಭದಲ್ಲಿ ಇವರ ನಡುವೆ ಪರಸ್ಪರ ವಿಶ್ವಾಸ ಇತ್ತಾ? ಜೆಡಿ(ಎಸ್) ಕಾಂಗ್ರೆಸ್ ಸಖ್ಯತೆಯನ್ನು ತೊರೆದು ಬಂದಾಗ ಅದು ಕಾಂಗ್ರೆಸ್ಸಿಗೆ ಜೆಡಿ(ಎಸ್) ಮಾಡಿದ ವಿಶ್ವಾಸ ದ್ರೋಹ ಎಂದು ಬಿಜೆಪಿ ಹೇಳಲಿಲ್ಲವಲ್ಲ. ಕಾಂಗ್ರೆಸ್ಸಿಗೆ ವಿಶ್ವಾಸದ್ರೋಹ ಮಾಡಿದ ಜೆಡಿ(ಎಸ್)ನೊಂದಿಗೆ ಕೈ ಜೋಡಿಸುವಾಗ ಬಿಜೆಪಿಗೆ-ಜೆಡಿ(ಎಸ್) ಮೇಲೆ ಇದ್ದದ್ದು ವಿಶ್ವಾಸವಲ್ಲ, ಕೇವಲ ಅಧಿಕಾರ ದಾಹ ಮಾತ್ರ.

ಒಪ್ಪಂದದಂತೆ ಮುಖ್ಯಮಂತ್ರಿ ಸ್ಥಾನ ಹಸ್ತಾಂತರ ಮಾಡಲು ಹಿಂದೇಟು ಹಾಕುವ ಮೂಲಕ ವಚನ ಭ್ರಷ್ಟರಾದ ಕುಮಾರಸ್ವಾಮಿ ಅವರ ಮೇಲೆ ಮತ್ತೆ ಹೇಗೆ ಬಿಜೆಪಿಗೆ ವಿಶ್ವಾಸ ಹುಟ್ಟಿತು? ಬಿಜೆಪಿಯವರು ರಾತ್ರಿ ಕಂಡ ಬಾವಿಗೆ ಹಗಲಲ್ಲಿ ಬಿದ್ದಂತಾಗಿದೆ ಎಂದು ಬಣ್ಣಿಸಲಾಗುತ್ತಿದೆ. ಆದರೆ ಬಿಜೆಪಿಯನ್ನು ಸರಿಯಾಗಿ ಬಲ್ಲವರು ಹೀಗೆನ್ನಲಾರರು. ಅವರು ಬಾವಿಗೆ ಬೀಳುವಷ್ಟು ಮುಗ್ಧರಲ್ಲ. ಇನ್ನೊಬ್ಬರನ್ನು ಬಾವಿಗೆ ತಳ್ಳುವಲ್ಲಿ ನಿಸ್ಸೀಮರು. ಈಗ ಜೆಡಿ(ಎಸ್) ಅನ್ನು ಬಾವಿಗೆ ತಳ್ಳಲಾಗಿಲ್ಲವಲ್ಲಾ ಎಂಬುದೇ ಅವರ ಚಿಂತೆ.

ಇಬ್ಬರು ಕಳ್ಳರ ಗುರಿ ಒಂದೇ ಆಗಿರುತ್ತದೆ. ಆದರೆ ಅವರ ನಡುವೆ ವಿಶ್ವಾಸ ಇರುವುದಿಲ್ಲ. ಆತ ನನಗಿಂತ ಹೆಚ್ಚು ಗಿಟ್ಟಿಸಿಕೊಂಡಾನು ಎಂಬ ಆತಂಕ ಈತನನ್ನು ಕಾಡುತ್ತಿರುತ್ತದೆ. ಜೆಡಿ(ಎಸ್) ಮತ್ತು ಬಿಜೆಪಿ ಪಕ್ಷಗಳಲ್ಲಿ ಆಳವಾಗಿ ಇದ್ದುದು ಸಂಶಯದ ಸರ್ಪ. ಅವರು ಇವರನ್ನು ನಂಬುವಂತಿರಲಿಲ್ಲ. ಇವರು ಅವರನ್ನು ನಂಬುವಂತಿರಲಿಲ್ಲ. ಪರಸ್ಪರ ನಂಬಿಕೆ ಇದ್ದಿದ್ದರೆ ಬಿಜೆಪಿ ಶಾಸಕ(ವಿಧಾನ ಪರಿಷತ್ ಸದಸ್ಯ) ಜನಾರ್ದನರೆಡ್ಡಿ ಮುಖ್ಯಮಂತ್ರಿ ಕುಮಾರಸ್ವಾಮಿ ಮೇಲೆ 150 ಕೋಟಿ ರೂ.ಗಳ ಲಂಚದ ಆರೋಪ ಮಾಡಲು ಸಾಧ್ಯವೇ? ಮಂತ್ರಿಯಾಗಿದ್ದ ಶ್ರೀರಾಮುಲು ಕುಮಾರಸ್ವಾಮಿ ಮೇಲೆ ಕೊಲೆಯ ಆರೋಪ ಹೊರಿಸಲು ಸಾಧ್ಯವಿತ್ತೇ? ಅಂತಹ ಕುಮಾರಸ್ವಾಮಿಯೊಂದಿಗೆ ಇವರು ಎರಡನೇ ಬಾರಿ ಕೈ ಜೋಡಿಸಲು ಮುಂದಾದ್ದು ಯಾಕೆ? ಎರಡು ಪಕ್ಷಗಳ ನಡುವೆ ಅಷ್ಟೊಂದು ವಿಶ್ವಾಸ ಇದ್ದಿದ್ದರೆ ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಪರಸ್ಪರ ಚರ್ಚೆ ಮಾಡಿ ಇತ್ಯರ್ಥಪಡಿಸಬಹುದಿತ್ತಲ್ಲವೇ? ಎರಡೂ ಪಕ್ಷಗಳ ನಡುವೆ ಮೂಲಭೂತವಾಗಿ ವಿಶ್ವಾಸವೇ ಇಲ್ಲದಿದ್ದಾಗ ಈಗ ವಿಶ್ವಾಸ ದ್ರೋಹವಾಗಿದೆ ಎಂದು ಕೂಗಾಡಿದರೆ ಯಾರು ಇವರನ್ನು ನಂಬುತ್ತಾರೆ. ಈ ರಾಜಕೀಯ ದೊಂಬರಾಟದಿಂದಾಗಿ ರಾಜಕೀಯ ಪಕ್ಷಗಳ ಮೇಲೆ ಜನತೆ ವಿಶ್ವಾಸ ಕಳೆದುಕೊಳ್ಳುವಂತಾಗುತ್ತಿರುವುದು ಯೋಚಿಸಬೇಕಾದ ವಿಷಯವಾಗಿದೆ.



ಕುಮಾರ ಈಗೇನಂತಾರೆ ಸ್ವಲ್ಪ ಕೇಳಿ, ಮತ್ತೇನಿದೆ ಅಂತಾನೂ ಹೇಳಿ

"ಬಿಜೆಪಿಗೆ ಕನಿಷ್ಠ ತಿಳುವಳಿಕೆ ಇಲ್ಲ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಕಠಿಣ ಷರತ್ತುಗಳನ್ನು ವಿಧಿಸಿದ್ದಾರೆ. ಅವುಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದೆಲ್ಲ ಬಿಜೆಪಿ ಹೇಳುತ್ತಿದೆ. ಆದರೆ, ಇದೆಲ್ಲವೂ ಸುಳ್ಳು. ಷರತ್ತು ವಿಧಿಸುವ ಪದ್ಧತಿಗೆ ಚಾಲನೆ ನೀಡಿದ್ದೇ ಬಿಜೆಪಿ. ಕೇಶವ ಕೃಪದಿಂದ ಬಂದ ಆ ಪಕ್ಷದ ಪ್ರತಿನಿಧಿಯೊಬ್ಬರು ಮೊದಲ ಬಾರಿಗೆ ಷರತ್ತುಗಳನ್ನು ಒಳಗೊಂಡ ಛಾಪಾಕಾಗದದೊಂದಿಗೆ ಬಂದರು. ಈ ಷರತ್ತುಗಳನ್ನು ನೋಡಿದ ನಂತರ ದೇವೇಗೌಡರು ಅವುಗಳನ್ನು ಬದಲಾಯಿಸಿ ಇಬ್ಬರಿಗೂ ಅನುಕೂಲವಾಗುವಂತಹ ಹೊಸ ಷರತ್ತುಗಳ ಪಟ್ಟಿ ತಯಾರಿಸಿದರು.

ಈಗ ನಾವೇ ಆ ಷರತ್ತುಗಳನ್ನು ವಿಧಿಸಿದ್ದು ಎಂದು ಬಿಜೆಪಿ ಅಪಪ್ರಚಾರ ಮಾಡುತ್ತಿದೆ.



ಶರತ್ತುಗಳ ಪದ್ಧತಿಗೆ ಚಾಲನೆ ದೊರತಿದ್ದು 'ಕೇಶವಕೃಪಾ'ದಿಂದ... - ಹೆಚ್.ಡಿ.ಕೆ.

ಯಡಿಯೂರಪ್ಪ ಮೊದಲು ಸುಳ್ಳು ಹೇಳುವುದನ್ನು ನಿಲ್ಲಿಸಬೇಕು. ಬಜೆಟ್ ಮಂಡಿಸುವಾಗ ಪರಿಶಿಷ್ಟ ಜಾತಿ ಮತ್ತು ಪಂಗಡ ವರ್ಗಕ್ಕೆ ಸಾಕಷ್ಟು ಕೊಡುಗೆ ನೀಡಿದ್ದೇನೆ ಅಂತ ಯಡಿಯೂರಪ್ಪ ಹೇಳಿಕೊಂಡರು. ಆದರೆ ಈ ವರ್ಗಕ್ಕೆ ಮೀಸಲಾದ ಸ್ಕಾಲರ್‌ಶಿಪ್ ನೀಡಲು ಹಣವನ್ನೇ ಬಿಡುಗಡೆ ಮಾಡಿರಲಿಲ್ಲ. ರೈತರ ಸಾಲ ಮನ್ನಾ ನಾನೇ ಮಾಡಿದ್ದು ಅಂದರು, ಆದರೆ, ಸಂಪುಟ ಸಭೆಯಲ್ಲಿ ಇದನ್ನು ಮೊದಲು ಪ್ರಸ್ತಾಪಿಸಿದ್ದೇ ಷರತ್ತುಗಳನ್ನು ವಿಧಿಸಿದರು. ಆದರೆ, ಇದನ್ನು ಒಪ್ಪದ ಬಿಜೆಪಿ ನಮಗೆ ಗಡುವು ನೀಡತೊಡಗಿತು. ಅಲ್ಲದೇ, ಪೂರ್ಣ ಪ್ರಮಾಣದ ಸರ್ಕಾರ ಅಸ್ತಿತ್ವಕ್ಕೆ ಬರುವ ಮುನ್ನವೇ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳತೊಡಗಿದರು. ನಾನು ಮುಖ್ಯಮಂತ್ರಿಯಾಗಿದ್ದಾಗ ಸೈಕಲ್ ವಿತರಣೆಗೆ ಒಲವು ತೋರದ ಯಡಿಯೂರಪ್ಪ ಈಗ ನೀಡಿದ್ದೇಕೆ? ಈಗ ಆತುರದಲ್ಲಿ ಪಡಿತರಚೀಟಿ ವಿತರಣೆಗೆ ಮುಂದಾದರು. ಇದೆಲ್ಲ ಮಾಡಿದ್ದು ಏಕೆ ಎನ್ನುವುದು ಎಲ್ಲರಿಗೂ ಗೊತ್ತು.

ಬಿಎಂಐಸಿ ವಿಷಯದಲ್ಲಿ ಯಡಿಯೂರಪ್ಪ ಮತ್ತವರ ಶಾಸಕರು ನಡೆದುಕೊಂಡ ರೀತಿ ನೋಡಿ ನಾವು ಪಟ್ಟು ಹಿಡಿದೆವು. ಪಂಚತಾರಾ ಹೋಟೆಲಿಗೆ ಶಾಸಕರನ್ನು ಕರೆದುಕೊಂಡು ಹೋಗಿ ಯಡಿಯೂರಪ್ಪ ಬಿಎಂಐಸಿ ಮುಖ್ಯಸ್ಥರಿಂದ ಕಾಣಿಕೆ ಕೊಡಿಸಿಕೊಂಡು ಬಂದರು. ಬೆಂಗಳೂರು ಸುತ್ತಲಿನ ಕೋಟ್ಯಾಂತರ ಮೌಲ್ಯದ ಭೂಮಿಯನ್ನು ಒತ್ತುವರಿ ಮಾಡಿಕೊಡಲಾಗಿತ್ತು. ಅದನ್ನು ಸರ್ಕಾರ ಮರು ವಶಕ್ಕೆ ತೆಗೆದುಕೊಂಡಿತು."

– ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ

ದಾಹದ ಪರಾಕಾಷ್ಠೆಗೆ ಸಾಕ್ಷಿಯಾಗಿದೆ.

ಗಣಿ ಸ್ಫೋಟಕ್ಕೆ ಕುಸಿದು ಬಿದ್ದ ಸರ್ಕಾರ:

ಬಳ್ಳಾರಿಯ ಗಣಿ ಧಣಿಗಳ ಮತ್ತು ಬೆಂಗಳೂರಿನ ಲ್ಯಾಂಡ್ ಮಾಫಿಯಾಗಳ ಬೆನ್ನು ಹತ್ತಿ ಯಡ್ಯೂರಪ್ಪ 7 ದಿನಗಳ ಮುಖ್ಯಮಂತ್ರಿಯಾಗಿ ಇತಿಹಾಸ ಸೇರಿದರು. ಬಿಜೆಪಿ ಸರ್ಕಾರದ ಪತನಕ್ಕೆ ಇಲ್ಲಿದೆ ನಿಜವಾದ ಕಾರಣ. ಗಣಿ ಲೂಟಿಯ ವಿಷಯದಲ್ಲಿ ಬಳ್ಳಾರಿಯ ರೆಡ್ಡಿಗಳು ಮತ್ತು ಕುಮಾರಸ್ವಾಮಿ ಹಾವು ಮತ್ತು ಮುಂಗುಸಿಯಂತಾಗಿದ್ದರು. ಹೀಗಾಗಿ ಜೆಡಿ(ಎಸ್)-ಬಿಜೆಪಿ ಮೈತ್ರಿ ಸರ್ಕಾರಕ್ಕೆ 150 ಕೋಟಿ ರೂ. ಲಂಚದ ಆರೋಪವೇ ಮುನ್ನುಡಿಯಾಯಿತು. ನಂತರ ಬಂತು ಕುಮಾರಸ್ವಾಮಿ ಅವರ ಮೇಲೆ ಮಾಜಿ ಮಂತ್ರಿ ಶ್ರೀರಾಮುಲು ಅವರ ಕೊಲೆಯ ಆರೋಪ. ಶ್ರೀರಾಮುಲು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿ ಬಂದರೂ ದಾಖಲಾದ ಪ್ರಕರಣವನ್ನು ಹಿಂದಕ್ಕೆ ಪಡೆಯಲಾಗಿಲ್ಲ. ಈಗ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಇದೇ ಶ್ರೀರಾಮುಲು ಮತ್ತೆ ಮಂತ್ರಿಯಾಗುವ ಸೂಚನೆಗಳು ಕಂಡುಬಂದದ್ದು ದೊಡ್ಡ ಗೌಡರನ್ನು ಮತ್ತು ಸಣ್ಣ ಗೌಡರನ್ನು ಕೆರಳಿಸಲು ಕಾರಣವಾಯಿತು.

ಹೆಚ್.ಡಿ.ಕುಮಾರಸ್ವಾಮಿಯವರ ಮೇಲೆ 150 ಕೋಟಿ ರೂ. ಲಂಚದ ಆರೋಪ ಮಾಡಿದ್ದ ಜನಾರ್ಧನ ರೆಡ್ಡಿ ಬಿಜೆಪಿಗೆ ಸಾಕ್ಷಾತ್ ಹಣದ ಗಣಿಯೇ ಆಗಿದ್ದಾರೆ ಎಂಬ ವಿಷಯ ಗುಟ್ಟೇನು ಅಲ್ಲ. ಮುಂದಿನ ಚುನಾವಣೆಯಲ್ಲಿ ಉತ್ತರ ಕರ್ನಾಟಕದ 100 ವಿಧಾನಸಭಾ ಸ್ಥಾನಗಳನ್ನು ಬಿಜೆಪಿಗೆ ಗೆಲ್ಲಿಸಿ ಕೊಡುವ ಒಪ್ಪಂದಕ್ಕೆ ಅನುಗುಣವಾಗಿ ಬಳ್ಳಾರಿಯ ಗಣಿ ಧಣಿಗಳು ಕಾರ್ಯಪ್ರವೃತ್ತರಾಗಿದ್ದಾರೆ.

ಪರ್ಯಾಯ ಸರ್ಕಾರದ ರಚನೆಗೆ ಆಸ್ಪದ ನೀಡದೇ ರಾಜ್ಯ ವಿಧಾನಸಭೆಗೆ ಶೀಘ್ರವೇ ಚುನಾವಣೆ ಘೋಷಣೆಯಾಗಬೇಕು' – ಸಿಪಿಐ(ಎಂ)

ಹಾಗೇನಾದರೂ ಆದದ್ದೇ ಆದರೆ ಯಡ್ಯೂರಪ್ಪ ಮತ್ತೊಮ್ಮೆ ಮುಖ್ಯಮಂತ್ರಿ ಹುದ್ದೆಯಿಂದ ವಂಚಿತರಾಗುವುದು ಖಚಿತ ಅದಿರಲಿ. ಕುಮಾರಸ್ವಾಮಿ ವಿರುದ್ಧದ ಲಂಚ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿದೆ. ಇತ್ತ ಜನಾರ್ಧನ ರೆಡ್ಡಿ ಅವರನ್ನು ಪಕ್ಷದಿಂದ ಅಮಾನತು ಮಾಡಿ ಹೊರಡಿಸಲಾಗಿದ್ದ ಆದೇಶವನ್ನು ಬಿಜೆಪಿ ವರಿಷ್ಠರು ಇತ್ತೀಚೆಗೆ ಹಿಂದಕ್ಕೆ ಪಡೆದಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಗಣಿ ಖಾತೆ ತಮಗೆ ಬೇಕು ಎಂದು ಜೆಡಿ(ಎಸ್) ಪಟ್ಟು ಹಿಡಿಯುವುದಕ್ಕೆ ಹಾಗೂ ಶ್ರೀರಾಮುಲು ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬಾರದೆಂದು ಷರತ್ತು ಹಾಕುವುದಕ್ಕೆ ಇದಕ್ಕಿಂತ ಬೇರೆ ಕಾರಣಬೇಕಿರಲಿಲ್ಲ. ಆದ್ದರಿಂದ ಬಿಜೆಪಿಯ ವಿಶ್ವಾಸಘಾತಕತನವೇ ಅದರ ಪತನಕ್ಕೆ ಕಾರಣವಾಗಿದೆ ಎಂದು ಕುಮಾರಸ್ವಾಮಿ ಹೇಳುವುದನ್ನು ತಳ್ಳಿಹಾಕಲಾಗದು. ಅದೇ ಸಂದರ್ಭದಲ್ಲಿ ರಾಜಕೀಯ ಅಲ್ಲೋಲ ಕಲ್ಲೋಲಕ್ಕೆ ಕಾರಣವಾಗುತ್ತಿರುವ ಗಣಿ ಉದ್ದಿಮೆಯನ್ನು ರಾಷ್ಟ್ರೀಕರಿಸಬೇಕೆಂದು ಒತ್ತಾಯಿಸುವುದು ರಾಜ್ಯದ ಹಿತದೃಷ್ಟಿಯಿಂದ ಅಗತ್ಯವಾಗಿದೆ.



ಗಂಡಾಂತರದಿಂದ ಪಾರಾದ ಕರ್ನಾಟಕ

'ಬಿಜೆಪಿಗೆ ಅಧಿಕಾರ ಸಿಗದಿರುವುದು ಸಂತೋಷ ತಂದಿದೆ. ಆದರೆ ಇದಕ್ಕಾಗಿ ಜೆಡಿ(ಎಸ್) ನಡೆಸಿದ ಕುತಂತ್ರ ನಾಚಿಕೆ ತರುವಂಥದ್ದಾಗಿದೆ' ಎಂದು ಸಾಹಿತಿ ಡಾ: ಯು.ಆರ್.ಅನಂತ ಮೂರ್ತಿ ಅವರು ಹೇಳಿದ್ದಾರೆ.

'ಅನಿಶ್ಚಿತ ರಾಜಕೀಯ ವಾತಾವರಣ ನಿಜಕ್ಕೂ ಜಿಗುಪ್ಸೆ ತಂದಿತ್ತು. ಈಗ ಸರ್ಕಾರ ಪತನ ಆಗಿರುವುದು ಒಳ್ಳೆಯದೇ ಆಗಿದೆ. ಮುಂದೆ ಚುನಾವಣೆಗೆ ಹೋಗುವುದು ಉತ್ತಮ ಕೆಲಸ' ಎಂದಿದ್ದಾರೆ ಪ್ರೊ: ಬರಗೂರು ರಾಮಚಂದ್ರಪ್ಪ.

ಸರ್ಕಾರ ಪತನಗೊಂಡಿದ್ದರಿಂದ ನಿಟ್ಟುಸಿರು ಬಿಟ್ಟವರ ಮೇಲೆ ಆಕ್ರಮಣ. ಕುಂದಾಪುರದಲ್ಲಿ ಡಿವೈಎಫ್ಐ ಕಾರ್ಯಕರ್ತರ ಮೇಲೆ ಹತಾಶ ಬಿಜೆಪಿ ಧಾಳಿ

'ಕರ್ನಾಟಕದಲ್ಲಿ ನಡೆದಿರುವ ರಾಜಕೀಯ ರಾಜಕೀಯ ಬೆಳವಣಿಗೆಗಳು ಬಿಜೆಪಿಯ ಅಧಿಕಾರ ದಾಹವನ್ನು ಪ್ರತಿಬಿಂಬಿಸುತ್ತವೆ. ಈ ಕ್ಷುದ್ರ ಬೆಳವಣಿಗೆಗಳ ಕೊನೆಯಲ್ಲಿ, ಕೋಮುವಾದಿ ಪಕ್ಷವೊಂದು ಅಧಿಕಾರಕ್ಕೆ ಬರುವ ಅಪಾಯದಿಂದ ಕರ್ನಾಟಕ ಪಾರಾಗಿದೆ. ಈಗ ಯಾವುದೇ ಪರ್ಯಾಯ ಸರ್ಕಾರದ ರಚನೆಗೆ ಆಸ್ಪದ ನೀಡದೇ ರಾಜ್ಯ ವಿಧಾನಸಭೆಗೆ ಶೀಘ್ರವೇ ಚುನಾವಣೆ ಘೋಷಣೆಯಾಗಬೇಕು' ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ.

ರಾಜ್ಯದ ಅಭಿವೃದ್ಧಿ ಹಾಗೂ ಜನಸಾಮಾನ್ಯರ ಹಿತ ಬಯಸುವವರೆಲ್ಲರೂ ಮೇಲಿನ ಈ ಅಭಿಪ್ರಾಯಗಳೊಂದಿಗೆ ಸಹಮತ ವ್ಯಕ್ತಪಡಿಸದೆ ಇರಲಾರರು.

ರಾಜ್ಯದ ಜನತೆಯಲ್ಲಿ ಜಿಗುಪ್ಸೆ ಹುಟ್ಟಿಸಿದ ಈ ಬೆಳವಣಿಗೆಗಳಿಂದಾಗಿ ಜೆಡಿ(ಎಸ್) ತನ್ನ ವಿಶ್ವಾಸಾರ್ಹತೆಯನ್ನು ಸಂಪೂರ್ಣ ಕಳೆದುಕೊಂಡಿದೆ. ಬಿಜೆಪಿಯೊಂದಿಗೆ ಮೊದಲ ಬಾರಿ ಕೈ ಜೋಡಿಸಿದ್ದೇ ಜೆಡಿ(ಎಸ್) ಮಾಡಿದ ದೊಡ್ಡ ತಪ್ಪು. ಕಾಂಗ್ರೆಸ್ ಪಕ್ಷದಿಂದ ಎಷ್ಟೇ ತೊಂದರೆ ಎದುರಾದರೂ ಅಧಿಕಾರದಲ್ಲಿ ಮುಂದುವರೆಯಬೇಕೆಂಬ ಒಂದೇ ಕಾರಣಕ್ಕಾಗಿ ಕೋಮುವಾದಿ ಬಿಜೆಪಿ ಜೊತೆ ಜೆಡಿ(ಎಸ್) ಕೈ ಜೋಡಿಸಬಾರದಾಗಿತ್ತು. ತನ್ನ ಮಗ ಕುಮಾರಸ್ವಾಮಿ ಹಾಗೂ ಇತರ ಜೆಡಿ(ಎಸ್) ಶಾಸಕರನ್ನು ಬಿಜೆಪಿ ವಿರುದ್ಧ ಸೈದ್ಧಾಂತಿಕವಾಗಿ ಸಿದ್ಧಗೊಳಿಸಲು ಶ್ರಮಿಸದಿರುವುದು ದೇವೇಗೌಡರ ಇನ್ನೊಂದು ದೊಡ್ಡ ವಿಫಲತೆ. ಹೀಗಾಗಿ ಜೆಡಿ(ಎಸ್) ಶಾಸಕರು ಪಕ್ಷ ಮತ್ತು ಅದರ ಸಿದ್ಧಾಂತವನ್ನು ತಳ್ಳಿಹಾಕಿ ಬಿಜೆಪಿ ಜೊತೆಯಲ್ಲಿ ಹೊರಟು ನಿಂತಾಗ ಅವರನ್ನು ಬುಟ್ಟಿಯಲ್ಲಿ ಇಟ್ಟುಕೊಳ್ಳಲು ದೇವೇಗೌಡರು ಸಮಯ ಸಾಧಕ ನಿಲುಮೆಯನ್ನು ಕೈಕೊಂಡು ಇಂದು ರಾಜಕೀಯದಲ್ಲಿ ಒಬ್ಬ ಅತ್ಯಂತ ಕೆಟ್ಟ ಖಳನಾಯಕ ಎನಿಸಿಕೊಳ್ಳುವಂತಾಗಿದೆ.

ಈ ಎಲ್ಲ ಅಸಹ್ಯ ಬೆಳವಣಿಗೆಗಳ ನಂತರ, ರಾಜ್ಯದಲ್ಲಿ ಕೋಮುವಾದಿ ಬಿಜೆಪಿಗೆ ಅಧಿಕಾರ ವಹಿಸಿಕೊಳ್ಳಲು ಸಾಧ್ಯವಾಗದಿರುವುದು ಸ್ವಾಗತಾರ್ಹವೇ ಆಗಿದೆ. ಯಡ್ಯೂರಪ್ಪ ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಗಳಿಗೆಯಿಂದ ರಾಜ್ಯದ ಜನತೆಯಲ್ಲಿ, ಮುಖ್ಯವಾಗಿ ದಲಿತ ಹಾಗೂ ಅಲ್ಪಸಂಖ್ಯಾತ ಜನಸಮುದಾಯಗಳಲ್ಲಿ ತೀವ್ರ ಆತಂಕ ಉಂಟಾಗಿತ್ತು.

ಯಡ್ಯೂರಪ್ಪನವರ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಆಗಮಿಸಿದ್ದ ಗುಜರಾತಿನ ಕುಖ್ಯಾತ ಮುಖ್ಯಮಂತ್ರಿ ನರೇಂದ್ರಮೋದಿ ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡುವುದಾಗಿ ಬಿಜೆಪಿ ಪರವಾಗಿ ಘೋಷಿಸಿದರು. ಅದನ್ನೇ ಯಡ್ಯೂರಪ್ಪನವರು ಡಿಲ್ಲಿಗೆ ಹೋದಾಗ ಪುನರುಚ್ಚರಿಸಿದರು. ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಾನು ರಾಜರ್ಷಿಗಳ ಮಾರ್ಗದರ್ಶನ ಪಡೆದು ಆಡಳಿತ ನಡೆಸುವುದಾಗಿ ಘೋಷಿಸಿದರು. ಇದಾದ ಬಳಿಕ ಮುಖ್ಯಮಂತ್ರಿ ಯಡ್ಯೂರಪ್ಪ ಅವರ ಸಮ್ಮುಖದಲ್ಲಿ ರಾಮಚಂದ್ರಪುರ ಮಠದಸ್ವಾಮಿಗಳು ಗೋವಿನ ಚರ್ಮ ಸುಲಿಯುವವರು ರಾಕ್ಷಸರು ಎಂದು ಹೇಳಿದರು. ಇಂತಹ ಹೇಳಿಕೆಗಳ ಮೂಲಕ ಬಿಜೆಪಿಯ ರಹಸ್ಯ ಕಾರ್ಯಸೂಚಿ ಅಷ್ಟರಲ್ಲೇ ವ್ಯಕ್ತವಾಗಲಾರಂಭಿಸಿತ್ತು. ಇದರಿಂದ ಭಯಭೀತರಾದ ಜನ ಬಿಜೆಪಿಯ ನೂತನ ಸರ್ಕಾರ ಪತನಗೊಂಡಾಗ ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಿದ್ದು ಸಹಜವಾಗಿದೆ. ಕೆಲವು ಕಡೆ ಜನ ಸ್ವಯಂಸ್ಫೂರ್ತಿಯಿಂದ ವಿಜಯೋತ್ಸವ ಆಚರಿಸಿದ್ದೂ ವರದಿಯಾಗಿದೆ. ಬಿಜೆಪಿ ಸರ್ಕಾರದ ಪತನವನ್ನು ಸ್ವಾಗತಿಸಿದ ಜನರ ಮೇಲೆ ಅಲ್ಲಲ್ಲಿ ಹತಾಶ ಸಂಘ ಪರಿವಾರದವರಿಂದ ದಾಳಿಗಳಾಗಿರುವುದು ಸಹ ವರದಿಯಾಗಿದೆ. ಕುಂದಾಪುರದಲ್ಲಿ ಡಿವೈಎಫ್ಐ ಕಾರ್ಯಕರ್ತರ ಮೇಲೆ ಹತಾಶ ಬಿಜೆಪಿ ದಾಳಿ ನಡೆಸಿದೆ. ಇಂತಹ ದಾಳಿಗಳಿಂದ ಹಾಗೂ ಜೆಡಿ(ಎಸ್) ವಿರುದ್ಧ ನಡೆಸಲಾಗುತ್ತಿರುವ ಕೀಳು ಅಭಿರುಚಿಯ ಪ್ರತಿಭಟನೆಗಳಿಂದ ಈ ಹಿಂದುತ್ವ ಶಕ್ತಿಗಳ ನಿಜಬಣ್ಣ ಬಯಲಾಗುತ್ತಾ ಹೋಗುತ್ತದೆ. ಜನತೆಯ ಹಿತ, ರಾಜ್ಯದ ಪ್ರಗತಿ ಬಯಸುವವರೆಲ್ಲರೂ ಇಂತಹ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಮುಂದಾಗುವುದು ಕಾಲದ ಕರೆಯಾಗಿದೆ.

O

(ವ್ಯಂಗ್ಯಚಿತ್ರಗಳು ಪಿ.ಮಹಮ್ಮದ್ ಸೌಜನ್ಯ: ಪ್ರಜಾವಾಣಿ)

ಎಡ ಪಂಥ

ದಲಿತರೇ ರೈತರೇ ಬಡ ಜನರೆ ಕೇಳಿ
ಎಡಪಂಥ ಕಟ್ಟೋಣ ಮ್ಮೈ ಕೊಡವಿ ಏಳಿ
ಅರವತ್ತು ವರುಷಗಳು ನಿಮ್ಮನ್ನು ಆಳಿ
ಉಳಿದವರು ನಿಮಗೇನು ಕೊಟ್ಟಿಹರು ಹೇಳಿ?

- ವಿಡಂಬಾರಿ



■ ಕೆ.ನೀಲಾ



ಯಾವುದೇ ವಿಷಯವನ್ನು ಬಂಗಾಳದ ಜನತೆ ವಿಮರ್ಶಾತ್ಮಕವಾಗಿಯೇ ನೋಡುತ್ತಾರೆ. ತಮ್ಮ ರಾಜಕೀಯ ತಿಳುವಳಿಕೆಯ ಒರೆಗಲ್ಲಿಗೆ ತಿಕ್ಕಿ ನೋಡದೆ ಸ್ವೀಕರಿಸುವವರಲ್ಲ, ನರೇಂದ್ರ ಮೋದಿಯ ಗುಜರಾತು ಅವರಿಗೆ ಬೇಡವೇ ಬೇಡ. ಮಮತಾ ಬ್ಯಾನರ್ಜಿಯ ಹುಚ್ಚಾಟವೂ ಅವರಿಗೆ ಅರ್ಥವಾಗುತ್ತದೆ. ಜಾರ್ಜ್‌ಬುಶ್‌ನ ಷಡ್ಯಂತ್ರ ಅರಿಯಲು ಅವರಿಗೆ ತಡವಾಗುವುದಿಲ್ಲ. ಇತರೆ ರಾಜ್ಯದ ಎಂ.ಎಲ್.ಎ. ಎಂ.ಪಿ., ಮಿನಿಸ್ಟರ್‌ಗಳಂತೆ ತಮ್ಮ ರಾಜ್ಯದ ಜನಪ್ರತಿನಿಧಿಗಳು ಭ್ರಷ್ಟಾಚಾರಿಗಳಲ್ಲ ಎಂಬುದನ್ನು ಅವರು ಹೆಮ್ಮೆಯಿಂದ ಹೇಳುತ್ತಾರೆ.

ಕಾಯಕ ಜೀವಿಗಳ ನಾಡಿನಲ್ಲಿ...

ಜನವಾದಿಯ ರಾಷ್ಟ್ರೀಯ ಸಮ್ಮೇಳನ ಮುಗಿಸಿ ನಾವು ಕಲ್ಕತ್ತದಲ್ಲೊಂದು ಸುತ್ತು ಹೊರಟೆವು. ಪಶ್ಚಿಮ ಬಂಗಾಳವು ಹೋರಾಟದ ನಾಡು ಕಾಯಕ ಜೀವಿಗಳ ಬೀಡು. ಚಿಂತನೆ ಮತ್ತು ಚಳುವಳಿಯನ್ನು ಅನುಕ್ರಮವಾಗಿ ಪ್ರಜ್ಞಾಪೂರ್ವಕವಾಗಿ ಹೊಸೆದ-ಬೆಸದ ಕಾರಣ ಇಲ್ಲಿ ಜನಿಸಿದ ಅರಿವಿನ ಕಿರಣಗಳು ಜಗತ್ತಿನಾದ್ಯಂತ ಪ್ರತಿಫಲಿಸುತ್ತಿವೆ. ಅಂದಿನ ರಬೀಂದ್ರನಾಥ ಟ್ಯಾಗೋರ್‌ರ ಹೆಸರಿನೊಂದಿಗೆ ಇಂದಿನ ಅಮರ್ತ್ಯಸೇನ್ ನೆನಪಿನಂಗಳದಲ್ಲಿ ಮುಗುಳ್ನಗುತ್ತಾರೆ. ಪ್ರಜ್ಞಾವಂತ ಬಂಗಾಳ ಕಟ್ಟಲು ಶ್ರಮಿಸಿದ, ನೊಂದವರ ನೇತಾರ ಸಿಪಿಐ(ಎಂ) ಮುಖಂಡ ಜ್ಯೋತಿ ದಾ ಮತ್ತು ಅಪ್ರತಿಮ ಮೇರು ಹಂತದ ರಾಜಕೀಯ ಪ್ರಜ್ಞೆ ಮೆರೆದ ಬಂಗಾಳದ ಜನತೆಗೊಂದು ಸಲಾಂ ಹೇಳಲೇಬೇಕು.

ನಾವು ಪಶ್ಚಿಮಬಂಗಾಳದಲ್ಲಿ ಇದ್ದಷ್ಟು ದಿನವೂ ನಂದಿಗ್ರಾಮ ಸುದ್ದಿಯಲ್ಲಿತ್ತು. ಹೊತ್ತಿ ಉರಿಯುತ್ತಿತ್ತು. ಕಮ್ಯುನಿಸ್ಟ್ ವಿರೋಧಿಗಳು ಮತ್ತು ಸಾಮ್ರಾಜ್ಯಶಾಹಿ ಏಜೆಂಟರು ನಂದಿಗ್ರಾಮದ ಅಗ್ನಿಗೆ ತುಪ್ಪ ಸುರಿಯಲು ಧಾವಿಸುತ್ತಿದ್ದರು. ನಕ್ಸಲರು ಮೇಲುಗೈ ಸಾಧಿಸಿ ಬಂದೂಕಿನ ನಳಿಕೆಯಿಂದ ರಕ್ತದ ಕಾರಂಜಿ ಚಿಮ್ಮಿಸುತ್ತಿದ್ದರು. ದುಡಿವ ಜನತೆಯ ಚಳುವಳಿ ಮುರಿಯಲೆಂದೇ ದಿಕ್ ತಪ್ಪಿಸಲೆಂದೇ ಹುಟ್ಟಿಕೊಂಡ ಎಸ್‌ಯುಸಿಐ ನಕ್ಸಲರೊಂದಿಗೆ ಕೈಜೋಡಿಸಿ ಅಟ್ಟಹಾಸ ಮೆರೆಯುತ್ತಿತ್ತು. ಸಾಮಾನ್ಯ ಜನತೆಗೆ ಮತ್ತು ಸಿಪಿಐ(ಎಂ) ಬೆಂಬಲಿಗರು ಹಾಗೂ ಕಾರ್ಯಕರ್ತರ ಮೇಲೆ ಹದ್ದಿನಂತೆ ಎರಗುತ್ತಿದ್ದರು. ಥೇಟ್ ಮಾನಸಿಕ ರೋಗಿಯಂತೆ ಅತ್ತಿಂದಿತ್ತ ಹರಿದಾಡುವ ಮಮತಾ ಬ್ಯಾನರ್ಜಿ ಎಡರಂಗದ ಸರ್ಕಾರ ಬೀಳಿಸುವ ಕುತಂತ್ರ ಹೆಣೆಯುತ್ತ 'ನಂದಿಗ್ರಾಮ' ಘಟನೆಯನ್ನು ಆಯುಧವಾಗಿಸಿಕೊಳ್ಳಲು ಹವಣಿಸುತ್ತಿದ್ದಳು. ಇವರೆಲ್ಲರ ಚುಂಗು ಹಿಡಿದೇ ರಣರಂಗ ಪ್ರವೇಶಿಸಿದ ನಕ್ಸಲೈಟರು ಮುಖವಾಡ ಧರಿಸಿ ಮಕ್ಕಳು ಮತ್ತು ಹೆಣ್ಣುಮಕ್ಕಳ ಸಾಲಿನ ಹಿಂದೆ ನಿಂತು ಬಂದೂಕಿನ ಬಾಯಿಯಿಂದ ಗುಂಡುಗಳನ್ನು ಹಾರಿಸುತ್ತಿದ್ದರು.

'ಅವಳು ಬಿಜೆಪಿ ಜೊತೆ ಕೈಜೋಡಿಸುತ್ತಾಳೆ'

ದೇಶದೆಲ್ಲೆಡೆ ಇನ್ನೇನು ಪಶ್ಚಿಮ ಬಂಗಾಳದ ಎಡರಂಗದ ಸರ್ಕಾರ ಬಿದ್ದೇ ಬಿಟ್ಟಿತು ಎಂದು ಮಾತಾಡುವಾಗ ನಾವು ದಾರಿಯುದ್ದಕ್ಕೂ ಬಂಗಾಳದ ಸಾಮಾನ್ಯ ಜನರೊಂದಿಗೆ ಸಂವಾದಕ್ಕಿಳಿದೆವು ಪರಕೀಯರಂತೆ ಖಂಡಿತ ಜನತೆಯ ಪ್ರತಿಕ್ರಿಯೆಗೆ ನಾವು ಬೆರಗಾದೆವು. ಸಿಪಿಐ(ಎಂ)ನ್ನು ವಿರೋಧಿಸುವವರೊಂದಿಗೆ ಸರ್ಕಾರದ ನಿಲುವನ್ನು ಕಾರ್ಯವೈಖರಿಯನ್ನು ಬೆಂಬಲಿಸುವ ಬಹುದೊಡ್ಡ ಸಂಖ್ಯೆಯ ಜನ ಬಂಗಾಲದಲ್ಲಿರುವರು. ಕಮ್ಯುನಿಸ್ಟ್ ಸರ್ಕಾರ ಇರುವುದರಿಂದಲೇ ಇಲ್ಲಿ ಕೋಮುದಂಗೆಯಿಲ್ಲ ಎಂದು ಒಬ್ಬ ಯುವಕ ಹೆಮ್ಮೆಯಿಂದ ಹೇಳಿದರೆ 'ಮಮತಾಗೆ ಬೆಂಬಲಸಲಾಗದು. ಏಕೆಂದರೆ ಅಂತಿಮವಾಗಿ ಕೋಮುವಾದಿ ಬಿಜೆಪಿಯೊಂದಿಗೆ ಕೈಜೋಡಿಸಿ ಬಂಗಾಲದ ಗೌರವವನ್ನು ಮಣ್ಣುಪಾಲು ಮಾಡುತ್ತಾಳೆ' ಎಂದು ಕಲ್ಕತ್ತಾದ ಮುಸ್ಲಿಂ ಯಜಮಾನನ ಅನುಭವದ ಮತ್ತು ಕಾಳಜಿಯ ಮಾತು. ನಿರುದ್ಯೋಗ ತೊಡೆಯಲು 'ಬುದ್ಧದಾ' ಬಹುಮುಖಿ ಪ್ರಯತ್ನ ಮಾಡ್ತಿದ್ದಾರೆ. ಜನ ಸಹಕರಿಸಬೇಕು ಎಂದು ಹೇಳುತ್ತಲೇ ಬ್ಯಾಗ ವ್ಯಾಪಾರಿಯೊಬ್ಬ 'ಆದರೆ ಜನತೆಗೆ ಇನ್ನೂ ಕಷ್ಟಗಳಿವೆ, ಸರ್ಕಾರ ಇನ್ನೂ ಶ್ರಮಿಸಬೇಕು' ಹೇಳುತ್ತಿದ್ದ.

ಅಸಮಾಧಾನ

ಮೂರು ದಿನಗಳಿಂದಲೂ ನಮ್ಮೊಳಗೆ ಪುಟ್ಟ ಅಸಮಧಾನವೊಂದು ಇದ್ದೇ ಇತ್ತು. ಕಡೆಗೂ ಕಲ್ಕತ್ತ ಹೃದಯ ಭಾಗದ ವ್ಯಾಪಾರ ಕೇಂದ್ರದಲ್ಲಿ ಒಂದಿಷ್ಟು ಜನಕ್ಕೆ ವಿಚಾರಿಸಿಯೇ ಬಿಟ್ಟೆವು 'ಇದೆಂಥ ಹೊಲಸು ಕಸದ ರಾಶಿ? ನಿಮ್ಮಲ್ಲಿ ಕಾರ್ಪೋರೇಷನ್ ಕೆಲಸ ಮಾಡದೇ' ಹಾವ್ರಾ ಸುತ್ತ-ಮುತ್ತಲಿನ ಹೊಲಸು ಕೆಲವರ ಹಣೆಗೆ ಗಂಟು ತಂದಿತ್ತು. ಆ ಮನುಷ್ಯ ಹಲ್ಲುಗಳ ಪಕ್ಕದಿಂದ ಕಲ್ಕತ್ತಾ ಪಾನು ಉಗಿದು ಒಂದು ಸಣ್ಣ ನಗೆ ನಕ್ಕು ತನ್ನೆದಿರಿರುವ ಸಣ್ಣಪುಟ್ಟ ವ್ಯಾಪಾರ ಮಾಡುತ್ತ ರಸ್ತೆ ಆಕ್ರಮಿಸಿದವರತ್ತ ಸಲುಗೆಯಿಂದ ಕೈ ತೋರಿ "ಇವ್ರಿಂದ ಇಲ್ಲೆಲ್ಲ ಇಷ್ಟು ಹೊಲಸಾಗ್ತದೆ. ಮುಂಜಾನಿ ಬಂದು ನೋಡ್ರಿ ಲಕ ಲಕ ಅಂತದೆ. ಸಂಜೆ ಅನ್ನೋದ್ರಲ್ಲಿ ಹೀಗಾಗ್ತದೆ" ಅಂದನು. ನಮಗೂ ಒಂದು ವಾರದಲ್ಲಿ ಅನುಭವಕ್ಕೆ ಬಂದಿತ್ತು. ಬಿಹಾರ, ಅಸ್ಸಾಂ, ಬಾಂಗ್ಲಾದಿಂದ ವಲಸೆ ಬರುವ ಜನ ಕಲ್ಕತ್ತದ ಬೀದಿ ಬೀದಿಯಲ್ಲಿ ಬದುಕು ಹೂಡಿದ್ದರು. 'ಆದಾಗ್ಯೂ ಸ್ವಚ್ಛತೆಗೆ ಸರ್ಕಾರ ಇನ್ನಷ್ಟು ಕ್ರಮ ತಗೋಬೇಕಲ್ಲ...?' ಅನ್ನುತ್ತಲೇ ಕಲ್ಕತ್ತದ ಇತರೆ ಭಾಗಕ್ಕೆಲ್ಲ ಪಯಣ ಹೊರಟಾಗ ಉತ್ತಮ ರಸ್ತೆ, ಸ್ವಚ್ಛತೆ, ಸಹಕಾರ ಮನೋಭಾವದ ಜನತೆ ಹೀಗೆಲ್ಲ ಕಂಡು ಖುಷಿಗೊಂಡೆವು.

ಆತಂಕ ದೂರಾಯಿತು

ಕಲ್ಕತ್ತ, ಸಿಲಿಗುಡಿ, ಜಲಪಾಯಗುಡಿಯೆಲ್ಲ ಸುತ್ತಾಡಿದ ತರುವಾಯ 'ನಂದಿಗ್ರಾಮ'ದ ಘಟನೆ ಹುಟ್ಟು ಹಾಕಿದ ಆತಂಕ ದೂರಾಯಿತು. ಯಾವುದೇ ವಿಷಯವನ್ನು ಬಂಗಾಳದ ಜನತೆ ವಿಮರ್ಶಾತ್ಮಕವಾಗಿಯೇ ನೋಡುತ್ತಾರೆ. ತಮ್ಮ ರಾಜಕೀಯ ತಿಳುವಳಿಕೆಯ ಒರೆಗಲ್ಲಿಗೆ ತಿಕ್ಕಿ ನೋಡದೆ ಸ್ವೀಕರಿಸುವವರಲ್ಲ. ನರೇಂದ್ರ ಮೋದಿಯ ಗುಜರಾತು ಅವರಿಗೆ ಬೇಡವೇ ಬೇಡ. ಮಮತಾ ಬ್ಯಾನರ್ಜಿಯ ಹುಚ್ಚಾಟವೂ ಅವರಿಗೆ ಅರ್ಥವಾಗುತ್ತದೆ. ಜಾರ್ಜ್‌ಬುಶ್‌ನ ಷಡ್ಯಂತ್ರ ಅರಿಯಲು ಅವರಿಗೆ ತಡವಾಗುವುದಿಲ್ಲ. ಇತರೆ ರಾಜ್ಯದ ಎಂ.ಎಲ್.ಎ. ಎಂ.ಪಿ., ಮಿನಿಸ್ಟರ್‌ಗಳಂತೆ ತಮ್ಮ ರಾಜ್ಯದ ಜನಪ್ರತಿನಿಧಿಗಳು ಭ್ರಷ್ಟಾಚಾರಿಗಳಲ್ಲ ಎಂಬುದನ್ನು ಅವರು ಹೆಮ್ಮೆಯಿಂದ ಹೇಳುತ್ತಾರೆ. ಪದೇ ಪದೇ ಪ್ರಕೃತಿ ವಿಕೋಪಕ್ಕೆ ತತ್ತರಿಸುವ ಪಶ್ಚಿಮಬಂಗಾಳವು ಭೌಗೋಳಿಕವಾಗಿಯೂ ಹರಿದು ಹಂಚಿ ಹೋಗಿ ನಿಭಾವಣೆಗೆ ಸುಲಭವಾಗಿ ಒದಗುವುದೇ ಇಲ್ಲ. ಆದರೂ ಕಟ್ಟಕಡೆಯ ಜನತೆಯ ಹಿತಕ್ಕಾಗಿ ಶ್ರಮಿಸುವ ಸರ್ಕಾರದ ಪ್ರಯತ್ನ ಅರಿಯುವಂತಹ ಪ್ರಬುದ್ಧ ಚಿಂತಕರೂ ನಮ್ಮೊಂದಿಗೆ ಮಾತಾಡಿದರು. ಖರೆ ಹೇಳಬೇಕೆಂದರೆ, ಪಶ್ಚಿಮ ಬಂಗಾಳದ ಜನತೆ ಪ್ರಬುದ್ಧ ರಾಜಕೀಯ ತಿಳುವಳಿಕೆಯುಳ್ಳವರು. ಮಾಧ್ಯಮಗಳ ಮೂಲಕ ಹೊರ ರಾಜ್ಯಗಳಲ್ಲಿ ತಿರುಚಿದ ಸುದ್ದಿಗಳನ್ನು ರವಾನಿಸಿದರೂ ಅದರ ಪರಿಣಾಮ ಪಶ್ಚಿಮಬಂಗಾಳದಲ್ಲಿಯೇ, ಬೇರೆ ತೆರ ಮತ್ತು ಇತರೆ ರಾಜ್ಯಗಳ ಅಂದಾಜೇ ಬೇರೆ ತೆರ. ಕಾಂಗ್ರೆ, ಬಿಜೆಪಿ, ಟಿಎಂಸಿ, ಎಸ್‌ಯುಸಿಐ ಗಳಿಗೆಲ್ಲ ಆಗಿರುವ ಸಮಸ್ಯೆಯೇ ಇದು. ದಿನಕ್ಕೊಂದು ಕೀಳುಮಟ್ಟದ ರಾಜಕೀಯಕ್ಕಿಳಿವ ಮಮತಾ ಹತಾಶಳಾಗಿಯೇ ರಾಜೀನಾಮೆಯ ರಾಜಕೀಯ ಸಂನ್ಯಾಸತ್ವದ ಮಾತನಾಡುವುದು. ಭೂಹೀನರ ಕೈಗೆ ಭೂಮಿ ಕೊಟ್ಟ ಸಿಪಿಐ(ಎಂ) ಸರ್ಕಾರ ಪಶ್ಚಿಮಬಂಗಾಳಕ್ಕೆ ಅನ್ಯಾಯ ಮಾಡುವುದೇ ಇಲ್ಲವೆಂದು ಅಚಲವಾಗಿ ನಂಬಿದ ಜನತೆಯ ಬಹುದೊಡ್ಡ ವಿಭಾಗವೇ ಇಂದು ಟಿ.ಎಂ.ಸಿ. ನಕ್ಸಲೈಟ್, ಎಸ್‌ಯುಸಿಐ ಗಳ ಸುಳ್ಳುಗಳನ್ನು ಹಿಮ್ಮೆಟ್ಟಿಸಲು ಧಾಳಿಯನ್ನು ಎದುರಿಸಲು ಎಲ್ಲ ತೆರನ ತ್ಯಾಗ-ಬಲಿದಾನಕ್ಕೆ ಸಜ್ಜಾಗಿದ್ದಾರೆ.

'ಸರ್ಕಾರ ಕೆಡುವುವ ಕುತಂತ್ರ'

ಪಶ್ಚಿಮ ಬಂಗಾಳದ ಸಮಗ್ರ ಅಭಿವೃದ್ಧಿಗೆ ಅಡ್ಡಿಪಡಿಸುವ ದುಷ್ಟಶಕ್ತಿಗಳನ್ನು ಬಯಲಿಗೆ ತಂದೇ ತರುತ್ತೇವೆ ಎಂಬುದು ಹಾಲ್ದಿಯಾ ಪ್ರದೇಶದ ಕಾರ್ಪೋರೇಟ್ ಮುಖ್ಯಸ್ಥಳ ಸವಾಲು. ಈ ಸವಾಲಿಗೆ ಖಂಡಿತ ನೈತಿಕ ಬಲವಿದೆ. ಭೂ ಹೀನರಿಗೆ ಎಲ್ಲ ಭೂಮಿಯನ್ನು ಹಂಚಿದ ಮೇಲೆ ಸರ್ಕಾರಿ ಭೂಮಿ ಅಂತಿರುವುದು ಕೇವಲ ಕೆಲವೇ ಸಾವಿರ ಎಕರೆ ಮಾತ್ರ. ಜನತೆಗೆ ಬೇಡವೆಂದಾದರೆ ರಾಸಾಯನಿಕ ಕಾರ್ಖಾನೆ ಸಮುಚ್ಚಯದ ಯೋಜನೆ ಸ್ಥಾಪಿಸುವುದಿಲ್ಲ ಎಂದು ಮುಖ್ಯಮಂತ್ರಿ ಸದನದಲ್ಲಿ ಹೇಳಿದ ಮೇಲೂ ನಂದಿಗ್ರಾಮದಲ್ಲಿ ಪ್ರತಿದಿನ ಕೊಳ್ಳಿಯಿಟ್ಟು ಜ್ವಾಲೆ ಹಬ್ಬಿಸುವುದು ಏಕೆ?

ಹಿಂಸೆಯೇ ಪ್ರಧಾನ ಅಸ್ತ್ರವಾಗಿಸಿಕೊಂಡ ನಕ್ಸಲೈಟರ ಆಟ ನಡೆಯಲು ಬಿಡುವುದಿಲ್ಲ ಎಂದ ಯುವಕನೊಬ್ಬ 'ಇದೆಲ್ಲ ಸರ್ಕಾರ ಕೆಡುವುವ ಕುತಂತ್ರ'ವೆಂದನು. ಹೆಚ್ಚು ಕಡಿಮೆ ನಕ್ಸಲವಾದವನ್ನು ಬೆಂಬಲಿಸಿಯೇ ಸಾಹಿತ್ಯ ರಚಿಸಿದ ಮಹಾಶ್ವೇತಾದೇವಿ. ಈ ಇಳಿ ವಯಸ್ಸಿನಲ್ಲಿ ಯಾರಾದರೂ ಅಂತರ್ರಾಷ್ಟ್ರೀಯ ಮಟ್ಟದ ಕಣ್ಣೋಟದೊಂದಿಗೆ ಸಾಮ್ರಾಜ್ಯಶಾಹಿ -ಮೂಲಭೂತವಾದದ ಕ್ರೌರ್ಯ ಅರಿಯಲು ಸಾಧ್ಯವಾಗಬೇಕಿತ್ತು. ಅನೇಕ ಬುದ್ಧಿಜೀವಿ, ಸಾಹಿತಿಗಳು ಮೇಲು ಪದರಿನ ದೃಷ್ಟಿಕೋನದಿಂದ ಪ್ರತಿಕ್ರಿಯಿಸುತ್ತಿರುವುದು ಎಷ್ಟು ಮಾತ್ರಕ್ಕೂ ಒಪ್ಪುವ ಮಾತಾಗುವುದಿಲ್ಲ. ಆದರೆ ಪಶ್ಚಿಮಬಂಗಾಳದ ಜನತೆ ಎಲ್ಲವೂ ಅರಿಯಬಲ್ಲರು ಎಂಬ ಸಮಾಧಾನ ಆಗಾಗ ನಮ್ಮನ್ನು ನೆಮ್ಮದಿಯಾಗಿಸುತಿತ್ತು.

ಸಾಲ್ಟ್‌ಲೇಕ್‌ನ ಕಾಂ. ನಂದಿ ನಮ್ಮ ಪ್ರವಾಸಕ್ಕೆ ಬೇಕಾದ ಅನುಕೂಲಗಳನ್ನು ಕಲ್ಪಿಸಿದ್ದರು. ಸೌಜನ್ಯತೆ, ಪರಸ್ಪರ ಗೌರವದ ಸಂಸ್ಕಾರ ಹೊಂದಿದ ಪಶ್ಚಿಮ ಬಂಗಾಲದ ಜನರ ಮಹತ್ವದ ಪೂರ್ಣ ಅರಿವಾಗಿದ್ದು ನಾವು ಬಿಹಾರ ಮತ್ತು ಉತ್ತರ ಪ್ರದೇಶಕ್ಕೆ ಕಾಲಿಟ್ಟ ಮೇಲೆ. ಬಿಹಾರ ಮತ್ತು ಉತ್ತರ ಪ್ರದೇಶದ ಬಂಡವಾಳಶಾಹಿ ರಾಜಕೀಯ ಪಕ್ಷಗಳು, ಜಮೀನ್ದಾರಿ ಶಕ್ತಿಗಳು ಮತ್ತು ಕೋಮುವಾದಿಗಳು ಹುಟ್ಟು ಹಾಕಿರುವ ಭಯಭೀತ ವಾತಾವರಣ ಯಾರನ್ನಾದರೂ ತಲ್ಲಣಗೊಳಿಸುತ್ತದೆ. ಪಶ್ಚಿಮಬಂಗಾಳಕ್ಕೂ ಈ ರಾಜ್ಯಗಳಿಗೂ ಎಂಥ ವ್ಯತ್ಯಾಸ?! ಜೊತೆ ಸಂಗಾತಿಗಳ ಉದ್ಗಾರ. ಸಿಲಿಗುಡಿಯ ಪುಟ್ಟ ಹೋಟೆಲ್‌ನ ಪವಿತ್ರಳ ನೆನಪಾಯ್ತು. ಡಾರ್ಜಿಲಿಂಗ್‌ಗೆ ಹೋಗುವ ಮುನ್ನ ನಾಷ್ಟಾಕ್ಕೆಂದು ಪವಿತ್ರಳ ಹೋಟೆಲ್‌ನ ಹೊಕ್ಕೆವು 21 ಜನ ನಾವು. ಅವಳು ಪೂರಿ ಪಲ್ಯ ತಯಾರಿಸುತ್ತಿದ್ದಳು. ಒಂದು ಸ್ನೇಹದ ನಗೆ ನಕ್ಕು ರೇಟು ಹೇಳಿದಳು. ತಯಾರಿಸಲು ತಡವಾದೀತು ಅಂದಳು. ನಾವೂ ಒಂದು ಪ್ರೀತಿಯ ಮುಗುಳ್ನಗೆ ಚೆಲ್ಲಿ 'ನಾವೂ ಸಹಾಯ ಮಾಡ್ತೇವೆ. ಅಡ್ಡಿಯಿಲ್ಲ ತಾನೇ?' ಅಂದು ಅಡಿಗೆ ಮನೆ ಪ್ರವೇಶಿಸಿ ನಾನು ಪೂರಿ ತೀಡಿದೆ. ಜಯಶ್ರೀ ಕರಿದಳು, ಅಮೃತ ಪಲ್ಯಕ್ಕೆ ಖಾರಾ ಉಪ್ಪ ಹಾಕಿ ತಿರುವಿದಳು. ಗೋದಾವರೆಕ್ಕ ಬಡಿಸಿದಳು. ಅನ್ನಪೂರ್ಣ ಟೀಚರ್ ಚಹಾ ಸೋಸಿದರು. ಮೀನಾ ರವಾನೆ ಮಾಡಿದಳು. ಪವಿತ್ರಳ ಕೆಲಸವೇನು ಗೊತ್ತೇ? ಕುರ್ಚಿಯ ಮೇಲೆ ಕೂತು ನಮ್ಮಿಂದ ಹಣ ಪಡೆವುದು. ಅಂದು ಹೋಟೇಲ್ ನೌಕರ ಬಂದಿರಲಿಲ್ಲ. ಆದರೆ ಪವಿತ್ರಗೆ ಚಿಂತೆಯಾಗಲೇ ಇಲ್ಲ. ನಾವು ನಿರ್ಗಮಿಸುವಾಗ ಹೇಳಿದಳು. 'ಎಂಥ ಸ್ನೇಹದ ಜನ ನೀವು...' ನಾವು ಹೇಳಿದೇವು 'ಹೌದು ಕರ್ನಾಟಕದ ನಾವು ಸೌಹಾರ್ದ ಪ್ರಿಯರು. ನಿಮ್ಮಿಂದ ಸ್ನೇಹವೂ ಕಲಿತಿದ್ದೇವೆ'... ಅವಳು ಹೆಮ್ಮೆಯಿಂದ ನಕ್ಕಳು. ಕೆಲಸ ಮಾಡುವ ಹನ್ನೆರಡು ವರ್ಷದ ಪುಷ್ಪಾಳಿಗೆ ಶಾಲೆಗೆ ಕಳಿಸಲು ಹೇಳಿ ನಾವು ಗಾಡಿ ಹತ್ತಿದೆವು. ಪವಿತ್ರಳ ಬಂಗಾಳಿ ನಗೆ ಬಹುದೂರದವರೆಗೂ ನಮ್ಮನ್ನು ಹಿಂಬಾಲಿಸಿತ್ತು.

ಹೆಚ್ಚು ಕಡಿಮೆ ಅಧ್ಯಯನ ಪ್ರವಾಸವೇ ಆಗಿರುವ ನಮ್ಮ ಟೂರು ಟೀಮಿನಲ್ಲಿ ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳು, ಕಾಲೇಜು ಉಪನ್ಯಾಸಕರು, ಹಿರಿಯ ಚಿಂತಕರು, ಮಹಿಳಾ ಸಂಘದ ಮುಖಂಡರು ಇದ್ದರು. ಒಂದೆಡೆ ಸೈದ್ಧಾಂತಿಕ ಚರ್ಚೆಗಳು ರೆಕ್ಕೆ-ಪುಕ್ಕ ಕಟ್ಟಿಕೊಂಡು ಹಾರಾಡುತ್ತಿದ್ದವು. ಇನ್ನೊಂದೆಡೆ ಉಲ್ಲಾಸಭರಿತ ಕ್ರಾಂತಿ ಗೀತೆಗಳು ಆರೋಗ್ಯಕರ ನಗೆ ಚಾಟಿಕೆಗಳು ದಿನಗಳಿಗೆ ಉತ್ಸಾಹದ ಒಕುಳಿ ತೀಡಿದ್ದವು. ಈ ಪ್ರವಾಸ ಮುಗಿಯದಿರಲಿ ಅಂದವರೇ ಬಹಳಷ್ಟು, 'ಜೀವನದುದ್ದಕ್ಕೂ ಬರೀ ಚಿಂತನೆಯೇ ಆದರೆ ಬರಡು. ಚಳುವಳಿ ಜೊತೆ -ಜೊತೆಗೆ ಇದ್ದರೆನೇ ಕೊರಡು ಕೊನರುವುದು...' ಅಂತ ಕಾವ್ಯಾತ್ಮಕವಾಗಿ ಹೇಳಿದ್ದಕ್ಕೆ 'ಓ ನಾವೇನು ಚಳುವಳಿ ಮಾಡ್ತಾ ಇಲ್ಲ ಅಂತೀರಾ...? ನೋಡಿ' ಎಂದ ಸಂಗಾತಿಗಳೆಲ್ಲ ರೈಲ್ವೆ ಫ್ಲಾಟ್‌ಫಾರಂ ಮೇಲೆ ಸಾಲಾಗಿ ನಿಂತು ರಾಶಿ ಲಗೇಜುಗಳನ್ನು ಚಕಾಚಕ್ಕೆಂದು ಸಾಗಿಸಿ ಕೂಲಿಗಳಿಗೂ ಬೆರಗುಗೊಳಿಸಿದರು. ಹನಿಗಟ್ಟಿದ ಹಣೆಯ ಬೆವರು ಒರೆಸಿಕೊಳ್ಳುತ.

'ನಾವು ಬೆವರನು ಸುರಿಸಿ ದುಡಿಯುವ ಜನ ನಮ್ಮ ಬೆವರಿನ ಪಾಲನು ಕೇಳುವೆವು' ರಾಗವಾಗಿ ಹಾಡುತ ತಮ್ಮ ಪಾಲಿನ ಕಟಿ ಕಟಿ ರೊಟ್ಟಿ ಶೇಂಗಾ ಹಿಂಡಿ ಮೆಲ್ಲತೊಡಗಿದರು.

○

ಬೆಳ್ತಂಗಡಿ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಜನಪರ ಚಳುವಳಿಗಳು ಬಲಗೊಳ್ಳುತ್ತಾ ಜನರ ಬದುಕಿನ ನೈಜ ಪ್ರಶ್ನೆಗಳನ್ನು ಮುಂಚೂಣಿಗೆ ತಂದಿವೆ. ಅಲ್ಲಿನ ರಾಜಕೀಯ ಪರಿಸ್ಥಿತಿ ರೈತ ಕಾರ್ಮಿಕ ಆಂದೋಲನಗಳ ಕುರಿತ ಒಂದು ಅವಲೋಕನ ಪ್ರಾಂತ ರೈತ ಸಂಘದ ಸುವರ್ಣ ಮಹೋತ್ಸವದ ಆಚರಣೆಯ ಸಂದರ್ಭದಲ್ಲಿ.

ಬಲಗೊಳ್ಳುತ್ತಿರುವ ಜನ ಚಳುವಳಿ

ಶೇಖರ್ ಲ್ಯಾಲ

ಬೆಳ್ತಂಗಡಿಯಲ್ಲೀಗ ತುಂಡು ರಾಜಕೀಯದ್ದೇ ಕಾರುಬಾರು. ಅದೂ ಕಾಂಗ್ರೆಸ್ಸಿರಲಿ, ಜಾತ್ಯಾತೀತ (?) ಜನತಾದಳವಿರಲಿ, ಬಿಜೆಪಿಯಿರಲಿ. ಈ ಎಲ್ಲಾ ಪಕ್ಷಗಳೂ ಇಲ್ಲಿ ಮಾತ್ರ ಒಂದಲ್ಲ... ಎರಡು.....! ಇನ್ನೂ ಗೊತ್ತಾಗಿಲ್ವೇ? ಈ ಎಲ್ಲಾ ಪಕ್ಷಗಳು ಇಬ್ಭಾಗವಾಗಿವೆ. ಮಾತ್ರವಲ್ಲ ಜನತೆಯಿಂದ ದೂರ ಸಾಗಿವೆ. ಜನತೆ ಪರ್ಯಾಯ ರಾಜಕೀಯ ಪಕ್ಷವನ್ನರಸಿ ಸಿಪಿಐ(ಎಂ) ನತ್ತ ಮುಖ ಮಾಡುತ್ತಿದ್ದಾರೆ..... ಇದು ಬೆಳ್ತಂಗಡಿ ರಾಜಕೀಯದ ಚಿತ್ರ.


ಒಳಜಗಳ

ಈಗ ಯಾವಾಗ ಬೇಕಾದರೂ ಚುನಾವಣೆ ಬರಬಹುದಾದ ಸ್ಥಿತಿ ಇದೆ. ದೇಶದಲ್ಲಿ ತುರ್ತುಸ್ಥಿತಿಯ ಬಳಿಕ ಮಾಜಿ ಪ್ರಧಾನಿ ಇಂದಿರಾಗಾಂಧಿಗೆ ರಾಜಕೀಯ ಪುನರ್‌ಜನ್ಮ ನೀಡುವಲ್ಲಿ ಬೆಳ್ತಂಗಡಿಯ ಕಾಂಗ್ರೆಸ್ಸು ಪಕ್ಷ ಶ್ರಮಿಸಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರು ಸ್ಪರ್ಧಿಸಿದ್ದ ಚಿಕ್ಕಮಗಳೂರು ಕ್ಷೇತ್ರ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರವನ್ನು ಒಳಗೊಂಡಿತ್ತು. ಆ ಸಮಯ ಕಾಂಗ್ರೆಸ್‌ನಲ್ಲೂ ಒಳಜಗಳವಿತ್ತಾದರೂ ಒಗ್ಗಟ್ಟು ಸಾಧಿಸಲಾಯಿತು. ಆದ್ರೆ ಅದೀಗ ಬದಲಾಗಿದೆ. ಬೆಳ್ತಂಗಡಿ ಕಾಂಗ್ರೆಸ್ಸಿನಲ್ಲೀಗ ಒಳಜಗಳದೊಂದಿಗೆ ಬೀದಿಜಗಳ ಪ್ರಾರಂಭವಾಗಿದೆ. ಮಾಜಿ ಸಚಿವ ಗಂಗಾಧರಗೌಡ V/S ಹರೀಶ್‌ಕುಮಾರ್ ಎಂಬ ಎರಡೆರಡು ಬಣಗಳು ಕಾರ್ಯಚರಿಸುತ್ತಿದ್ದು, 2 ಕಾಂಗ್ರೆಸ್ಸು ಕಚೇರಿಗಳು ಪ್ರಾರಂಭವಾಗಿವೆ ಮಾತ್ರವಲ್ಲದೆ ಚುನಾವಣೆಗಳಲ್ಲಿ ಕೂಡ 2 ಕಾಂಗ್ರೆಸ್ಸು ಬಣಗಳು ಎದುರೆದುರು ಸ್ಪರ್ಧೆಗಿಳಿಯುವ ಮೂಲಕ ಮತದಾರರಿಗೆ ಉಚಿತ ಮನರಂಜನೆ ನೀಡುತ್ತಿವೆ.

ಗ್ರಾಮಮಟ್ಟದಲ್ಲಿ ಕಾಂಗ್ರೆಸ್ ನೆಲಸಮಗೊಳ್ಳುತ್ತಾ ಸಾಗುತ್ತಿದ್ದು ನಿಷ್ಠಾವಂತ(!?) ಕಾರ್ಯಕರ್ತರು ಒಬ್ಬಂಟಿಯಾಗುತ್ತಿದ್ದಾರೆ. ತಾಲೂಕಿನ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಈ ಪಕ್ಷಕ್ಕೆ ಕಳೆದ 20 ವರ್ಷಗಳಿಂದ ಹಿನ್ನಡೆಯಾಗುತ್ತ ಬಂದಿದ್ದು ಮುಂದೆ ಹೆಜ್ಜೆ ಹಾಕುವಲ್ಲಿ ವಿಫಲವಾಗುತ್ತಿದೆ. ಈ ಮಧ್ಯೆ ತಾಲ್ಲೂಕಿನ ಪ್ರಥಮ ಬಿಜೆಪಿ ಹಾಗೂ ಜನತಾದಳ ಪಕ್ಷಗಳಲ್ಲಿ ಶಾಸಕರಾಗಿದ್ದ ಸರ್ಕಾರದ ಮಾಜಿ ಸಚೇತಕ ಕೆ.ವಸಂತ ಬಂಗೇರ ಕಾಂಗ್ರೆಸ್‌ನತ್ತ ಮುಖ ಮಾಡಿದ್ದು ಇವರದು ಕಾಂಗ್ರೆಸ್ಸಿನ 3ನೇ ಬಣವಾಗಿ ಕಾರ್ಯಾಚರಿಸುತ್ತದೆಯೇ ಎಂಬುದನ್ನು ಕಾಲವೇ ನಿರ್ಧರಿಸಬೇಕಿದೆ.

ಜೆಡಿ(ಎಸ್)ಗೆ ಸೊನ್ನೆ

ತಾಲ್ಲೂಕಿನಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಗೆ ಪರ್ಯಾಯವಾಗಿದ್ದ ಜಾತ್ಯಾತೀತ ಜನತಾದಳವೀಗ ಹೇಳ ಹೆಸರಿಲ್ಲದಂತಾಗಿದೆ. ಈ ಹಿಂದೆ ಮಾಜಿ ಶಾಸಕ ವಸಂತ ಬಂಗೇರರ ನೇತೃತ್ವದಲ್ಲಿ ಕಾರ್ಯಚರಿಸುತ್ತಿದ್ದು ಕಳೆದ 2 ವರ್ಷಗಳ ಹಿಂದೆ ಬಿಜೆಪಿಯೊಂದಿಗೆ ಜೆಡಿಎಸ್ ಅಪವಿತ್ರ ಮೈತ್ರಿಯನ್ನು ವಿರೋಧಿಸಿ ಜೆಡಿಎಸ್‌ನ ಒಂದು ಬಣ ಜೆಡಿಎಸ್‌ನಿಂದ ಹೊರಬಂದು ಕಾಂಗ್ರೆಸ್ಸಿನ ಬಾಗಿಲಲ್ಲಿ ನಿಂತಿದೆ. ಇದೀಗ ಮಾಜಿ ಜೆಡಿಎಸ್‌ನ ಕಾರ್ಯಕರ್ತರು ಮುಂದೆ ಕಾಂಗ್ರೆಸ್ ಕಾರ್ಯಕರ್ತರಾಗಲೂ ಸಿದ್ಧತೆಯಲ್ಲಿರುವಾಗಲೇ ಬಿಜೆಪಿಯೊಂದಿಗಿನ ಮೈತ್ರಿಯನ್ನು ಸಮರ್ಥಿಸಿಕೊಂಡಿರುವ ಇನ್ನೊಂದು ಬಣ ನಾವು ಜೆಡಿಎಸ್‌ನೋರು ಎಂದು ಹೇಳಿ ಹೊಸ ಕಚೇರಿ ಪ್ರಾರಂಭಿಸಿದೆ. ಆದರೆ ಕಾರ್ಯಕರ್ತರ ಸಂಖ್ಯೆ ಮಾತ್ರ ಒಂದಂಕಿಗೆ ಸೀಮಿತವಾಗಿದೆ. ಕಳೆದ ನಗರ ಪಂಚಾಯತ್ ಚುನಾವಣೆಯಲ್ಲಿ 11 ಸ್ಥಾನದ ಪೈಕಿ ಸ್ಪರ್ಧಿಸಿದ ಈ ಪಕ್ಷದ 8 ಅಭ್ಯರ್ಥಿಗಳೂ ಠೇವಣಿ ಕಳೆದುಕೊಂಡಿದ್ದು ಮಾತ್ರವಲ್ಲ ಕಳೆದ ಅವಧಿಯಲ್ಲಿ 5 ಸದಸ್ಯರನ್ನು ಹೊಂದಿದ್ದ ಜೆಡಿಎಸ್ ಈ ಸಲ '0'ಗೆ ತೃಪ್ತಿ ಪಡಬೇಕಾಗಿ ಬಂದಿರುವುದು ಜೆಡಿಎಸ್‌ನ ದಿವಾಳಿತನವನ್ನು ಸೂಚಿಸುತ್ತಿದೆ. ಜೆಡಿಎಸ್‌ಗೆ ತಾಲೂಕಿನಲ್ಲಿ ತಾಲ್ಲೂಕು ಅಧ್ಯಕ್ಷರನ್ನು ಬಿಟ್ಟು ಬೇರಾವುದೇ ಪದಾಧಿಕಾರಿಗಳೇ ಇಲ್ಲವೆಂಬುದು ಬೇರೆ ವಿಚಾರ.



ಬಿಜೆಪಿಯ ಬೀದಿ ರಂಪಾಟ

ಇನ್ನು ಶಿಸ್ತಿನ ಸಿಪಾಯಿಯೆಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಬಿಜೆಪಿಯದು ಇದಕ್ಕಿಂತ ಭಿನ್ನ ವಿಚಾರ. ಕಳೆದ ವಿಧಾನಸಭಾ ಚುನಾವಣೆಯಲ್ಲಿ "ಸೀಟಿಗಾಗಿ ಪ್ರಾರಂಭವಾದ ಬೀದಿ ರಂಪಾಟ ಇನ್ನೂ ಮುಂದುವರಿದಿದೆ. ಬಿಜೆಪಿಯ ಸಹೋದರನಂತಿರುವ ಹಿಂದು ಜಾಗರಣ ವೇದಿಕೆಯಿಂದ ಉಚ್ಛಾಟಿಸಲ್ಪಟ್ಟ ಮಹೇಶ್‌ಶೆಟ್ಟಿ ಉಜಿರೆಯಲ್ಲಿರುವ ಜನಾರ್ಧನ ದೇವಸ್ಥಾನದ 14.05 ಎಕ್ರೆ ಜಮೀನನ್ನು ಅದರ ಆಡಳಿತಗಾರನೊಬ್ಬ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ಅಕ್ರಮವಾಗಿ ಜಮೀನು ಪರಭಾರೆ ಮಾಡಿದ ವಿವಾದಕ್ಕೆ ಸಂಬಂಧಪಟ್ಟು, ದೇವಸ್ಥಾನದ ಆಡಳಿತ ಮಂಡಳಿ ವಿರುದ್ಧ ತನ್ನ ಪಡೆಯೊಂದಿಗೆ ಹೋರಾಟಕ್ಕಿಳಿದ. ಈ ವಿಚಾರದಲ್ಲಿ ಹಿಂದುತ್ವದ 'ವಾರಸುದಾರ' ಬಿಜೆಪಿ ನಾಯಕ(?)ರುಗಳು ದೇವಸ್ಥಾನದ ಆಡಳಿತ ಮಂಡಳಿ ಪರವಾಗಿದ್ದರೆ, ಹಿಂದೂ ಜಾಗರಣ ವೇದಿಕೆ ಆಡಳಿತ ಮಂಡಳಿಯ ವಿರುದ್ಧವಾಗಿದೆ. ಇದಲ್ಲದೆ ಸಂಘಪರಿವಾರದ ಎಲ್ಲಾ ವಿಷಜಂತು ಸಂಸ್ಥೆಗಳು ಹಾಗೂ ಮುತಾಲಿಕನ ರಾಮಸೇನೆ ಆಡಳಿತ ಮಂಡಳಿ ಪರವಾಗಿದ್ದು, ಹಿಂ.ಜಾ.ವೇದಿಕೆ ಒಬ್ಬಂಟಿಯಾಗಿದೆ. ಒಂದಂತೂ ಸತ್ಯ. ಇದು ಸಂಘಪರಿವಾರದೊಳಗಿನ ಶೂದ್ರ ಮೇಲ್ವರ್ಗದ ಸಂಘರ್ಷ. ಯಾಕೆಂದರೆ ಹಿಂ.ಜಾ ವೇದಿಕೆ ಮಹೇಶ್ ಶೆಟ್ಟಿ ಮತ್ತು ವೆಂಕಪ್ಪ ಕೊಟ್ಯಾನ್ ಎಂಬ ಶೂದ್ರರ ಕೈಯಲ್ಲಿದೆ.

ಬಿಜೆಪಿಯ ಈ ನಿರ್ಧಾರದಿಂದಾಗಿ ಕಾರ್ಯಕರ್ತರಲ್ಲಿ ಅಸಮಾಧಾನದ ಹೊಗೆಯಾಡುತ್ತಿದ್ದು, ಇದೀಗ ಬೂದಿ ಮುಚ್ಚಿದ ಕೆಂಡದಂತಿದ್ದು, ಸ್ಫೋಟಗೊಳ್ಳುವ ದಿನ ದೂರವಿಲ್ಲವೆಂಬುದು ಜನತೆಯ ಮಾತಿನಿಂದಲೇ ತಿಳಿದುಬರುತ್ತದೆ. ಮುಂದಿನ ದಿನಗಳಲ್ಲಿ ಬಿಜೆಪಿಗೆ ಇದು ಮಾರಕವಾಗಿ ಪರಿಣಮಿಸಲಿದೆ ಎಂಬುದಂತು ಸತ್ಯ. ಬಿಜೆಪಿಯೊಳಗಿನ ಈ ಕಚ್ಚಾಟ ಹ್ಯೊ ಕೈವರೆಗೆ ತಲುಪಿದ್ದನ್ನು ಬೇರೆ ಹೇಳಬೇಕಾಗಿಲ್ಲ. ಇದರ ಜೊತೆಗೆ ಸಂಘಪರಿವಾರದ ಸಂಘಗಳೊಂದಿಗೆ ಹಿಂದೂ ಜಾಗರಣ ವೇದಿಕೆ ಮುನಿಸುಕೊಂಡಿದ್ದು ಯಾವಾಗ ಬೇಕಾದರೂ ನಿಯಂತ್ರಿಸಲು ಅಸಾಧ್ಯವಾದ ಗಲಾಟೆಗಳಾಗಬಹುದು ಎಂಬುದು ಸದ್ಯದ ಸತ್ಯ.

ಯಾರು ಯಾರೆಂದು ಗುರುತಿಸುವುದೇ ಕಷ್ಟ

ತಾಲೂಕು ಪಂಚಾಯತ್‌ನಲ್ಲಿ ಕಾಂಗ್ರೆಸ್, ಜೆಡಿಎಸ್‌ನವರು ಯಾರೆಂದು ಗುರುತಿಸುವುದೇ ಕಷ್ಟ. ಒಮ್ಮೆ ಜೆಡಿಎಸ್‌ನವರು ಕಾಂಗ್ರೆಸ್ಸನ್ನು ಮತ್ತೊಮ್ಮೆ ಬಿಜೆಪಿಯನ್ನು ಬೆಂಬಲಿಸುತ್ತಾರೆ. ಮತ್ತೊಮ್ಮೆ ಜೆಡಿಎಸ್‌ನವರು ಜೆಡಿಎಸ್‌ನವರನ್ನೇ ಅಧಿಕಾರದಿಂದ ಕೆಳಗಿಳಿಸುತ್ತಾರೆ. ಒಟ್ಟಿನಲ್ಲಿ ಯಾರು ಯಾವ ಪಕ್ಷವೆಂದು ಹೇಳುವುದು ಅಸಾಧ್ಯವಾಗಿದೆ. ಈಗಾಗಲೇ ಜೆಡಿಎಸ್‌ನ ಓರ್ವ ಸದಸ್ಯರು. ಅದೇ ಪಕ್ಷದ ತಾಲ್ಲೂಕು ಪಂಚಾಯತ್ ಸದಸ್ಯರ ಸದಸ್ಯತ್ವ ಅನರ್ಹಗೊಳಿಸಲು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಸಲ್ಲಿಸಿದ್ದು, ತನಿಖೆಯ ಹಂತದಲ್ಲಿದೆ. ತಾ.ಪಂ.ನ ಬಿಜೆಪಿ ಸದಸ್ಯರು ಸಭೆಯಲ್ಲಿ 'ಅಭಿವೃದ್ಧಿ' ಬಗ್ಗೆ ಚರ್ಚಿಸುವುಧನ್ನು ಮರೆತು ಸಿಪಿಐ(ಎಂ) ಪಕ್ಷವನ್ನು, ಸಿಐಟಿಯು ಸಂಯೋಜಿತ ಬೀಡಿಕಾರ್ಮಿಕರ ಸಂಘದ ಕಾರ್ಯಚಟುವಟಿಕೆಯನ್ನು ಹಾಗೂ ಅಂಗನವಾಡಿ ನೌಕರರ ಹೋರಾಟವನ್ನು ವಿರೋಧಿಸುವ ಕಾಯಕದಲ್ಲೇ ನಿರತರಾಗಿದ್ದಾರೆ. 'ರಸ್ತೆಗಾಗಿ' ನಡೆಸುವ ಡಿವೈಎಫ್ಐ ಹೋರಾಟವನ್ನು ತೆಗಳುವ ಈ ಸದಸ್ಯರು ತಾವೇನು ಮಾಡುತ್ತಿದ್ದಾರೆ ಎಂಬುದನ್ನೇ ಮರೆತಿದ್ದಾರೆ. ಒಟ್ಟಿನಲ್ಲಿ ತಾಲ್ಲೂಕಿನ ಅಭಿವೃದ್ಧಿ ಬಗ್ಗೆ ಇಲ್ಲೂ ಚರ್ಚೆ ಕಾರ್ಯಕ್ರಮವಿಲ್ಲದೆ, ಅಲ್ಲೂ ಇಲ್ಲದೆ ಕುಂಠಿತಗೊಂಡಿದೆ. ಜನ ಅಭಿವೃದ್ಧಿಗಾಗಿ ಪರ್ಯಾಯ ಪಕ್ಷದತ್ತ ನೋಡುತ್ತಿದ್ದಾರೆ. ಬಲಗೊಂಡ ಚಳುವಳಿ "ಮುಂದೆ ಬರುವ ಎಲ್ಲಾ ಸೂರ್ಯೋದಯಗಳು ಕೆಂಪು ಸೂರ್ಯೋದಯವಾಗಲಿ" ಎಂಬ ಹುತಾತ್ಮ ಸಂಗಾತಿ ಕಾಂ.ಭಾಸ್ಕರ ಕುಂಬ್ಳೆಯವರ ಮಾತು ಬೆಳ್ತಂಗಡಿ ಮಟ್ಟಿಗಂತು ಸತ್ಯವಾಗುತ್ತಿದೆ. ಸ್ವಾತಂತ್ರ್ಯದ ನಂತರ ಗೋವಾ ವಿಮೋಚನಾ ಚಳುವಳಿಯಿಂದ ಹಿಡಿದು ಬೆಳೆದ ಕಮ್ಯೂನಿಸ್ಟ್ ಚಳುವಳಿಯಿಂದು ಬೆಳೆಯುತ್ತಾ ಬಲವಾಗುತ್ತಿದೆ. 'ಭೂಸುಧಾರಣಾ ಚಳುವಳಿ, ಅಕ್ರಮ ಸಕ್ರಮ ಚಳುವಳಿ, ಅರಣ್ಯ ಭೂಮಿ ಸಕ್ರಮ ಚಳುವಳಿ, ಬೀಡಿ ಕಾರ್ಮಿಕರ ಚಳುವಳಿ ಜನತೆಯಲ್ಲಿ ಭರವಸೆ ಮೂಡಿಸಿದೆ. ಮೂಲಭೂತ ಸೌಲಭ್ಯ, ಅವ್ಯವಹಾರ, ಭ್ರಷ್ಟಾಚಾರದ ವಿರುದ್ಧ ಗ್ರಾ.ಪಂ ಮಟ್ಟದಲ್ಲಿ ನಡೆದ

ಪುಟ 12 ಕ್ಕೆ

ಮೌನದಲ್ಲಿ ಮೈ ಮರೆತ ಶಾಸಕ

ವಿಧಾನಸಭೆಯನ್ನು ಪ್ರತಿನಿಧಿಸುತ್ತಿರುವ ಬೆಳ್ತಂಗಡಿಯ ಶಾಸಕ ಪ್ರಭಾಕರ ಬಂಗೇರ ಬಿಜೆಪಿಗರು. ಕಳೆದ 8ರಿಂದ 9 ವರ್ಷಗಳಿಂದ ಶಾಸಕರಾಗಿರುವ ಇವರ ಅಧಿಕಾರಾವಧಿಯಲ್ಲಿ 'ಅಭಿವೃದ್ಧಿ' ಎಂಬುದು ಏನೂ ಇಲ್ಲ. 'ಅಭಿವೃದ್ಧಿ'ಗೆ ತಾಲೂಕಿನ ರಸ್ತೆಗಳೇ ಸಾಕ್ಷಿ ಹೇಳುತ್ತಿವೆ. ತಾಲೂಕಿನ ಮತದಾರರೇ ನಮ್ಮಲ್ಲಿ "ಗುಂಡಿಗಳಿಲ್ಲದ ರಸ್ತೆಯಿಲ್ಲ, ದುರಸ್ತಿಗಾಗಿ ಹಣವೇ ಇಲ್ಲ" ಎಂದು ಶಾಸಕರನ್ನು ಗೇಲಿ ಮಾಡುತ್ತಿದ್ದಾರೆ. ಆದ್ರೆ 'ರಸ್ತೆ ದುರಸ್ತಿಗಾಗಿ' ಹೋರಾಟ ಮಾಡಿದವರನ್ನು 'ಜೈಲಿಗಟ್ಟುವ' ಕೆಲಸವನ್ನು ಸಲೀಸಾಗಿ ಮಾಡಿದ್ದಾರೆ. ಇನ್ನೂ ಮಾಡ್ತಾರೆ. ತನ್ನ ವಿರೋಧಿಗಳನ್ನು ಮಟ್ಟ ಹಾಕುವುದು ಬಿಜೆಪಿಗರ ಹುಟ್ಟುಗುಣ.

ಗ್ರಾ.ಪಂ.ಗಳಲ್ಲಿ ವಿಪರೀತ ಅವ್ಯವಹಾರ, ಪಡಿತರ ಅವ್ಯವಸ್ಥೆ, ಪೊಲೀಸ್ ದೌರ್ಜನ್ಯ, ಅರಣ್ಯಾಧಿಕಾರಿಗಳ ಕಿರುಕುಳ, ಬಸ್ ನಿಲ್ದಾಣಗಳ ಅವ್ಯವಸ್ಥೆ, ಹಕ್ಕುಪತ್ರದ ಸಮಸ್ಯೆ, ಅರಣ್ಯವಾಸಿಗಳ ಸಮಸ್ಯೆ, ಬೀಡಿಕಾರ್ಮಿಕ, ಅಸಂಘಟಿತ ಕಾರ್ಮಿಕರ, ವಿದ್ಯಾರ್ಥಿ ಯುವಜನ, ರೈತರ ಸಮಸ್ಯೆಗಳು ಗುಡ್ಡದಷ್ಟು ಬೆಳೆಯುತ್ತಿದ್ದರೂ ಬಾಯಿ ಮುಚ್ಚಿರುವ ಶಾಸಕರು ಬೆಳ್ತಂಗಡಿಯವರು. ಈ ಸಮಸ್ಯೆಗಳ ಬಗ್ಗೆ ಏನಾದರೂ ಕೇಳಿದರೆ "ಸಂಬಂಧಪಟ್ಟ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಪತ್ರ ಬರೆದಿದ್ದೇನೆ" ಎಂಬ ಉತ್ತರ. ಒಟ್ಟಿನಲ್ಲಿ ಇವರು ಶಾಸಕರೋ ಅಥವಾ ದಸ್ತಾವೇಜು ಬರಹಗಾರರೋ ಎಂಬುದು ಜನತೆಗೆ ಅನುಮಾನ! ಇವರು ವಿಧಾನಸಭಾ ಅಧಿವೇಶನಕ್ಕೆ ಬಿಡದೆ ಹಾಜರು! ಅದೂ ಅಭಿವೃದ್ಧಿ ಬಗ್ಗೆ ಚರ್ಚಿಸಲು ಅಲ್ಲ!! ಬದಲಾಗಿ ಆರಾಮವಾಗಿ ನಿದ್ದೆ ಮಾಡಲು!!! ಇದು ಒಂದು ತರ ಅಭಿವೃದ್ಧಿಯ ಚಿಂತನೆಯೇ ಎಂಬುದನ್ನು ಉತ್ತರಿಸಬೇಕಾದವರಾರೋ?

ಮಂಗಳೂರು ಜಿಲ್ಲಾ ಪಂಚಾಯತ್‌ಗೆ ತಾಲೂಕಿನಿಂದ ಆರು ಜನ ಸದಸ್ಯರು. ಬಿಜೆಪಿಯಿಂದ ಓರ್ವ ಮಾತ್ರ ಸದಸ್ಯ, ಕಾಂಗ್ರೆಸ್ಸಿನಿಂದ ಇಬ್ಬರು ಸದಸ್ಯರಾದರೆ, ಜೆಡಿಎಸ್‌ನಿಂದ 3 ಸದಸ್ಯರಾದರೂ ಇಬ್ಬರು ಕಾಂಗ್ರೆಸ್‌ನ ಬಾಗಿಲಲ್ಲಿ ಇರುವವರು. ಇಲ್ಲಿ ಕೂಡಾ ಅಭಿವೃದ್ಧಿಗಿಂತ 'ಅಧಿಕಾರವೇ' ಮುಖ್ಯವೆಂಬಂತೆ ವರ್ತಿಸುತ್ತಾ 'ತಮ್ಮ' ಅಭಿವೃದ್ಧಿ ಮಾಡುತ್ತಿದ್ದಾರೆಯೇ ಹೊರತು ತಾಲ್ಲೂಕಿನ ಅಭಿವೃದ್ಧಿ ಶೂನ್ಯ. ಕೆಲವೊಬ್ಬರು ಜಿ.ಪಂ ಸಭೆಯಲ್ಲಿ ಮೌನವ್ರತ ಆಚರಿಸುತ್ತಾರೆ. ಒಟ್ಟಿನಲ್ಲಿ 'ಅಭಿವೃದ್ಧಿ' ಬಗ್ಗೆ ಚಿಂತನೆ ಇಲ್ಲದವರಿಂದ ಅಭಿವೃದ್ಧಿಯನ್ನು ನಿರೀಕ್ಷಿಸುವುದು ಮೂರ್ಖತನ ವಾದಿತಲ್ಲವೇ?

ಬೀಡಿ ಕಾರ್ಮಿಕರ ನಡುವಿನ ಅಪಪ್ರಚಾರವೂ ಅವರೊಳಗೆ ಮೂಡುತ್ತಿರುವ ಜಾಗೃತಿಯೂ

ಹೌದು! ಪ್ರಶ್ನೆ ಸಹಜ! ಬೀಡಿ ಕಾರ್ಮಿಕರಿಗೆ 10 ವರ್ಷದಿಂದ ಬಾಕಿ ಇದ್ದ ತುಟ್ಟಿಭತ್ಯೆ ಬಾಬ್ತು ಒಪ್ಪಂದದ ಪ್ರಕಾರ ರೂ.4500 ಸಿಗದಿರುವುದು ನಿಜವೇ. ಇವತ್ತು ಸಿಐಟಿಯು ಬೀಡಿ ಕಾರ್ಮಿಕರಿಂದ ಕ್ಲೈಮ್ ಅರ್ಜಿ ಸಲ್ಲಿಸಲು ಅರ್ಜಿ ಬರೆಸುತ್ತಿದೆ. 'ಅರ್ಜಿ ಬರೆಯುವ ಅಗತ್ಯವಿಲ್ಲ ಅದು ಕಮ್ಯುನಿಸ್ಟ್ ಯೂನಿಯನ್ ಸುಳ್ಳು ಹೇಳೋದು. ನಿಮ್ಮನ್ನ ಕಮ್ಯುನಿಸ್ಟ್ ಮಾಡುತ್ತಾರೆ. ಹಣ ಮಾಡಲು ನಿಮ್ಮಿಂದ ಅರ್ಜಿ ಬರೆಸೋದು' ಎಂದೆಲ್ಲಾ ಅಪಪ್ರಚಾರಗಳನ್ನು ಬಿಎಂಎಸ್, ಎಐಟಿಯುಸಿ, ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಕೆಲವು ಬೀಡಿ ಗುತ್ತಿಗೆದಾರರುಗಳು ಮಾಡುತ್ತಿದ್ದಾರೆ. ಇನ್ನೊಂದೆಡೆ ನಾಗರೀಕ ಸೇವಾ ಟ್ರಸ್ಟ್‌ನ ಅಪಪ್ರಚಾರ.

ಹೌದು ಸಿಐಟಿಯು ಸಂಘಟನೆಗೆ ಸದಸ್ಯತ್ವ ನೀಡಲಾಗುತ್ತಿದೆ. ನಂತರ ಮಾತ್ರ ಕ್ಲೈಮ್ ಅರ್ಜಿಬರೆಸುತ್ತಿರುವುದು ಸತ್ಯ. ಇದಕ್ಕಾಗಿ ಹಣ ಮಾಡೋರು ಎಂಬ ಅಪವಾದ. ಆದರೆ ಬಡಪಾಯಿ ಕಾರ್ಮಿಕರಿಗೆ ತುಟ್ಟಿಭತ್ಯೆ ಸಿಗಲಿಲ್ಲದ ಬಗ್ಗೆ ಅಪಪ್ರಚಾರ ಮಾಡುವವರ ತೀರ್ಮಾನವೇನು? 10 ವರ್ಷದ ಬಾಕಿ ಬಾಬ್ತು 10 ವರ್ಷ ಕಳೆದ ಮೇಲೆ ತಾನೆ ಒಪ್ಪಂದವಾಗಿ ಮಾಲಕರು ಆ ಒಪ್ಪಂದ ಉಲ್ಲಂಘಿಸಿದ ಮೇಲೆ ಸಿಐಟಿಯು ಈ ಅರ್ಜಿ ಸಲ್ಲಿಸುತ್ತಿರುವುದಾಗಿದೆ. ಈ 10 ವರ್ಷ ಅರ್ಜಿ ಸಲ್ಲಿಸದೇ ಇದ್ದ ಸಮಯ ಇವರೆಲ್ಲಾ ಕಾರ್ಮಿಕರಿಗೆ ತುಟ್ಟಿಭತ್ಯೆ ತೆಗೆಸಿ ಕೊಡಬಹುದಿತ್ತಲ್ಲ ಎಂಬುದು ಬೆಳ್ತಂಗಡಿ ತಾಲ್ಲೂಕು ಬೀಡಿ ಕೆಲಸಗಾರ ಸಂಘದ ಪ್ರತಿ ಸವಾಲು.

ಅದು ಮಾತ್ರವಲ್ಲ 1997ರಿಂದ ಚುನಾಯಿತರಾದ ಬೀಡಿ ಕಾರ್ಮಿಕರ ಮತ ಪಡೆದ ಎಂಎಲ್‌ಎ ಗಳಾಗಲೀ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಸದಸ್ಯರಾಗಲಿ ಬೀಡಿ ಕಾರ್ಮಿಕರಿಗೆ ಈ ಬಾಕಿಯಾದ ತುಟ್ಟಿಭತ್ಯೆ ತೆಗೆಸಿಕೊಡಲಿಲ್ಲ ಯಾಕೆ? ಇತ್ತೀಚೆಗೆ ನಡೆದ ಬೆಳ್ತಂಗಡಿ ತಾಲ್ಲೂಕು ಬೀಡಿ ಕಾರ್ಮಿಕರ ಬೃಹತ್ ಸಮಾವೇಶದಲ್ಲಿ ಸಂಘದ ಅಧ್ಯಕ್ಷರಾದ ಬಿ.ಯಂ.ಭಟ್ ಮಾತಾಡುತ್ತಾ "ಗ್ರಾಮದ 100 ಮನೆಗಳಲ್ಲಿ 95 ಮನೆಯವರು ಬೀಡಿ ಸುತ್ತೋರೆ. ಬೀಡಿ ಕೆಲಸಗಾರರ ತುಟ್ಟಿಭತ್ಯೆ ತೆಗೆಸಿಕೊಡದ ಬಿಜೆಪಿ ಗಾಗಲೀ ಕಾಂಗ್ರೆಸ್‌ಗಾಗಲೀ ಮತ ಕೊಡೋದಿಲ್ಲ. ಮತ ಕೇಳಿಕೊಂಡು ಬಂದರೆ ಬೀಡಿ ಕಾರ್ಮಿಕರು ದುಡಿದ ವೇತನ ತೆಗೆಸಿಕೊಡಲು ಸಾಧ್ಯವಿಲ್ಲದ ನಿಮಗೆ ನಾವು ಮತ ನೀಡೊಲ್ಲ ಎಂದು ಎಚ್ಚರಿಸಿರಿ!' ಎಂದು ಬೀಡಿ ಕಾರ್ಮಿಕರಿಗೆ ಕರೆ ನೀಡಿದರು. 'ಅಷ್ಟು ಮಾತ್ರವಲ್ಲ ಬರುವ ವಿಧಾನಸಭೆ ಚುನಾವಣೆಯಲ್ಲಿ ಬೀಡಿ ಕಾರ್ಮಿಕ ವರ್ಗದ ಪ್ರತಿನಿಧಿಯನ್ನು ಚುನಾವಣೆಗೆ ನಿಲ್ಲಿಸಿ ಆರಿಸಿ ಕಳುಹಿಸುತ್ತೇವೆ. ಆ ಮೇಲಾದರೂ ನಮಗೆ ಸಿಗಬೇಕಾದ ತುಟ್ಟಿಭತ್ಯೆ ನಾವು ಪಡೆದೇ ಸಿದ್ದ



ಎಂದು ಸವಾಲು ಹಾಕಿರಿ' ಎಂದು ಕಾರ್ಮಿಕರಿಗೆ ಕರೆ ನೀಡಿದರು.

ನಿರಂತರ ಮತ ಪಡೆಯುತ್ತಾ ಬರುವ ಈ ಬಿಜೆಪಿ, ಕಾಂಗ್ರೆಸ್‌ಗಳು ಬೀಡಿ ಕಾರ್ಮಿಕರ ಬದುಕಿನ ಬಗ್ಗೆ ವಿಧಾನಸೌಧದಲ್ಲಿ ಬಿಡಿ,ಎಲ್ಲೂ ಸ್ವರ ಎತ್ತುತ್ತಿಲ್ಲ. ಕಳಪೆ ಎಲೆ ನೀಡಿ ಶೋಷಣೆ ಮಾಡುವಾಗ 1000 ರೂ. ನೀಡಿ 4500ರೂ ಬಂತೆಂದು ಸಹಿ ಹಾಕಿಸುವಾಗ, ಮಜೂರಿ ಸರಿಯಾಗಿ ಪಾವತಿ ಆಗದಿದ್ದಾಗ, ಬೋನಸ್ ಸರಿಯಾಗಿ ಸಿಗದಿರುವಾಗ, ಲಾಗ್‌ಬುಕ್ ಒದಗಿಸದಿದ್ದಾಗ ಈ ಬಿಜೆಪಿ, ಕಾಂಗ್ರೆಸ್ ಪಕ್ಷದವರು ನಿಮ್ಮ ಯೂನಿಯನ್‌ನಲ್ಲಿ ಹೇಳಿ ಎನ್ನುತ್ತವೆ. ಉಳಿದ ಸಮಯ ಯೂನಿಯನ್‌ಗೆ ಸೇರಬೇಡಿ, ಅವರು ಮೋಸ ಎಂದು ತೆಗಳುತ್ತಾರೆ.

ಬೀಡಿ ಕಾರ್ಮಿಕರಿಗೆ ಬಿಪಿಎಲ್ ನೀಡದ್ದರ ವಿರುದ್ಧ, ಕುಡಿಯುವ ನೀರನ್ನು ಒದಗಿಸದ ಬಗ್ಗೆ, ವಾಸ್ತವ್ಯದ ಮನೆ ನಿವೇಶನದ ಹಕ್ಕು ಪತ್ರ ನೀಡದ ಬಗ್ಗೆ, ಎಷ್ಟು ಅರ್ಜಿಗಳನ್ನು ಬರೆದರೂ ನಾವೇ ಮತನೀಡಿ ಗೆಲ್ಲಿಸಿದ ಈ ಎಂಎಲ್‌ಎ ಜನಪ್ರತಿನಿಧಿಗಳು ಗಮನ ನೀಡುತ್ತಿಲ್ಲ ಎಂಬ ಸತ್ಯ ಬೀಡಿ ಕಾರ್ಮಿಕರಿಗೆ ಅರಿವಾಗುತ್ತಿದೆ. ಕೆಲವೊಂದು ಸೌಲಭ್ಯಗಳು ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಹೋರಾಡಿ ಪಡೆದ ಸೌಲಭ್ಯಗಳೇ ಆಗಿದೆ. ನಿವೇಶನ ಇಲ್ಲ, ಮನೆ ಇಲ್ಲ, ವಿದ್ಯುತ್ ಇಲ್ಲ ಇವೆಲ್ಲ ಪಡೆಯಲು ಬೀಡಿ ಕಾರ್ಮಿಕರಿಗೆ ಒಂದಾಗಿ ಹೋರಾಡುವುದೊಂದೇ ದಾರಿ. ಹೋರಾಡಿ ಗೆಲುವು ಪಡೆಯುತ್ತೇವೆ ಎಂಬುದು ಕಾರ್ಮಿಕರ ವಿಶ್ವಾಸ.

ಕಮ್ಯುನಿಸ್ಟ್ ಪಕ್ಷದ ಆಡಳಿತ ಒಳ್ಳೆದಿದೆ. ಅಭಿವೃದ್ಧಿ ಹೊಂದಿದೆ ಎಂದು ಇಲ್ಲಿಯ ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್)ಪಕ್ಷದ ಎಂಎಲ್‌ಎಗಳು ಚೀನಾದೇಶಕ್ಕೆ ಹೋಗಿ ಬರುತ್ತಾರೆ . ಅಲ್ಲಿಂದ ಕಲಿತಿದ್ದೇನು ಎಂಬುದು ಬೀಡಿ ಕಾರ್ಮಿಕರ ಪ್ರಶ್ನೆ, ಬನ್ನಿ ಸ್ವಾಮಿ "ನಾವು ದುಡಿವ ಜನ, ಬೀಡಿ ಕಾರ್ಮಿಕರು ನಾವೂ ಹೇಳುತ್ತೇವೆ! ಯಾವ ರೀತಿ ಆಡಳಿತ ಮಾಡಬೇಕೆಂದು! ನಮ್ಮ ಮನೆಗೆ ಬಂದು ಕೇಳಿ ಕಲಿತುಕೊಳ್ಳಿ ಎಂದು ಜನ ಇತರ ರಾಜಕೀಯ ಪಕ್ಷದವರೆಗೆ ಹೇಳುತ್ತಿದ್ದಾರೆ. ಬೀಡಿ ಕಾರ್ಮಿಕರಿಗೆ ಈಗ ಸಿಪಿಐ(ಎಂ) ಪಕ್ಷ ನಮ್ಮ ಕಮ್ಯುನಿಸ್ಟ್ ಪಕ್ಷ ಎಂಬ ಅಭಿಮಾನವಿದೆ. ಕತ್ತಿ ಸುತ್ತಿಗೆ ಚಿಹ್ನೆ ನಮ್ಮ ಬದುಕಿನ ನಂದಾದೀಪ. ಈ ಚಿಹ್ನೆ ನಮ್ಮ ಬಾಳಿನ ಬದುಕಿನ ಬೆಳಕು ಎಂಬ ಅರಿವು ಮಾಡಬೇಕಿದೆ. ಸಂಘ ಇರೋದು ಕೇವಲ ವೇತನ ಬೋನಸ್ ತೆಗೆಸಿಕೊಡಲು ಮಾತ್ರ ಅಲ್ಲ, ನಮಗೆ ಗೌರವದ ಬದುಕು ಸಿಗುವಂತಾಗಲಿ ಎಂಬ ಅರಿವು ಬೀಡಿ ಕಾರ್ಮಿಕರಿಗೆ ಬರತೊಡಗಿದೆ.

○ ಬಿ.ಎಂ.ಭಟ್

ರೈತ ಚಳುವಳಿ ಬೆಳ್ತಂಗಡಿಯಲ್ಲಿ....

ಕರ್ನಾಟಕದಲ್ಲಿ ಭೂ ಸುಧಾರಣಾ ಕಾನೂನು ಜಾರಿಗೆ ಬಂದಿರುವಂತಹ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಆಗಿನ ಮುಖಂಡರಾದ ಕೆ.ವಿ.ರಾವ್ ಉಜಿರೆ (ಎಳಚಿತ್ತಾಯರೆಂದೇ ಪ್ರಖ್ಯಾತರಾಗಿರುವವರು) ಭೂ ಮಾಲಕರ ವಿರುದ್ಧ ಬಂಡೆದ್ದು ಗೇಣಿದಾರ ರೈತರನ್ನು ಸಂಘಟಿಸಿ ಅತ್ಯಂತ ಸಮರಶೀಲ ಮತ್ತು ತ್ಯಾಗಪೂರ್ಣ ಹೋರಾಟದಿಂದಾಗಿ ಕೆ.ವಿ.ರಾವ್‌ರವರ ಹೆಸರು ಬೆಳ್ತಂಗಡಿ ತಾಲ್ಲೂಕಿನ ಪ್ರತಿ ರೈತರ ಮನೆಯಲ್ಲಿ ಮನೆ ಮಾತಾಗಿದೆ. ಅವರ ಬರಹಗಳು ಮತ್ತು ಅಂಚೆ ಕಾರ್ಡ್ ಮುಖಾಂತರ ಹಲವಾರು ರೈತರನ್ನು ನಿಕಟವಾಗಿ ಸಂಪರ್ಕಿಸುವ ಮುಖಾಂತರ ಶೋಷಣೆಗೊಳಗಾಗಿರುವ ರೈತರ ಮೇಲೆ ರೈತ ಸಂಘ ಪರಿಣಾಮ ಬೀರಿದೆ. ಬೆಳ್ತಂಗಡಿ ತಾಲ್ಲೂಕಿನ ಕೊಯ್ಯೂರು, ಉಜಿರೆ, ಬೇಳಾಲು, ದಿಡುಪೆ, ಕಳಂಜ, ಪುದುಬೆಟ್ಟು ಮುಂತಾದ ಕಡೆಗಳಲ್ಲಿ ರೈತರಿಗೆ ತೆಲಂಗಾಣ ಸಶಸ್ತ್ರ ಹೋರಾಟ ಮತ್ತು ಪುನ್ನಪ್ಪುರ ವೈಲಾರ್ ರೈತ ಚಳುವಳಿಯ ಇತಿಹಾಸವನ್ನು ತಿಳಿಸಿ ರೈತರನ್ನು ಅಂತಹ ಸಮರಶೀಲ ಹೋರಾಟಕ್ಕಿಳಿಸಿ ಇಲ್ಲಿನ ರೈತರಿಗೆ ಭೂಮಾಲೀಕರಿಂದ ಭೂಮಿಯನ್ನು ತೆಗೆಸಿಕೊಡುವಲ್ಲಿ ಸಂಘ ಸಹಾಯ ಮಾಡಿದೆ. ಈ ಎಲ್ಲಾ ಚಳುವಳಿಗೆ ಸೈದ್ಧಾಂತಿಕವಾದ ನೇತೃತ್ವ ನೀಡುತ್ತಿರುವಾಗಲೂ ಅತ್ಯಂತ ಬಡತನದಿಂದ ಮತ್ತು ಸಂಕಷ್ಟಗಳಿಂದ ಕೂಡಿದ ಅವರ ವೈಯಕ್ತಿಕ ಜೀವನದಿಂದಲೂ ಅಮೂಲ್ಯವಾದಂತಹ ಬರಹಗಳು, ಕಾದಂಬರಿಗಳು, ಕಥಾ ಸಂಕಲನಗಳು, ಲೇಖನಗಳ ಮೂಲಕ ಶೋಷಿತ ಜನರ ಬದುಕನ್ನು ಬಯಲಿಗೆಳೆಯಲು ಸಾಧ್ಯವಾಗಿದೆ. ಈ ಹೋರಾಟ ಚಳುವಳಿಯ ಪರಿಣಾಮವಾಗಿ ಲಭಿಸಿದ ಭೂಮಿಯಿಂದ ಅಭಿವೃದ್ಧಿ ಪಡೆದ ರೈತರು ಮಕ್ಕಳಿಗೆ ಅತ್ಯುನ್ನತ ಮಟ್ಟದ ವಿದ್ಯಾಭ್ಯಾಸವನ್ನು ನೀಡಿ, ಸ್ವಾವಲಂಬಿಗಳಾಗಿ ಬದುಕು ನಡೆಸಲು ಸಾಧ್ಯವಾಗಿದೆ. ಅವರ ಜೊತೆ ನಿರಂತರ ಹೋರಾಟ ಚಳುವಳಿಗಳಲ್ಲಿ ಭಾಗವಹಿಸಿದಂತಹ ಹಿರಿಯ ಸಂಗಾತಿಗಳಾದ ರುಕ್ಮಯ ಭಂಡಾರಿ, ಪಾಪಚ್ಚನ್ ನಂತರದ ದಿನಗಳಲ್ಲಿ ರೈತ ಸಂಘವನ್ನು ಕಟ್ಟಿ ಬೆಳೆಸಲು ಪ್ರಾಮಾಣಿಕವಾದಂತಹ ಪ್ರಯತ್ನ ನಡೆಸಿದರು. ಅಕ್ರಮ ಸಕ್ರಮ ಮತ್ತು ಅರಣ್ಯ ಒತ್ತುವರಿ, ಪ್ರಶ್ನೆಗಳಿಗೆ ಸಂಬಂಧಪಟ್ಟ ಹಳ್ಳಿ ಹಳ್ಳಿಗಳಲ್ಲಿ ರೈತರನ್ನು ಸಂಘಟಿಸಿ ಜಾಥಾ ನಡೆಸಲು ಸಾಧ್ಯವಾಗಿದೆ.

ಅಕ್ರಮ ಸಕ್ರಮ, ಅರಣ್ಯ ಒತ್ತುವರಿ, ರೇಷನ್ ಕಾರ್ಡ್ ಚಳುವಳಿ, ದಲಿತರ ಪ್ರಶ್ನೆಗಳು, ಅಲ್ಪಸಂಖ್ಯಾತರ ಸಮಸ್ಯೆಗಳು, ನಿವೇಶನ ರಹಿತರಿಗೆ ಭೂಮಿ ಕೊಡಿಸುವ ಚಳುವಳಿ ಮುಂತಾದ ಪ್ರಶ್ನೆಗಳಿಗೆ ರೈತ ಸಂಘ ಮಧ್ಯ ಪ್ರವೇಶ ಮಾಡಿ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗಿದೆ.

ಬಹುರಾಷ್ಟ್ರೀಯ ಕಂಪನಿಗಳ ಜಲವಿದ್ಯುತ್ ಉತ್ಪಾದನಾ ಯೋಜನೆಯಿಂದ ನಷ್ಟವಾಗುವ ರೈತರ ಭೂಮಿಗೆ ಸೂಕ್ತ ಪರಿಹಾರವನ್ನು ಒದಗಿಸಿಕೊಡುವಲ್ಲಿ ರೈತ ಸಂಘದ ಮಧ್ಯ ಪ್ರವೇಶಿಸಿ ಸಹಾಯ ಮಾಡಿದೆ. ಸುಮಾರು 81 ಗ್ರಾಮಗಳನ್ನೊಳಗೊಂಡ ಬೆಳ್ತಂಗಡಿ ತಾಲ್ಲೂಕಿನಲ್ಲಿ ಸುಮಾರು 20 ಗ್ರಾಮಗಳಲ್ಲಿ ರೈತ ಸಂಘದ ಸದಸ್ಯತ್ವ ಮತ್ತು ಘಟಕ ರಚಿಸಲು ಸಾಧ್ಯವಾಗಿದೆ. ಸುಮಾರು 501 ರೈತರನ್ನು ಜನಶ್ರೀ ವಿಮಾ ಯೋಜನೆಯಲ್ಲಿ ಸದಸ್ಯರನ್ನಾಗಿ ನೋಂದಾಯಿಸಿ ಅವರಿಗೆ ವಿದ್ಯಾರ್ಥಿ ವೇತನವನ್ನು ಕೊಡಿಸುವ ಅತ್ಯಂತ ಶ್ರಮದಾಯಕ ಕೆಲಸವನ್ನು ಈ ಸ್ವರ್ಣ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ವಿತರಿಸುತ್ತಿರುವುದು ರೈತ ಸಂಘಕ್ಕೆ ಬಹಳ ಹೆಮ್ಮೆಯ ವಿಷಯವಾಗಿದೆ.

ಈ ಸಂಬಂಧ ಕರ್ನಾಟಕ ಪ್ರಾಂತ ರೈತ ಸಂಘದ ಸುವರ್ಣ ಮಹೋತ್ಸವ ಅಂಗವಾಗಿ ಈ ವಿದ್ಯಾರ್ಥಿ ವೇತನ ವಿತರಣ ಕಾರ್ಯಕ್ರಮವು ನವೆಂಬರ್ 25, 2007 ರಂದು ಬೆಳ್ತಂಗಡಿಯಲ್ಲಿ ನಡೆಯುತ್ತಿದೆ.

○


ಬಲಗೊಳ್ಳುತ್ತಿರುವ ಜನ ಚಳುವಳಿ

ಪುಟ 11 ರಿಂದ

ಹೋರಾಟಗಳೂ ಅಧಿಕಾರಿ ವರ್ಗ ಮತ್ತು ಜನಪ್ರತಿನಿದಿಗಳ ನಿದ್ದೆಗೆಡಿಸಿದೆ. ರಸ್ತೆ ದುರಸ್ತಿ ಮತ್ತು ಡಾಮರೀಕರಣಕ್ಕಾಗಿ ನಡೆಸಿದ ಹೋರಾಟ ಪ್ರಯಾಣಿಕರಿಗೆ, ವಿದ್ಯಾರ್ಥಿಗಳಿಗೆ ನೆಮ್ಮದಿ ತಂದಿದೆ.

ಬೆಳ್ತಂಗಡಿಯಲ್ಲಿ ಜನಪರ ಹೋರಾಟಕ್ಕೆ ಮತ್ತೊಂದು ಹೆಸರೇ ಸಿಪಿಐ(ಎಂ) ಎಂಬಂತಾಗಿದೆ. ಇದೀಗ ಈ ಎಲ್ಲಾ ಹೋರಾಟಗಳು ತೀವ್ರಗೊಳಿಸಲು ಸಿಪಿಐ(ಎಂ) ಪಕ್ಷ ತೀರ್ಮಾನಿಸಿದ್ದು, ಅದು ಅಭಿವೃದ್ಧಿಗಾಗಿ ಮತ್ತೊಂದು ಭಾರಿ ಜನಾಂದೋಲನವಾಗಬೇಕೆಂದು ಜನತೆಯ ಮನದಾಳದ ಮಾತು. 70ರ ದಶಕದಲ್ಲಿ ತಾಲೂಕಿನ ಮೂಲೆ ಮೂಲೆಯಲ್ಲಿ ಕೆಂಬಾವುಟದ ಹಾರಾಟ. ಭೂಮಾಲಕರ ವಿರುದ್ಧ ಹೋರಾಟಕ್ಕೆ ಚಾಲನೆ ಸಿಕ್ಕಿ ಅದರ ಮುಖಂಡತ್ವವನ್ನು ವಹಿಸಿದ್ದವರು ಹಿರಿಯ ಸಾಹಿತಿಗಳೂ ಆಗಿದ್ದ ಮಾರ್ಕ್ಸ್‌ವಾದಿ, ಉಜಿರೆಯ ಕೆ.ವಿ.ರಾವ್. ಯಳಚಿತ್ತಾಯರೆಂದೇ ಮನೆ ಮಾತಾಗಿದ್ದ ಕಾಂ.ರಾವ್ ಅವರ ನೇತೃತ್ವದ ಹೋರಾಟದ ಫಲವಾಗಿ ತಾಲ್ಲೂಕಿನ ಸಾವಿರಾರು ಜನ ಸ್ವಂತ ಜಮೀನಿನ ಒಡೆಯರಾಗಿ ರೈತರಾದರು. ಎಐಕೆಎಸ್‌ನ 50ನೇ ವರ್ಷಾಚರಣೆಯ ಸಂದರ್ಭ ಅವರು ನೆನಪು ಅಗತ್ಯವಾಗಿದೆ. ಈ ಹೋರಾಟ ಜನತೆಯ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ಭೂಸುಧಾರಣೆ ಹೋರಾಟ ತಾಲ್ಲೂಕಿನಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಗೂ ಕಾರಣವಾಗಿದೆ. ಇದೀಗ ಅದೇ ರೈತರು ಮತ್ತೆ ಕಂಗಾಲಾಗಿದ್ದಾರೆ. ನಮ್ಮನ್ನಾಳುವ ರೈತಪರ (?) ಸರ್ಕಾರಗಳ ನೀತಿಯಿಂದಾಗಿ ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಇಲ್ಲದಂತಾಗಿದೆ. ಮಾತ್ರವಲ್ಲದೆ ಅರಣ್ಯ, ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿ ಕೃಷಿ ಮಾಡಿಕೊಂಡಿರುವ ರೈತರ ಒಕ್ಕಲೆಬ್ಬಿಸುವಿಕೆ, ರಾಷ್ಟ್ರೀಯ ವನವಾಸಿಗಳ ಒಕ್ಕಲೆಬ್ಬಿಸುವಿಕೆ, ಅರಣ್ಯಾಧಿಕಾರಿಗಳ ನಿರಂತರ ದೌರ್ಜನ್ಯ, ಅಸಂಘಟಿತ ಕಾರ್ಮಿಕರ ಸಮಸ್ಯೆ, ಈ ಎಲ್ಲಾ ಸಮಸ್ಯೆಗಳು ತೀವ್ರಗೊಳ್ಳುತ್ತಿದ್ದರೂ ಬಿಜೆಪಿ, ಜೆಡಿಎಸ್ ಕಾಂಗ್ರೆಸ್ಸ್ ಪಕ್ಷಗಳೂ ತಮಗೆ ಸಂಬಂಧವಿಲ್ಲದ ರೀತಿಯಲ್ಲಿ ವರ್ತಿಸುತ್ತವೆ. ಈ ಎಲ್ಲಾ ಜನಸಮುದಾಯ ಸಿಪಿಐ(ಎಂ) ಪಕ್ಷದತ್ತ ಹೆಜ್ಜೆ ಇಡುತ್ತಿರುವುದು ಒಳ್ಳೆಯ ಬೆಳವಣಿಗೆ. ಇದೀಗ 'ಮೆಸ್ಕಾಂ' ತನ್ನ ಗ್ರಾಹಕರಿಂದ ಹೆಚ್ಚುವರಿ ಭದ್ರತಾ ಠೇವಣಿಯ ಹೆಸರಿನಲ್ಲಿ ಹಗಲು ದರೋಡೆಗೈಯ್ಯುತ್ತಿದ್ದು, ಪಕ್ಷದ ಹೋರಾಟವನ್ನು ಮುಂದೆ ನೋಡುತ್ತಿದ್ದಾರೆ.

○


ಪ್ರತಿನಿಧಿ ಸಮೂಹ

ಕೇಂದ್ರ - ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿಗಳ ವಿರುದ್ಧ ಇತ್ತೀಚೆಗೆ ಜೆಸಿಟಿಯು ಬೆಂಗಳೂರಿನಲ್ಲಿ ಸಂಘಟಿಸಿದ್ದ ರಾಜ್ಯಮಟ್ಟದ ಸಮಾವೇಶ ಯಶಸ್ವಿಯಾಗಿದ್ದು, ಐಕ್ಯಹೋರಾಟದ ತೀರ್ಮಾನವನ್ನು ಕೈಗೊಳ್ಳಲಾಗಿದೆ.

ಸರ್ಕಾರಗಳಿಗೆ ಕಾರ್ಮಿಕ ವರ್ಗದ ಎಚ್ಚರಿಕೆ

ಡಿಸೆಂಬರ್ 4-5, 2007 ರಾಜ್ಯವ್ಯಾಪಿ ಸತ್ಯಾಗ್ರಹ

ನವೆಂಬರ್ 12ರಂದು ಬೆಂಗಳೂರಿನ "ಗುರುನಾನಕ್ ಭವನ"ದಲ್ಲಿ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ರಾಜ್ಯ ಸಮಾವೇಶ ಅತ್ಯಂತ ಯಶಸ್ವಿಯಾಗಿ ನಡೆಯಿತು.


ಕೇಂದ್ರೀಯ ಸಂಘಟನೆಗಳಾದ ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್ ಟಿಯುಸಿಸಿ, ಯುಟಿಯುಸಿ(ಎಲ್‌ಎಸ್), ನಾಯಕತ್ವದಲ್ಲಿ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ, ಕರ್ನಾಟಕ ರಾಜ್ಯದ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿಯ ಆಶ್ರಯದಲ್ಲಿ ಈ ರಾಜ್ಯ ಮಟ್ಟದ ಸಮಾವೇಶ ಜರುಗಿತು. ಕೇಂದ್ರ ಕಾರ್ಮಿಕ ಸಂಘಟನೆಗಳ ಜೊತೆಗೆ, ರಾಜ್ಯ-ಕೇಂದ್ರ ಸರ್ಕಾರಿ ನೌಕರರ ಸಂಘಗಳು, ಬೆಂಗಳೂರಿನ ಸಾರ್ವಜನಿಕ ಕೈಗಾರಿಕೆಗಳನ್ನು ಪ್ರತಿನಿಧಿಸುವ ಜಂಟಿ ಕ್ರಿಯಾ ಫ್ರಂಟ್, ಬ್ಯಾಂಕಿಂಗ್ ಕ್ಷೇತ್ರದ ಎಐಬಿಇಎ ಹಾಗೂ ಬಿಇಎಫ್‌ಐ, ಅಖಿಲ ಭಾರತ ವಿಮಾ ನೌಕರರ ಸಂಘ, ರೈಲ್ವೆ, ರಕ್ಷಣಾ ವಲಯದ ನೌಕರರ ಸಂಘಗಳನ್ನು ಪ್ರತಿನಿಧಿಸುವ ಸುಮಾರು 700ಕ್ಕೂ ಅಧಿಕ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದು, ಅವರಲ್ಲಿದ್ದ ಹೋರಾಟದ ಮನೋಭಾವನೆಗೆ ಹಿಡಿದ ಕನ್ನಡಿಯಾಗಿತ್ತು.

ಸಮಾವೇಶದ ಅಧ್ಯಕ್ಷೀಯ ಮಂಡಳಿಯಲ್ಲಿ ವೇದಿಕೆಯ ಮೇಲೆ ಉಪಸ್ಥಿತರಿದ್ದವರು ಸಿಐಟಿಯುವಿನ ಕಾಂ.ಬಿ.ಮಾಧವ, ಕಾಂ.ಎಸ್.ಪ್ರಸನ್ನಕುಮಾರ್, ಎಐಟಿಯುಸಿಯ ಕಾಂ.ಶೇಷಾದ್ರಿ, ಟಿಯುಸಿಸಿಯಿಂದ ಕಾಂ.ಶಿವಶಂಕರ್, ಹೆಚ್‌ಎಂಎಸ್‌ನ ಕಾಂ.ಶ್ರೀನಿವಾಸಮೂರ್ತಿ, ಎಐಐಇಎನ ಕಾಂ.ಎಂ.ಚಂದನ್, ಬಿಇಎಫ್‌ಐಯಿಂದ ಕಾಂ.ರತ್ನಾಕರ್ ಶೆಣೈ, ಕೇಂದ್ರ ರಾಜ್ಯ ಸರ್ಕಾರಿ ನೌಕರರ ಸಂಘಟನೆಗಳ ವತಿಯಿಂದ ಕಾಂ.ಮುತ್ತುಕುಮಾರ್‌ರವರು ಉಪಸ್ಥಿತರಿದ್ದರು.

ಆರಂಭದಲ್ಲಿ ನೆರೆದಿದ್ದ ಎಲ್ಲರಿಗೂ ಸ್ವಾಗತ ಕೋರಿದ ಅಧ್ಯಕ್ಷೀಯ ಮಂಡಳಿ ಪ್ರಸ್ತಾವಿಕವಾಗಿ ಸಮಾವೇಶದ ಕರಡು ಘೋಷಣೆಯನ್ನು ಮಂಡಿಸಲು ಸಿಐಟಿಯುವಿನ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್‌ರವರು ನೆರೆದಿದ್ದ ಭಾರೀ ಪ್ರಮಾಣದ ಕಾರ್ಮಿಕ ಬಾಂಧವರನ್ನು ತುಂಬು ಹೃದಯದಿಂದ ಮತ್ತೊಮ್ಮೆ ಸ್ವಾಗತಿಸುತ್ತಾ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು. ಆ ನಂತರ ಸಮಾವೇಶದ ಕರಡು ಘೋಷಣೆಯಲ್ಲಿನ ಕಾರ್ಮಿಕ ಸಂಘಟನೆಗಳ ಪ್ರಾಯೋಜಕ ಸಮಿತಿಯ ಪ್ರಮುಖ 18 ಬೇಡಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸಿಕೊಟ್ಟರು ಹಾಗೂ ಡಿಸೆಂಬರ್ 4 ಮತ್ತು 5ರಂದು ನಡೆಯುವ ಸತ್ಯಾಗ್ರಹ ಪ್ರತಿಭಟನಾ ಕಾರ್ಯಕ್ರಮದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಎಚ್ಚರಿಕೆ ಕೊಡಬೇಕೆಂದು ಮನವಿ ಮಾಡಿಕೊಂಡರು.

ಸಿಐಟಿಯುವಿನ ರಾಜ್ಯ ಅಧ್ಯಕ್ಷರಾದ ಕಾಂ.ಬಿ.ಮಾಧವರವರು ಮಾತನಾಡುತ್ತಾ ಅಸಂಘಟಿತ ವಲಯದ ಕಾರ್ಮಿಕ ಕೈಗಾರಿಕೆಗಳು ಸಂಘಟಿತವಾಗಿಲ್ಲದ ಕಾರಣ ಬೀಡಿ, ಬೆಂಕಿಕಡ್ಡಿ, ಅಂಗನವಾಡಿ, ಗ್ರಾಮಪಂಚಾಯಿತಿಯಲ್ಲಿ ದುಡಿಯುತ್ತಿದ್ದಾರೆ. ಎನ್‌ಸಿಎಂಪಿಯಲ್ಲಿರುವ ಸಮಗ್ರ ಶಾಸನ ಜಾರಿಗೆ ತರಬೇಕೆಂದು ಆಗ್ರಹಿಸಿದರು.

ನಮ್ಮ ಬೇಡಿಕೆಯಲ್ಲಿ 18ನೇ ಬೇಡಿಕೆ ಸಮಗ್ರ ಭೂಸುಧಾರಣೆ ಜಾರಿಯಾಗ ಬೇಕೆಂದು ತಿಳಿಸಿದರು. ಇದು ಒಂದು ಮಹತ್ವವಾದುದ್ದು, ಇದು ಕೇವಲ ರೈತರ ಪ್ರಶ್ನೆಯಾಗಿರದೆ, ಕೃಷಿಕೂಲಿಕಾರರು ಇದರ ಮೇಲೆ ಅವಲಂಬಿತರಾಗಿದ್ದಾರೆ ಎಂದರು.


ಸಮಾವೇಶ ಉದ್ದೇಶಿಸಿ ಕಾಂ. ವಿಜೆಕೆ ನಾಯರ್

ಕೈಗಾರಿಕೆಗಳಲ್ಲಿ ಹಿಂಜರಿತ ಉಂಟಾಗಿದೆ. ಉತ್ಪಾದನೆಗೊಂಡ ಸರಕುಗಳನ್ನು ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುವ ಶಕ್ತಿ ಜನರಿಗಿಲ್ಲದಿರುವುದರಿಂದ ಸಮಗ್ರವಾದ ಭೂಸುಧಾರಣೆ ಅಗತ್ಯವಿದೆ ಎಂದರು.

ಎಐಟಿಯುಸಿಯ ಪ್ರಧಾನ ಕಾರ್ಯದರ್ಶಿ ಕಾಂ.ಹೆಚ್.ವಿ. ಅನಂತಸುಬ್ಬರಾವ್‌ರವರು ಚರ್ಚೆಯ ಮೇಲೆ ಭಾಗವಹಿಸಿ ಜಾಗತೀಕರಣದ ಕೆಟ್ಟ ಪ್ರಭಾವ ಎಲ್ಲರ ಮೇಲೂ ಬೀರಿದೆ. ಕಾರ್ಮಿಕ ಕಾನೂನುಗಳು ಸರಿಯಾಗಿ ಜಾರಿ ಆಗುತ್ತಿಲ್ಲ, ವಿಶೇಷ ಆರ್ಥಿಕ ವಲಯ ಕಾರ್ಮಿಕ ಕಾನೂನಿಗೆ ತಿದ್ದುಪಡಿ ತರಬೇಕೆಂದು ಆಗ್ರಹಿಸುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು ನಮ್ಮ ದೇಶಕ್ಕೆ ಬಂದು ನಮಗೆ ಬಹಳಷ್ಟು ಅನುಕೂಲ ಸಿಗುತ್ತದೆ ಎಂದು ಅಬ್ಬರದ ಪ್ರಚಾರ ನೀಡಿತು ಹಾಗು ನೀಡುತ್ತಿದೆ. ಆದರೆ ಕಾಂಗ್ರೆಸ್ - ಬಿಜೆಪಿಗಳ ಆರ್ಥಿಕ ನೀತಿಗಳಲ್ಲಿ ಯಾವುದೇ ಬದಲಾವಣೆಗಳಿಲ್ಲ, ಆದ್ದರಿಂದ ಡಿಸೆಂಬರ್ 4-5ರ ಹೋರಾಟವನ್ನು ಗಂಭೀರವಾಗಿ ಪರಿಗಣಿಸಬೇಕೆಂದರು.

ಹೆಚ್‌ಎಂಎಸ್‌ನ ಕಾಂ.ಶ್ರೀನಿವಾಸ ಮೂರ್ತಿಯವರು ಮಾತನಾಡುತ್ತಾ ಕೃಷಿ ಬಿಕ್ಕಟ್ಟಿನಿಂದ ದೇಶದ ಅಪಾರ ಸಂಖ್ಯೆಯ ಜನ ಕಷ್ಟ ನಷ್ಟ ಅನುಭವಿಸುತ್ತಿದ್ದಾರೆ. ಇನ್ನಾದರು ನಿಮ್ಮ ನೀತಿಗಳನ್ನು ಬದಲಿಸಿಕೊಳ್ಳಿ ಎಂದು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದರು. ಅಸಂಘಟಿತ ಕಾರ್ಮಿಕರಿಗೆ ಕಾನೂನು ಜಾರಿಗೆ ಬಂದರೆ, ಕನಿಷ್ಠ ಕೂಲಿ, ಇಎಸ್‌ಐಗಳಂತಹ ಸಾಧಾರಣ ಸೌಲಭ್ಯಗಳು ಲಭ್ಯವಾಗುತ್ತವೆ.

ಟಿಯುಸಿಸಿ ಮುಖಂಡರಾದ ಕಾಂ.ವೆಂಕಟೇಶ್ ಮಾತನಾಡುತ್ತಾ ಮುಕ್ತ ಮಾರುಕಟ್ಟೆಯ ನೀತಿಗಳಿಂದ ಮೂಲಭೂತ ಹಕ್ಕುಗಳ ಹರಣವಾಗುತ್ತಿದೆ. ಸಂವಿಧಾನ ಬದ್ಧವಾದ ಹಕ್ಕುಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತನ್ನಿ, ಶೇ.30 ರಿಂದ 40ರಷ್ಟು ಅಸಂಘಟಿತ ಕ್ಷೇತ್ರದ, ಕಟ್ಟಡ ನಿರ್ಮಾಣ ಕಾರ್ಮಿಕರು ದುಡಿಯುತ್ತಿದ್ದಾರೆ. ಅವರು ನೆಮ್ಮದಿಯಿಂದ ಜೀವನ ನಡೆಸಲು ಅವರಿಗಾಗಿ ಒಂದು ಶಾಸನ ಅನುಷ್ಠಾನಕ್ಕೆ ಬರಲಿ ಎಂದರು.

ಯುಟಿಯುಸಿಯ ಕಾಂ.ಸೋಮಶೇಖರ್ ರವರು ಶೋಷಣೆ ಹೆಚ್ಚಾಗಿದೆ ಹಾಗೂ ತೀವ್ರಗೊಳ್ಳುತ್ತಿದೆ. ಕಾರ್ಮಿಕರ, ರೈತರ ಸ್ಥಿತಿ ಗತಿಗಳ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಉದಾರೀಕರಣ ನೀತಿಗಳು ಸ್ವರ್ಗವನ್ನು ಧರೆಗಿಳಿಸುತ್ತದೆ ಎಂದಿದ್ದ ಅಂದಿನ ಮನಮೋಹನಸಿಂಗ್‌ರವರು ಇಂದು ಪ್ರಧಾನಿಯಾಗಿ ಬೆಲೆಏರಿಕೆ, ಬಡತನ, ಹಣದುಬ್ಬರ, ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ ಎನ್ನುತ್ತಿದ್ದಾರೆ. ಇವರ ನೀತಿಗಳ ವಿರುದ್ಧದ ಹೋರಾಟದಲ್ಲಿ ನಾವು ಪಾಲ್ಗೊಳ್ಳುತ್ತೇವೆ ಎಂದರು.

ಜೆಎಫ್‌ನ ಪರವಾಗಿ ಮಾತನಾಡಿದ ಕಾಂ.ವಿನಾಯಗಂರವರು ಕಳೆದ 1991ರಲ್ಲಿ ಬೆಂಗಳೂರಿನ ಸಾರ್ವಜನಿಕ ಉದ್ಯಮಗಳಲ್ಲಿ ಸುಮಾರು 60,000 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಇದೀಗ ಅದರ ಸಂಖ್ಯೆ 20,000ಕ್ಕೆ ಕುಸಿದಿದೆ. ಮುಚ್ಚುವಿಕೆ, ತೆಗೆದುಹಾಕುವಿಕೆ, ವಿಆರ್‌ಎಸ್ ಮೂಲಕ ಆಚೆಗೆ ಅಟ್ಟುವುದು, ಜಾರಿಗೆ ಬಂದ ನಂತರ, ನೇಮಕಾತಿ ನಿರ್ಬಂಧಿಸಿ, ಹೊರಗುತ್ತಿಗೆ ಹಾಗೂ ಕಾಂಟ್ರಾಕ್ಟ್ ಕೆಲಸಕ್ಕೆ ಹೆಚ್ಚು ಹೊತ್ತು ಕೊಟ್ಟ ಪರಿಣಾಮದಿಂದ ಈ ದುಸ್ಥಿತಿಗೆ ತಲುಪಿದೆ ಎಂದರು. ಜೆಎಫ್ ಈ ಧೋರಣೆಗಳ ವಿರುದ್ಧ ಹೋರಾಡುತ್ತಿದೆ. ಅದೇ ರೀತಿ ಜೆಸಿಟಿಯು ಹೋರಾಟಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುತ್ತೇವೆ ಎಂದರು.

ಕೇಂದ್ರ ಸರ್ಕಾರಿ ನೌಕರರ ಮುಖಂಡರಾದ ಕಾಂ.ಪಿ.ಎಸ್.ಪ್ರಸಾದ್ ರವರು ಕೇಂದ್ರದಲ್ಲಿನ ಯುಪಿಎ ಸರ್ಕಾರದ ನೀತಿಗಳ ವಿರುದ್ಧ ಹೋರಾಟ ನಿರಂತರವಾಗಿ ನಡೆಸುತ್ತಿರುವ ಕಾರಣ ಬೋನಸ್ ಮಿತಿ ಹೆಚ್ಚಳದ ಕುರಿತಂತೆ ಸುಗ್ರೀವಾಜ್ಞೆ ಹೊರ ಬಿದ್ದಿದೆ. ಕೊರಿಯರ್ ದಾಳಿಗೆ ಸಿಲುಕಿ ನಲುಗಿ ಹೋಗಿರುವ ಅಂಚೆ ಇಲಾಖೆ ತುಂಬಾ ಅಪಾಯದಲ್ಲಿದೆ. ಬಡವರು, ಗತಿಯಿಲ್ಲದವರ ಪಾಲಿಗೆ ಬೆಳಕಾಗಿದ್ದ ಈ ಇಲಾಖೆಯನ್ನು ಸರ್ವನಾಶ ಗೊಳಿಸಲಾಗುತ್ತಿದೆ ಎಂದರು.

ಎಐಐಇಎನ ಜಂಟಿ ಕಾರ್ಯದರ್ಶಿ ಹಾಗೂ ಎಐಐಇಎನ ಮುಖಂಡರಾದ ಕಾಂ.ಜೆ.ಸುರೇಶ್ ರವರು ಎಐಐಇಎ ನೇತೃತ್ವದಲ್ಲಿ ಕಳೆದ 1989ರಿಂದ ಸಮರಧೀರ ಚಳುವಳಿ ನಡೆಸಿದ ಕಾರಣ, ಎಲ್‌ಐಸಿ/ಜಿಐಸಿಗಳು ಸಾರ್ವಜನಿಕ ಉದ್ಯಮದಲ್ಲೆ ಇನ್ನು ಉಳಿದುಕೊಂಡಿದೆ; ಹದಿನೈದು ವರ್ಷಗಳ ಈ ಸತತ, ಸುದೀರ್ಘ ಹೋರಾಟ, ಪ್ರಚಾರ, ಪ್ರಕ್ಷೋಭೆಗಳು ನಮ್ಮ ನಿಲುವನ್ನು ಕೋಟ್ಯಾಂತರ ಜನರಿಗೆ ತಲುಪಿಸಲು ಸಹಾಯಕವಾಗಿದೆ. ಡಿಸೆಂಬರ್ 4 ಮತ್ತು 5 ಮತ್ತೊಂದು ಅವಕಾಶವು ಮತ್ತಷ್ಟು ಜನಸಂಪರ್ಕಕ್ಕೆ ಅನುವು ಮಾಡಿಕೊಟ್ಟಿದೆ. ರಾಜ್ಯಾದ್ಯಂತ ನಡೆಯುವ ಎಲ್ಲ, ಸ್ಥಳೀಯ, ತಾಲೂಕು ಹಾಗೂ ಜಿಲ್ಲಾ ಸಮಾವೇಶಗಳನ್ನು ಸಂಘಟಿಸುವ ಮತ್ತು ಅದರ ಜಾರಿಗೆ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಈಗಾಗಲೇ ಪ್ರಚಾರಾಂದೋಲನ ಕಣದಲ್ಲಿರುವ ಎಐಐಇಎಯ ಸಕ್ರಿಯ ಕಾರ್ಯಕರ್ತರು ಪಾಲ್ಗೊಂಡು ಯಶಸ್ವಿಗೊಳಿಸುತ್ತಾರೆ ಎಂದರು.

ಕಾಂ.ಸುರೇಶ್ ವಿಮಾಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೆಚ್ಚಳ ಕುರಿತಂತೆ ಮನಮೋಹನ್ ಅಹ್ಲುವಾಲಿಯಾ- ಚಿದಂಬರಂರವರ ಹೇಳಿಕೆಗಳು ಒಂದಕ್ಕೊಂದು ತಾಳೆಯಾಗದೆ, ಅವರುಗಳು ಅನುಸರಿಸುತ್ತಿರುವ ಆರ್ಥಿಕ ಸುಧಾರಣೆಗಳ ಗೋಜಲುಗಳನ್ನು ತಿಳಿಸುತ್ತದೆ. ಒಂದು ಕಡೆ ಮನಮೋಹನ್‌ರವರು, ಮೂಲ ಸೌಕರ್ಯಗಳ ಅಭಿವೃದ್ಧಿಗೆ ಮುಂದಿನ 7 ವರ್ಷಗಳಲ್ಲಿ 150 ಬಿಲಿಯನ್ಸ್ ಡಾಲರ ಅಗತ್ಯವಿದೆ ಎಂದರು. ತಕ್ಷಣ ಎಐಐಇಎ ತನ್ನ ಬೆಂಗಳೂರು ಸಮ್ಮೇಳನದಿಂದ ; ಮನಮೋಹನ್‌ರವರು ಎಲ್‌ಐಸಿ/ಜಿಐಸಿಗಳನ್ನು ಖಾಸಗೀಕರಣ ಮಾಡುವುದಿಲ್ಲವೆಂದು ಭರವಸೆ ಕೊಟ್ಟರೆ ಕೆಲವೇ ವರ್ಷಗಳಲ್ಲಿ ಆ ಹಣವನ್ನು ಎಲ್‌ಐಸಿಯೊಂದೇ ಕ್ರೋಢೀಕರಿಸಿ ಕೊಡುವ ಸಾಮರ್ಥ್ಯ ಹೊಂದಿದೆ ಎಂದು ವಾದಿಸಿತು. ತಕ್ಷಣ ಚಿದಂಬರಂರವರು 350 ಬಿಲಿಯನ್ಸ್ ಡಾಲರ್‌ಗಳ ಅಗತ್ಯವಿದೆ ಎಂದರು. ಎಐಐಇಎ ಅದಕ್ಕೂ ಸವಾಲೆಸೆಯಿತು ಎಂದರು. ಎಡಪಕ್ಷಗಳು ಪ್ರಮುಖವಾಗಿ ಸಿಪಿಐ(ಎಂ) ಪಾರ್ಲಿಮೆಂಟಿನ ಒಳಗೆ ಮತ್ತು ಹೊರಗೆ ವಿಮಾ ನೌಕರರು ನಡೆಸಿದ ಹೋರಾಟಗಳಿಂದಾಗಿ ಕಳೆದ 2004ರಿಂದ ಮಸೂದೆ ಮಂಡಿಸಲು ಸಾಧ್ಯವಾಗಿಲ್ಲ. ಇದು ನಮ್ಮ ಹೋರಾಟಕ್ಕೆ ಸಂದ ಜಯವೆಂದು ಎಲ್ಲರನ್ನು ಅಭಿನಂದಿಸಿದರು.

ಎಐಬಿಇಎ ವತಿಯಿಂದ ಕಾಂ.ವಸಂತ ರೈರವರು ಮಾತನಾಡುತ್ತಾ ಬ್ಯಾಂಕಿಂಗ್‌ನಲ್ಲಿ ಸಂಘಟನೆಗಳು ಜೆಸಿಟಿಯುವಿನ ಎಲ್ಲಾ ಹೋರಾಟ ಕಾರ್ಯಕ್ರಮದಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. 18 ಬೇಡಿಕೆಗಳ ಘೋಷಣೆಗೆ ನಮ್ಮ ಬೆಂಬಲವಿದೆ. ಬ್ಯಾಂಕಿಂಗ್‌ನಲ್ಲಿ ಕಾಡುತ್ತಿರುವ ಗಂಭೀರವಾದ ಪ್ರಶ್ನೆ ನೇಮಕಾತಿ ಮಾಡುತ್ತಿಲ್ಲ. ಬದಲಿಗೆ ಗುತ್ತಿಗೆ-ಹೊರಗುತ್ತಿಗೆ ಆಧಾರದಲ್ಲಿ ಅಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದಾರೆ. (ವಿಸರ್ಜಿಸಿದ್ದು) ವರದಿಯಂತೆ 2.5 ಲಕ್ಷ ಉದ್ಯೋಗದ ಅವಕಾಶವಿದೆ. ವಿಆರ್‌ಎಸ್ ಮೂಲಕ 1.5 ಲಕ್ಷ ನೌಕರರು ಆಚೆ ಹೋಗಿದ್ದಾರೆ. ಆದರೆ ಸರ್ಕಾರ ಬ್ಯಾಂಕಿಂಗ್‌ಗಳನ್ನು ವಿಲೀನ ಗೊಳಿಸಬೇಕು ಎನ್ನುತ್ತಾರೆ, ವಿಲೀನಗೊಂಡರೆ, ಶೇರು ವಿಕ್ರಯ ಮಾಡಲು ಅನುಕೂಲವಾಗುತ್ತದೆ ಎಂಬ ಆಲೋಚನೆಯಲ್ಲಿ ಹಣಕಾಸು ಸಚಿವರಾದ ಚಿದಂಬರಂರವರಿದ್ದಾರೆ. 27 ಲಕ್ಷ ಕೋಟಿ

ಪುಟ 15ಕ್ಕೆ

ಜಗದಗಲ

ಶರತ್‌ಚಂದ್ರ

ಸೋವಿಯತ್ ಒಕ್ಕೂಟದ ವಿಘಟನೆಯಲ್ಲಿ ಅಮೆರಿಕಾದ ಭಯೋತ್ಪಾದಕ ಪಾತ್ರ

ಸೋವಿಯತ್ ರಶ್ಯಾ ನಾಯಕತ್ವದ ತತ್ವಭ್ರಷ್ಟತೆಯ ಜೊತೆಗೆ ಪ್ರಬಲ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಯನ್ನು ನಾಶ ಮಾಡುವ ಅಮೆರಿಕಾದ ದುಷ್ಟ ಸಿ.ಐ.ಎ. ಯ ಆಳವಾದ ಕುತಂತ್ರವೂ ಸೇರಿ ಯು.ಎಸ್.ಎಸ್.ಆರ್. ಛಿದ್ರವಾಯಿತು.

ಸೋವಿಯತ್ ಒಕ್ಕೂಟ ಛಿದ್ರಗೊಂಡು ಸುಮಾರು 18 ವರ್ಷಗಳು ಕಳೆದಿದ್ದು, ಅದರ ವಿಘಟನೆಯಲ್ಲಿ ಅಮೇರಿಕಾ ವಹಿಸಿರುವ ಪಾತ್ರಗಳ ಕುರಿತಂತೆ ಅನೇಕ ಅಧಿಕೃತ ವರದಿಗಳು ಮತ್ತು ದಾಖಲೆಗಳು ಇದೀಗ ಮುಂಖಾನುಮುಂಖವಾಗಿ ಪ್ರಕಟಗೊಳ್ಳುತ್ತಿವೆ. ಹಿಂದಿನ ಸಿಐಎ ಪಾತ್ರಧಾರಿಗಳು, ಬ್ರಿಟನ್ನಿನ ಪ್ರಧಾನಿಯಾಗಿದ್ದ ಮಾರ್ಗರೇಟ್ ಥ್ಯಾಚರ್‌ರವರ ಆತ್ಮಕಥನ, ಸಿಐಎ ರಹಸ್ಯ ದಾಖಲೆಗಳು, ಹೀಗೆ ಇನ್ನೂ ಮುಂತಾದ ಮೂಲಕ ಅಮೇರಿಕಾದ ಬೀಭತ್ಸ ಕೃತ್ಯಗಳು ಬೆಳಕಿಗೆ ಬರುತ್ತಿವೆ. ಸೋವಿಯತ್ ಒಕ್ಕೂಟವನ್ನು ಮೋಸಗೊಳಿಸುವಲ್ಲಿ ಹೇಗೆ ಯಶಸ್ವಿಯಾದೆವೆಂದು ಅಮೇರಿಕಾದ ರಾಷ್ಟ್ರೀಯ ಭದ್ರತಾ ಸಂಸ್ಥೆಯ ಮಾಜಿ ಕಾರ್ಯದರ್ಶಿಗಳಾದ ಗಸ್ ಡಬ್ಲ್ಯೂ ವಿಯೆಸ್ಸ್ ರವರು ರಹಸ್ಯ ಬಯಲು ಮಾಡಿದ್ದಾರೆ. ವಿಶ್ವದಲ್ಲಿ ತನ್ನ ಯಜಮಾನಿಕೆ ಸ್ಥಾಪಿಸಲು ಅಮೆರಿಕಾ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅದೆಷ್ಟು ಅತ್ಯುತ್ತಮವಾಗಿ ಬಳಸಿಕೊಳ್ಳುತ್ತಿದೆಯೆಂಬುದಕ್ಕೆ ಅವರ ಲೇಖನ ಒಂದು ಸ್ಪಷ್ಟ ಉದಾಹರಣೆಯಂತಿದೆ. ಈ ಮುಂಚೆ ಸೋವಿಯತ್ ವಿಘಟನೆಯ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರು, ಅಮೇರಿಕಾ ಇರಾಕ್ ಮೇಲೆ ಯುದ್ಧ ಸಾರುವುದನ್ನು ಅವರ ಅಂತಿಮ ದಿನಗಳಲ್ಲಿ ಅವರು ಖಡಾಖಂಡಿತವಾಗಿ ವಿರೋಧಿಸಿದ್ದರು. ಅವರು 2003 ರಲ್ಲಿ ಸಂಶಯಾಸ್ಪದವಾಗಿ ಮರಣಹೊಂದಿದರು. ಅಮೇರಿಕಾ ಸರ್ಕಾರ ಅದನ್ನು ಆತ್ಮಹತ್ಯೆ ಎಂದು ಘೋಷಿಸಿ ಕೈತೊಳೆದು ಕೊಂಡಿತು.


ಅಮೇರಿಕಾ-ಸೋವಿಯತ್ ಒಕ್ಕೂಟದ ಸಹಕಾರ ಒಡಂಬಡಿಕೆ:

ಸೋವಿಯತ್ ಒಕ್ಕೂಟದ ಆರ್ಥಿಕ ವ್ಯವಸ್ಥೆಯನ್ನು ನಾಶಗೊಳಿಸಲು ಅಲ್ಲಿನ ಕೈಗಾರಿಕೆಗಳಿಗೆ ಅತ್ಯವಶ್ಯವಾದ, ಆದರೆ ಈ ಮೊದಲೇ ತಪ್ಪು ಸಂಕೇತಗಳನ್ನು ಹುದುಗಿಟ್ಟ, ಸಾಫ್ಟ್‌ವೇರ್ ತಂತ್ರಾಂಶಗಳನ್ನು ಅಮೇರಿಕಾ ಕಳುಹಿಸುತ್ತಿತ್ತು. ಲೆನಿನ್-ಸ್ಟಾಲಿನ್ ನಂತರದಲ್ಲಿ ಆರ್ಥಿಕವಾಗಿ ಸಂಕಷ್ಟದಲ್ಲಿದ್ದರಿಂದ ಸೋವಿಯತ್ ರಷ್ಯಾವು ಬಂಡವಾಳಶಾಹಿಯ ಸಾಲ, ಅವರ ಕೃಷಿ ಮತ್ತು ತಂತ್ರಜ್ಞಾನ, ಇತ್ಯಾದಿಗಳ ನೆರವನ್ನು ಪಡಕೊಂಡೇ ಕಮ್ಯುನಿಸ್ಟರು ರಾಷ್ಟ್ರ ನಿರ್ಮಾಣ ಮಾಡಬೇಕಾಗುತ್ತದೆಂಬುವಷ್ಟರ ಮಟ್ಟಿಗೆ 1970 ರ ದಶಕದ ಸೋವಿಯತ್ ಕಮ್ಯುನಿಸ್ಟ್ ನಾಯಕರು ನಂಬಿ ಬಿಟ್ಟಿದ್ದರು. ಜಾಗತಿಕ ಆರ್ಥಿಕ ವ್ಯವಸ್ಥೆಯೊಂದಿಗೆ ಸೋವಿಯತ್ ಆರ್ಥಿಕ ವ್ಯವಸ್ಥೆಯನ್ನು ಸಂಬಂಧ ಕಲ್ಪಿಸಿ, ಇವರಡೂ ಆರ್ಥಿಕತೆಗಳನ್ನು ಪರಸ್ಪರ ಅವಲಂಬನಾ ಸ್ಥಿತಿಯಲ್ಲಿಡಲು ಅಮೇರಿಕಾದ ಅಂದಿನ ನಿಕ್ಸನ್ ಸರ್ಕಾರ ತಂತ್ರ ರೂಪಿಸಿತ್ತು. ಈ ಹಿನ್ನೆಲೆಯಲ್ಲಿ ಅಮೇರಿಕಾ ಸೋವಿಯತ್ ರಷ್ಯಾದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿತು.

ಒಡಂಬಡಿಕೆಯ ಮೊದಲ ವರ್ಷಗಳಲ್ಲಿ ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟಗಳ ನಡುವೆ ಕೃಷಿ, ನಾಗರೀಕ ವಿಮಾನಯಾನ, ಪರಮಾಣು ಶಕ್ತಿ, ಸಾಗರಶಾಸ್ತ್ರ, ಗಣಕಯಂತ್ರ ಮತ್ತು ಪರಿಸರ, ಇತ್ಯಾದಿ ಕ್ಷೇತ್ರಗಳಲ್ಲಿ ಕಾರ್ಯಕಾರಿ ಗುಂಪುಗಳನ್ನು ರಚನೆ ಮಾಡಲಾಯಿತು. ಇಂತಹ ಗುಂಪುಗಳ ಗುರಿಯೆಂದರೆ, ಎರಡು ಸೂಪರ್ ಪವರ್ ರಾಷ್ಟ್ರಗಳ ನಡುವೆ 'ಶಾಂತಿ ಸೇತುವೆ' ನಿರ್ಮಾಣ ಮಾಡುವುದೆಂದು ಬಿಂಬಿಸಲಾಗಿತ್ತು. ಇಂತಹ ಕಾರ್ಯಕಾರಿ ಗುಂಪುಗಳು ತಮ್ಮ ತಮ್ಮ ದೇಶಗಳ ನಡುವೆ ಭೇಟಿ ವಿನಿಮಯ ನಡೆಸಿದವು. ಸೋವಿಯತ್ ರಷ್ಯಾ ಖರೀದಿ ಮಾಡುವ ತಂತ್ರಜ್ಞಾನ ಸಂಬಂಧಿತ ವಸ್ತುಗಳನ್ನು ಪಟ್ಟಿ ಮಾಡಿಕೊಂಡು ಅದನ್ನು ತನ್ನ ರಹಸ್ಯ ಕಾರ್ಯಾಚರಣೆಗಾಗಿ ಬಳಸಲು ಅಮೇರಿಕಾದ ಅಧ್ಯಕ್ಷ ನಿಕ್ಸನ್ ರವರು ಸಿಐಎ ನಿರ್ದೇಶಕರಿಗೆ ಸೂಚನೆ ನೀಡಿದ್ದರು.

ಅನಿಲ ಸಾಗಣೆ ಪೈಪ್‌ಲೈನ್‌ನಲ್ಲಿ ಗುಪ್ತ ಸಂಕೇತಗಳು

ತೈಲ ಮತ್ತು ಅನಿಲ ಉತ್ಪಾದನೆ ಮತ್ತು ಸಾಗಣೆಯು ಸೋವಿಯತ್ ಒಕ್ಕೂಟದ ಆದ್ಯತಾ ಕಾರ್ಯವಾಗಿತ್ತು. ಯೂರೋಪ್ ರಾಷ್ಟ್ರಗಳಿಗೆ




ಗೊರ್ಬಚೆವ್

ಅನಿಲ ಸರಬರಾಜು ಮಾಡಿ ಡಾಲರ್ ಮಾರುಕಟ್ಟೆಯನ್ನು ಪ್ರವೇಶಿಸಲು ಸೈಬೀರಿಯಾದ ಅನಿಲ ಬಾವಿಗಳಿಂದ ಪೈಪ್‌ಲೈನ್ ಮೂಲಕ ಕಜಕ್‌ಸ್ತಾನ್, ರಷ್ಯಾ ಮತ್ತು ಪೂರ್ವ ಯೂರೋಪ್ ಗಳಿಗೆ ಸಾಗಿಸಲು ಸೋವಿಯತ್ ಒಕ್ಕೂಟವು ಯೋಜನೆ ರೂಪಿಸಿತ್ತು. ಈ ಯೋಜನೆಯನ್ನು ಅತ್ಯಾಧುನಿಕವಾಗಿ ತಾಂತ್ರಿಕಗೊಳಿಸಲು ಸ್ವಯಂ-ಚಾಲಿತ ನಿಯಂತ್ರಣ ವ್ಯವಸ್ಥೆಯ ಅಗತ್ಯವಿತ್ತು. ಮುಕ್ತ ಮಾರುಕಟ್ಟೆಯಿಂದ ಗಣಕಯಂತ್ರಗಳನ್ನು ಕೊಂಡ ರಷ್ಯಾ, ಅದಕ್ಕೆ ಅವಶ್ಯವಿರುವ ಸಾಫ್ಟ್‌ವೇರ್ ತಂತ್ರಾಂಶಗಳನ್ನು ನೀಡುವಂತೆ ಅಮೇರಿಕಾವನ್ನು ಕೋರಿದಾಗ ಅದು ನೀಡಲು ನಿರಾಕರಿಸಿತು.

ಇದರಿಂದ ಧೃತಿಗೆಡದ ರಷ್ಯಾ, ಸೂಕ್ತ ತಂತ್ರಾಂಶಕ್ಕಾಗಿ ಎಲ್ಲೆಡೆ ತನ್ನ ಶೋಧನೆ ನಡೆಸಲಾರಂಭಿಸಿತು. ಇದಕ್ಕಾಗಿ ರಷ್ಯಾ ತನ್ನ ಕೆಜಿಬಿ ಏಜೆಂಟರನ್ನು ನೇಮಿಸಿ ಕೆನಡಾ ಮೂಲದ ಸಾಫ್ಟ್‌ವೇರ್ ಸರಬರಾಜು ದಾರನಿಂದ ಅವಶ್ಯ ಸಾಫ್ಟ್‌ವೇರ್ ಸಂಕೇತಗಳನ್ನು ಪಡೆಯಲು ಯತ್ನಿಸಿತು.

ರಷ್ಯಾದ ಯತ್ನಗಳಿಂದ ಎಚ್ಚೆತ್ತುಕೊಂಡಿತು. ಅಮೇರಿಕಾದ ಬೇಹುಗಾರ ಸಂಸ್ಥೆಯು ಅವಶ್ಯ ಸಾಫ್ಟ್‌ವೇರ್ ಸಂಕೇತಗಳು ರಷ್ಯಾದ ತಂತ್ರಜ್ಞರಿಗೆ ತಲುಪುವ ಮೊದಲೇ ಅದನ್ನು ತಿರುಚಿ ಕಳುಹಿಸಿಕೊಡಲಾಯಿತು.



ನಿಕ್ಸನ್

ಗಣಕಯಂತ್ರಗಳು ಮತ್ತು ಸಂಕೇತಗಳಿಂದ ಕೂಡಿದ ಅತ್ಯಾಧುನಿಕವಾದ ಪೈಪ್‌ಲೈನ್ ಯೋಜನೆಯನ್ನು ಅಳವಡಿಸುವಲ್ಲಿ ಸೋವಿಯತ್ ಒಕ್ಕೂಟ ಯಶಸ್ವಿಯಾಗಿತ್ತು. ಆದರೆ ಅನಿಲ ಹರಿಯುವ ಪೈಪ್‌ಲೈನ್‌ನಲ್ಲಿ ಗುಪ್ತ ನಿಯಂತ್ರಕ ಸಂಕೇತಗಳು ಸೇರಿಕೊಂಡಿದ್ದರಿಂದ ಮುಂದೊಂದು ದಿನ ಅಥವಾ ಹೊರಗಿನಿಂದ ನಿರ್ದೇಶನ ಸ್ವೀಕರಿಸಿದ ಸಂದರ್ಭದಲ್ಲಿ ಪೈಪ್‌ಲೈನ್ ವ್ಯವಸ್ಥೆಯು ನಿಯಂತ್ರಣ ಕಳೆದುಕೊಳ್ಳು ಸಂಭವ ಇದ್ದೇ ಇತ್ತು.

ಅನಿಲ ಪೈಪ್‌ಲೈನಿನ ಪಂಪುಗಳು, ಟರ್ಬೈನ್‌ಗಳು, ಮತ್ತು ನಿಯಂತ್ರಕಗಳನ್ನು ಸಾಫ್ಟ್‌ವೇರ್ ಸಂಕೇತಗಳಿಂದ ನಿಯಂತ್ರಿಸಿ ಯೂರೋಪ್ ರಾಷ್ಟ್ರಗಳಿಂದ ರಷ್ಯಾಗೆ ಹರಿದು ಬರುತ್ತಿದ್ದ ಲಾಭಕ್ಕೆ ತಡೆಯೊಡ್ಡಲು ಅಮೇರಿಕಾ ಮುಂದಾಯಿತು. ಇದರಿಂದುಂಟಾದ ಫಲಿತಾಂಶಗಳು ಅಮೇರಿಕಾಗೆ ಆಶ್ಚರ್ಯ ಹುಟ್ಟಿಸಿದವು. ಕ್ಷಿಪಣಿ ನೆಲೆ ಸ್ಥಾಪಿಸಿರದ ಪ್ರದೇಶಗಳಲ್ಲೂ ರಷ್ಯಾ ಕ್ಷಿಪಣಿ ಉಡಾಯಿಸಿದಂತೆ, ಪರಮಾಣು ಬಾಂಬುಗಳನ್ನು ಸಿಡಿಸಿದಂತೆ, ಇತ್ಯಾದಿ ಚಿಹ್ನೆಗಳು ಅಮೇರಿಕಾದ ರಕ್ಷಣಾ ವ್ಯವಸ್ಥೆಗೆ ತನ್ನ ರೇಡಾರ್‌ಗಳಿಂದ ಗೋಚರಿಸತೊಡಗಿ ಅದು ಗಾಬರಿಗೊಂಡಿತ್ತು. ಏಕೆಂದರೆ ಅಂತಹ ಪ್ರದೇಶಗಳಲ್ಲಿ ರಷ್ಯಾದ ಪೈಪ್‌ಲೈನ್ ಒಡೆದು ಬೆಂಕಿಯುಗುಳುತ್ತಿತ್ತು. ಇವೆಲ್ಲ ರಷ್ಯಾದ ಅಂತರ್ಯದಲ್ಲಿ ತಾನೇ ನಡೆಸುತ್ತಿರುವ ಆರ್ಥಿಕ ಯುದ್ಧದ ಕೃತ್ಯಗಳೆಂದು ಅಮೇರಿಕಾದ ಬೇಹುಗಾರ ಸಂಸ್ಥೆ ಸಿಐಎ ಯು ತನ್ನ ದೇಶದ ರಕ್ಷಣಾ ಇಲಾಖೆಗೆ ತಿಳಿಸಿ ಸಮಾಧಾನ ಪಡಿಸಬೇಕಾಯಿತು.

ನಿಯಂತ್ರಣ ತಪ್ಪಿದ ಕಾರ್ಯಕಾರಿ ಗುಂಪುಗಳು:

ಅಮೇರಿಕಾದ ಇಂತಹ ಹತ್ತು ಹಲವು ರಹಸ್ಯ ಕಾರ್ಯಾಚರಣೆಗಳು ಸೋವಿಯತ್ ಒಕ್ಕೂಟ ವ್ಯವಸ್ಥೆಯನ್ನು ಘಾಸಿಗೊಳಿಸಿ ಪತನದಂಚಿಗೆ ತಳ್ಳತೊಡಗಿದವು. ಇಷ್ಟೆಲ್ಲ ವಿಧ್ವಂಸಕ ಕೃತ್ಯಗಳು ನಡೆದರೂ ಕಾರ್ಯಕಾರಿ ಗುಂಪುಗಳಲ್ಲಿ, ಅಮೇರಿಕಾದ ಪ್ರಯೋಗಾಲಯಗಳು ಮತ್ತು ತಂತ್ರಜ್ಞಾನ ಕೈಗಾರಿಕೆಗಳಲ್ಲಿ ಏನು ಜರುಗುತ್ತಿದೆಯೆಂದು ರಷ್ಯಾದ ಅಧ್ಯಕ್ಷ ಗೊರ್ಬಚೆವ್ ಅವರಿಗೆ ಯಾವುದೇ ಸುಳಿವಿರಲಿಲ್ಲ. ತನ್ನ ದೇಶದ ಪ್ರಯೋಗಾಲಯಗಳು ಮತ್ತು ತಂತ್ರಜ್ಞಾನ ಕೈಗಾರಿಕೆಗಳು ಕೂಡ ನಿಯಂತ್ರಣ ತಪ್ಪಿರುವುದು ಅವರ ಗಮನಕ್ಕೆ ಬರಲೇ ಇಲ್ಲ.

ವ್ಯೂಹಾತ್ಮಕ ರಕ್ಷಣಾ ಒಡಂಬಡಿಕೆ:

ಅಮೇರಿಕಾದ ಅಂದಿನ ಅಧ್ಯಕ್ಷ ರೋನಾಲ್ಡ್ ರೇಗನ್ ಹೆಣೆದಿದ್ದ ವ್ಯೂಹಾತ್ಮಕ ರಕ್ಷಣಾ ಒಡಂಬಡಿಕೆಯು ಸೋವಿಯತ್ ಒಕ್ಕೂಟವನ್ನು ಪತನ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಅದೊಂದು ಒಡಂಬಡಿಕೆಯು ಅವರ ಅಧ್ಯಕ್ಷ ಅವಧಿಯ ಪ್ರಮುಖ ಸಾಧನೆ ಎಂದು ಸಿಐಎ ಗುಪ್ತ ವರದಿಗಳಲ್ಲಿ ತಿಳಿಸಲಾಗಿದೆ. ಮೊದಲಿಗೆ ನಟನಾಗಿ ನಂತರ ಅಮೇರಿಕಾದ ಅಧ್ಯಕ್ಷ ಪದವಿಗೇರಿದ ರೇಗನ್ ಸೋವಿಯತ್ ಒಕ್ಕೂಟದ ನಾಯಕರನ್ನು ಹಲವು ಹಂತಗಳ ಮಾತುಕತೆಗಳಲ್ಲಿ ದಿಕ್ಕುತಪ್ಪಿಸುವಲ್ಲಿ ತಮ್ಮ ನಟನಾ ಕೌಶಲ್ಯವನ್ನು ಮೆರೆದಿದ್ದರು.

ಸೋವಿಯತ್ ಒಕ್ಕೂಟದ ವಿಘಟನೆಗೆ ಅಮೇರಿಕಾದ ಹತ್ತೆಂಟು ರಣನೀತಿಗಳು

ಸೋವಿಯತ್ ಒಕ್ಕೂಟವನ್ನು ಧ್ವಂಸಗೊಳಿಸಲು ಮಾನಸಿಕ ಯುದ್ಧಕೌಶಲಗಳು, ಭಯೋತ್ಪಾದಕ ಕೃತ್ಯಗಳು, ಆರ್ಥಿಕ ಯುದ್ಧ, ವ್ಯೂಹಾತ್ಮಕವಾಗಿ ಮೋಸಗೊಳಿಸುವುದು, ಬೇಹುಗಾರಿಕೆ, ಗಣಕಯಂತ್ರ ಮತ್ತು ಅಂತರ್ಜಾಲ ಬಲೆ ಹೆಣೆಯುವುದು ಇತ್ಯಾದಿ ರಣನೀತಿಗಳನ್ನು ಅಮೇರಿಕಾದ ಸಿಐಎ, ರಕ್ಷಣಾ ಇಲಾಖೆ, ಪೆಂಟಗಾನ್, ಎಫ್‌ಬಿಐ (ಫೆಡರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್), ಇತ್ಯಾದಿ ಸಂಸ್ಥೆಗಳು ಕೂಡಿ ರೂಪಿಸಿದ್ದವು. ಅದೇ ವೇಳೆ ಇಂತಹ ಭಯಾನಕ, ಬೀಭತ್ಸ ಕೃತ್ಯಗಳನ್ನು ಅಮೇರಿಕಾ ವಿರುದ್ಧ ಸೋವಿಯತ್ ಒಕ್ಕೂಟವೇನಾದರೂ ಜರುಗಿಸಿದ್ದಲ್ಲಿ ಅದನ್ನು ಜಾಗತಿಕ ಮಟ್ಟದಲ್ಲಿ ಭಯೋತ್ಪಾದನಾ ಕ್ರಮಗಳೆಂದೇ ಪ್ರಚುರ ಪಡಿಸಲಾಗುತ್ತಿತ್ತು. ಅಂತಿಮವಾಗಿ ಸೋವಿಯತ್ ಒಕ್ಕೂಟ ಅಮೇರಿಕಾದ ಪಾಶವೀ ಕೃತ್ಯಗಳಿಗೆ ಶರಣಾಗಿ ವಿಘಟನೆಯಾಯಿತು.

ಇಂದು ವಿಶ್ವದ ಆರ್ಥಿಕ ವ್ಯವಸ್ಥೆಯು ಭೀಕರವಾದ ಬಿಕ್ಕಟ್ಟಿನಲ್ಲಿದೆ. ವಿವಿಧ ದೇಶಗಳ ಸಾರ್ವಭೌಮ ಹಕ್ಕುಗಳನ್ನು ಉಲ್ಲಂಘಿಸಲು ಅಮೇರಿಕಾ ಸರ್ಕಾರವು ಊಹಿಸಲಸದಳವಾದ ಆರ್ಥಿಕ ಶಕ್ತಿಯನ್ನು ಬಳಸುತ್ತಿದೆ. ಕಚ್ಚಾ ಸಾಮಗ್ರಿ, ಇಂಧನ, ಅತ್ಯಾಧುನಿಕ ಕೈಗಾರಿಕೆಗಳು, ಬೆಲೆ ಬಾಳುವ ಭೂಮಿ ಮತ್ತು ಆಧುನಿಕ ಕಟ್ಟಡಗಳು ಇತ್ಯಾದಿಗಳನ್ನು ಖರೀದಿಸಲು ಅಮೇರಿಕಾ ತನ್ನ ಕಾಗದದ ಹಣವನ್ನು ಬಳಸುತ್ತಿದೆ.

ಆಧಾರ: ಫಿಡೆಲ್ ಕ್ಯಾಸ್ಟ್ರೋರವರ ಸ್ಮರಣೆಗಳು



ಯೋಜನೆಯ ಖಾಸಗೀಕರಣ

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ದೇಶದ ಭಿವೃದ್ಧಿಗಾಗಿ ಸೋವಿಯತ್ ಮಾದರಿಯ ಪಂಚ ರ್ಷಿಕ ಯೋಜನೆಯುಗಳನ್ನು ಅಳವಡಿಸಿ ಳ್ಳಲಾಯಿತು ಎಂದು ಕಾಂಗ್ರೆಸ್ ಸರ್ಕಾರ ೇಳಿದರೂ ನಿಜದಲ್ಲಿ ಅದು ಬಂಡವಾಳಶಾಹಿ ರ್ಥಿಕತೆಯೇ ಆಗಿತ್ತು ಎಂಬುದು ಗೊತ್ತಿರುವ ಷಯ. ಹಲವು ಕ್ಷೇತ್ರಗಳಲ್ಲಿ ಸಾರ್ವಜನಿಕ ಹೂಡಿಕೆ ದ್ದುದರಿಂದ ಸಮಾಜವಾದಿ ಗುಣವೂ ಈ ರ್ಥಿಕದಲ್ಲಿ ಇದೆ ಎಂದು ಹೇಳಲಾಗುತ್ತಿತ್ತು. ಇದರಿಂದ ರ್ಥಿಕ-ಸಾಮಾಜಿಕ ಅಭಿವೃದ್ಧಿಯ ಮೇಲೆ ಕಾರಾತ್ಮಕ ಪರಿಣಾಮ ಆಗಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇಂತಹ ಅಭಿವೃದ್ಧಿಯಲ್ಲಿ ಂಚ ವಾರ್ಷಿಕ ಯೋಜನೆಗಳೂ ತಮ್ಮ ಪಾತ್ರ ಹಿಸಿದವು ಎಂಬುದನ್ನು ಯಾರೂ ಲ್ಲಗೆಳೆಯುವಂತಿಲ್ಲ. ಯೋಜನಾ ಆಯೋಗವೆಂಬ ೋಜನೆ ರೂಪಿಸುವ ಸರ್ಕಾರಿ ಸಂಸ್ಥೆ ಸಾಕಷ್ಟು ಂಭೀರ ರೀತಿಯಲ್ಲಿ ಕೆಲಸ ಮಾಡುತ್ತಿತ್ತು ಎಂಬುದೂ ಜ.

ಇಂದಿನ ಉದಾರೀಕರಣದ ದಿನಗಳಲ್ಲಿ ಯೋಜನೆ ಂಬುದಕ್ಕೆ ಯಾವುದೇ ಮಹತ್ವ ಉಳಿದಿಲ್ಲ. ಯೋಜನಾ ಆಯೋಗ ಎಂಬ ಸಂಸ್ಥೆ ಇದೆ. ಹನ್ನೊಂದನೇ ಪಂಚ ವಾರ್ಷಿಕ ಯೋಜನೆಯೂ ಇದೆ. ಯೋಜನೆಯ ಮೊದಲ ಆರು ತಿಂಗಳುಗಳು ಮುಗಿದಿದ್ದರೂ ಯೋಜನೆಯ ರೂಪುರೇಷೆಗಳು ಸಿದ್ಧವಾಗಿಲ್ಲ; ಹಾಗೆ ಅದು ಸಿದ್ಧವಾಗಿಲ್ಲ ಎಂಬುದು ದೊಡ್ಡ ಸುದ್ದಿಯೂ ಆಗಿಲ್ಲ ಎಂದರೆ ಇಂದಿನ ಪರಿಸ್ಥಿತಿಯಲ್ಲಿ ಯೋಜನೆಗೆ ಎಂತಹ ಮಹತ್ವ ಇದೆ ಎಂಬುದು ಸ್ಪಷ್ಟವಾಗುತ್ತದೆ.

ಇದಕ್ಕೆ ಕಾರಣ? ಮಾರುಕಟ್ಟೆ ಆರ್ಥಿಕದ ನವ ಉದಾರವಾದೀ ನೀತಿಗಳನ್ನು ಈಗ ಅಳವಡಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಯೋಜನೆಯ ಅವಶ್ಯಕತೆಯೆಲ್ಲಿ? ಇಡೀ ಮಾರುಕಟ್ಟೆ ಆರ್ಥಿಕತೆ, ಖಾಸಗಿಯವರ ಕೈಯಲ್ಲೇ ಇದೆ ಎನ್ನಬಹುದು. ಐಎಂಎಫ್ ಮತ್ತು ವಿಶ್ವ ಬ್ಯಾಂಕುಗಳಲ್ಲಿ ಅಧಿಕಾರಿಗಳಾಗಿದ್ದವರೇ ಈಗ ಯೋಜನಾ ಆಯೋಗದಲ್ಲಿ ಸೇರಿಕೊಂಡಿದ್ದಾರೆ. ಆದ್ದರಿಂದ ನವ ಉದಾರವಾದಿ ನೀತಿಗಳನ್ನು ಅವರು ಅನುಸರಿಸುತ್ತಾರೆ. ಅಲ್ಲದೆ ಈಗ ಸಾರ್ವಜನಿಕ ಹೂಡಿಕೆ ಎಂಬುದು ಬತ್ತಿ ಹೋಗುತ್ತಿರುವಂತಿದೆ. ಖಾಸಗಿ ಬಂಡವಾಳಿಗರೇ ಹೂಡಿಕೆಯ ವಿಷಯದಲ್ಲಿ ವಿಜೃಂಭಿಸುತ್ತಿದ್ದಾರೆ. ವಿದ್ಯುತ್ ಕ್ಷೇತ್ರದಲ್ಲಿ ಅಗತ್ಯ ಸಾರ್ವಜನಿಕ ಹೂಡಿಕೆಯನ್ನು ಮಾಡದಿರುವುದರಿಂದಲೇ ಇವತ್ತು ಅಮೇರಿಕದೊಡನೆ ಅಣು ಒಪ್ಪಂದ ಮಾಡಿಕೊಂಡು ವಿದೇಶಿ ತಂತ್ರಜ್ಞಾನ ಮತ್ತು ಬಂಡವಾಳದ ಹರಿವಿಗೆ ಅನುವು ಮಾಡಿಕೊಡುವ ಸಿದ್ಧತೆ ನಡೆದಿದೆ. ಹೀಗೆ ಕೇಂದ್ರದ ಮಟ್ಟದಲ್ಲಿ ಯೋಜನೆ ಎಂಬುದು ಇಲ್ಲದಿರುವ ಸ್ಥಿತಿ ಬಂದಿದೆ.

ಇದೇ ಸಮಯದಲ್ಲಿ ಕೇಂದ್ರ ಸರ್ಕಾರ ಜಿಲ್ಲಾ ಮಟ್ಟದಲ್ಲಿ ವಿವರವಾದ ಯೋಜನೆಗಳು ಇರಬೇಕೆಂದು ಒತ್ತಾಯಿಸತೊಡಗಿದೆ. ಪಂಚಾಯತ್‌ರಾಜ್ ವ್ಯವಸ್ಥೆಯ ಮೇಲೆ ಹೆಚ್ಚಿನ ಒತ್ತು ನೀಡತೊಡಗಿದೆ.

ಪಂಚಾಯತ್‌ರಾಜ್ ವ್ಯವಸ್ಥೆ ರಾಜ್ಯ ಸರ್ಕಾರದ ವಿಷಯ. ಕೇಂದ್ರ ಸರ್ಕಾರ ಲಾಭದ ಆಸೆಯ ಕೊಡೆಯಡಿ ನಡೆಯುತ್ತದೆ. ಹಾಗೆಯೇ ಯೋಜನಾ ಕಾರ್ಯವೂ ಖಾಸಗಿಯವರಿಂದಲೇ, ಅವರಿಗಾಗಿ ನಡೆಯುತ್ತದೆ.

ಇಂದಿನ ಯೋಜನೆಯಲ್ಲಿ ಎರಡು ತರಹದ ವೈರುಧ್ಯಗಳು ಕಾಣುತ್ತಿವೆ. ಕೇಂದ್ರದ ಮಟ್ಟದಲ್ಲಿ ಯೋಜನೆ ಖಾಸಗಿಯವರ ರಾಜ್ಯ ಸರ್ಕಾರಗಳ ಪಾತ್ರಕ್ಕೆ ಹೆಚ್ಚಿನ ಮಹತ್ವ ನೀಡದೇ ಪಂಚಾಯತ್ ಮಟ್ಟದ ಯೋಜನೆಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದೆ. ರಾಜ್ಯ ಸರ್ಕಾರಗಳ ಸಂಪನ್ಮೂಲಗಳಿಗೆ ಕೇಂದ್ರ ಸರ್ಕಾರ ಕತ್ತರಿ ಹಾಕುತ್ತಿದ್ದು ಸ್ಥಳೀಯ ಸಂಸ್ಥೆಗಳಿಗೆ ಶೇ.40ರಷ್ಟು ಸಂಪನ್ಮೂಲಗಳನ್ನು ನೀಡಲೇಬೇಕೆಂಬ ಒತ್ತಡವನ್ನು ಅದು ಹೇರುತ್ತಿದೆ.

ಇಲ್ಲಿ ಒಂದು ಕಡೆ ಕೇಂದ್ರ ಸರ್ಕಾರದ ಕೈಯಲ್ಲಿ ಸಂಪನ್ಮೂಲಗಳೆಲ್ಲ ಕೇಂದ್ರೀಕರಣಗೊಳ್ಳುತ್ತಿದ್ದರೆ, ಕೇಂದ್ರ ಸರ್ಕಾರ ಸ್ಥಳೀಯ ಸಂಸ್ಥೆಗಳಿಗೆ ಈ ಸಂಪನ್ಮೂಲಗಳು ವಿಕೇಂದ್ರೀಕರಣಗೊಳ್ಳಬೇಕು ಎಂದು ಒತ್ತಾಯಿಸುತ್ತದೆ. ನಡುವೆ ರಾಜ್ಯ ಸರ್ಕಾರಗಳು ಸಂಪನ್ಮೂಲಗಳ ಕೊರತೆಯಿಂದಾಗಿ ಬಳಲುತ್ತಿವೆ.

ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಯೋಜನೆ ಸಿದ್ಧಪಡಿಸುವ ಮತ್ತು ಅನುಷ್ಠಾನಗೊಳಿಸುವ ಪರಿಣತಿ ಇದೆಯೇ ಎಂಬುದು ಪ್ರಶ್ನೆ. ಎಡಪಕ್ಷಗಳು ಅಧಿಕಾರಿಗದಲ್ಲಿರುವ ರಾಜ್ಯಗಳಲ್ಲಿ ಹಿಂದಿನಿಂದಲೂ ವಿಕೇಂದ್ರೀಕರಣ ಆಗಿರುವುದರಿಂದ ಯೋಜನೆಯ ಪರಿಣತಿ ಇದೆ. ಇನ್ನುಳಿದ ರಾಜ್ಯಗಳಲ್ಲಿ ಈ ಮಟ್ಟಗಳಲ್ಲಿ ಯೋಜನೆಯ ಪರಿಣತಿ ಇಲ್ಲ. ಪರಿಣತಿ ಇಲ್ಲದೇ ಇರುವಾಗ ಏನಾಗುತ್ತದೆ ಎಂದರೆ ಯಾವುದೋ ಖಾಸಗಿಯವರು ಯೋಜನೆ ಗಳನ್ನು ಸಿದ್ಧಪಡಿಸಿಕೊಡುತ್ತಾರೆ. ಖಾಸಗಿಯವರು ಸಿದ್ಧಪಡಿಸಿ ಕೊಡುವ ಯೋಜನೆಗಳು ಮತ್ತೆ ಖಾಸಗಿಯವರ ಅನುಕೂಲಗಳಿಗೆ ತಕ್ಕಂತೆ ಇರುತ್ತವೆ. ಇದರಿಂದಾಗಿ ಯೋಜನೆಯ ಮೂಲ ಉದ್ದೇಶಕ್ಕೆ ಹೊಡೆತ ಬೀಳುತ್ತದೆ.

ಹೀಗೆ ಮೇಲಿನಿಂದ ಕೆಳಗಿನವರೆಗೂ ಒಂದಲ್ಲ ಒಂದು ರೀತಿಯಲ್ಲಿ ಯೋಜನೆ ಎಂಬುದು ಕಾಣೆಯಾಗುತ್ತಿದ್ದು ಖಾಸಗಿಯವರ ಲಾಭೋದ್ದೇಶದ ಕಾರ್ಯಕ್ರಮಗಳು ಮಾತ್ರ ಕಾಣ ಸಿಗುತ್ತದೆ. ಹೆಸರಿಗೆ ಯೋಜನಾ ಆಯೋಗವೆಂಬುದು ಇದ್ದರೂ ಇದು ಜನರ ಕಣ್ಣಿಗೆ ಮಣ್ಣೆರುಚುವ ಪ್ರಯತ್ನ ಮಾತ್ರ. ಯೋಜನೆ ಮತ್ತು ಯೋಜನಾ ಪ್ರಕ್ರಿಯೆ ಖಾಸಗಿಯವರಿಗೆ ಸಂಪತ್ತು ಹಸ್ತಾಂತರಿಸುವ ಒಂದು ಷಡ್ಯಂತ್ರವಾಗಿದೆ.

ಯೋಜನಾ ಪ್ರಕ್ರಿಯೆಯಲ್ಲಿ ಜನತೆಯನ್ನು ಪೂರ್ತಿಯಾಗಿ ಒಳಗೊಳ್ಳುವುದು ಬಹಳ ಮುಖ್ಯವಾದುದು. ಆದರೆ ಇಂದು ಈ ಪ್ರಕ್ರಿಯೆಗಳಲ್ಲಿ ಜನರನ್ನು ಪೂರ್ತಿಯಾಗಿ ಹೊರಗಿಡಲಾಗುತ್ತಿದೆ. ಬದಲಿಗೆ ಖಾಸಗಿ ಕನ್ಸಲ್ಟೆಂಟ್‌ಗಳು! ಸಲಹಾಗಾರರು ಮೆರೆಯುತ್ತಿದ್ದಾರೆ. ಸರ್ಕಾರಿ ಹುದ್ದೆಗಳು ಈ ಉದ್ದೇಶಗಳನ್ನು ಸಫಲಗೊಳಿಸುವ ಯಂತ್ರಗಳಾಗಿವೆ. ಯೋಜನಾ ಪ್ರಕ್ರಿಯೆ ಖಾಸಗಿಯವರ ಸಂಪತ್ತು ಹೆಚ್ಚಿಸುವ ಪ್ರಕ್ರಿಯೆಯಾಗಿದೆ.

ಬೆಳ್ತಂಗಡಿ : ಬಡ ರೈತರ ಬವಣೆಗಳು

ಬೆಳ್ತಂಗಡಿ ತಾಲ್ಲೂಕಿನ 8 ಗ್ರಾಮಗಳು ಅಭಯಾರಣ್ಯ ಪ್ರದೇಶಗಳಿಗೆ ಸೇರಿದ್ದರೆ, ಇನ್ನು 30 ಗ್ರಾಮಗಳು ರಕ್ಷಿತಾರಣ್ಯಗಳಿಗೆ ಸೇರಿವೆ. ಇನ್ನು ಕೆಲವು ಗ್ರಾಮಗಳಲ್ಲಿ ರೈತರ ಬವಣೆ ಸಮಗ್ರ ಭೂಮಸೂದೆ ಜಾರಿಗೆ ತಂದು, ಭೂಮಿಯಲ್ಲಿ ದುಡಿಯುವವರಿಗೆ ಭೂಮಿ ಹಂಚಲು ವಿಫಲವಾದ ಸರಕಾರ ಭೂಮಿಯನ್ನು ಹೊಂದಿದ ರೈತರನ್ನು ಒಕ್ಕಲೆಬ್ಬಿಸಲು ಕಾನೂನುಗಳನ್ನು ತರಲು ಹೇಸುವುದಿಲ್ಲ.

ಅಭಯಾರಣ್ಯ ಪ್ರದೇಶಗಳಲ್ಲಿ ಆದಿವಾಸಿಗಳು ಅದೆಷ್ಟೋ ವರ್ಷಗಳಿಂದ ಬಾಳಿ ಬದುಕುತ್ತಿದ್ದು, ಸ್ವಂತ ಭೂಮಿಯನ್ನು ಹೊಂದಿದ್ದಾರೆ. ಅವರಿಗೆ ಬದುಕಿನ ಭದ್ರತೆಯಿಲ್ಲ. ಈ ನಕ್ಸಲ್ ಹೆಸರಿನಲ್ಲಿ ಆ ಗ್ರಾಮಗಳನ್ನು ಪ್ರತ್ಯೇಕವಿಡಲಾಗಿದೆ. ನಕ್ಸಲ್‌ವಾದಿಗಳ ಬಗ್ಗೆ ಏನೂ ಮಾಡಲಾಗದ ಸರಕಾರ, ಪೊಲೀಸ್ ಇಲಾಖೆ ಬಡ ರೈತರನ್ನು ಹೆದರಿಸುತ್ತಿದೆ. ಅತ್ತ ನಕ್ಸಲರ ಕಾಟ, ಇತ್ತ ಪೋಲೀಸ್ ಕಾಟ, ಹೇಗೆ ಬದುಕಬೇಕು ಈ ಬಡರೈತರು.

ಅರಣ್ಯ 'ರಕ್ಷಣೆ ಮಾಡೋ' ಅಧಿಕಾರಿಗಳ ಕಿರುಕುಳ, ಇನ್ನೊಂದೆಡೆ ರಕ್ಷಿತಾರಣ್ಯ ಎಂಬ ಹೆಸರಿನಲ್ಲಿ ರೈತರು ಭೂಮಿ ಬಿಡಬೇಕೆಂಬ ಬೆದರಿಕೆ, ಅದೆಷ್ಟೋ ವರ್ಷಗಳಿಂದ ಕೃಷಿ ಮಾಡಿ ಜೀವಿಸಿಕೊಂಡು ಬರುತ್ತಿರುವ ಕುಟುಂಬಗಳಿಗೆ ಭೂಮಿ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿ 20 ವರ್ಷಗಳಾಗುತ್ತಾ ಬಂದರೂ, ಹಕ್ಕುಪತ್ರ ನೀಡಲು ಸಾಧ್ಯವಾಗದ ಸರಕಾರಗಳ ಬಗ್ಗೆ ರೈತರು ಅಸಹ್ಯಪಡುವಂತಾಗಿದೆ. ಅರಣ್ಯ ಇಲಾಖಾಧಿಕಾರಿಗಳ ಕಿರುಕುಳ ಕೂಡಾ. ಈ ರೈತರಿಗೆ ಭೂಮಿಯ ಹಕ್ಕುಪತ್ರ ಇಲ್ಲದೇ ಸಾಲ ಸೌಲಭ್ಯ ಇಲ್ಲ. ಸಾಲ ಮನ್ನಾದ ಪ್ರಶ್ನೆಯೇ ಇಲ್ಲ.

ಅಡಿಕೆ, ರಬ್ಬರ್, ಗೇರು, ಕೃಷಿಗಳೇ ತಾಲೂಕಿನ ಉಸಿರು. ಅಡಿಕೆ ಬೆಳೆಗಾರರು ಈ ವರ್ಷದ ಮಳೆಯ ಅಬ್ಬರದಿಂದ ರೋಗ ಬಂದು ಕಂಗಾಲಾಗಿದ್ದಾರೆ. ರಬ್ಬರ್ ಬೆಲೆ ಇಳಿಯುತ್ತಿದೆ. ಗೇರು ಉತ್ಪತ್ತಿ ಕಡಿಮೆ ಆಗುತ್ತಿದೆ. ಈ ಕೃಷಿಕರೂ ಆತ್ಮಹತ್ಯೆದಾರಿ ನೋಡುವುದನ್ನು ಆಳುವವರು ಎದುರು ನೋಡುತ್ತಿದ್ದಾರೆ ಎಂದರೆ ತಪ್ಪಲ್ಲ.

ತುಂಡು ಭೂಮಿ ಹೊಂದಿದೋರು, ಸರಕಾರಿ ಭೂಮಿ ಅಕ್ರಮಿಸಿ ಇನ್ನೂ ಹಕ್ಕುಪತ್ರ ಪಡೆಯದೋರು, ಅರಣ್ಯ ಇಲಾಖೆಯ ಸ್ಥಳವೆಂದು ಹಕ್ಕುಪತ್ರದಿಂದ ವಂಚಿಸಲ್ಪಟ್ಟೋರು, ಒಕ್ಕಲೆಬ್ಬಿಸುವ ಭೀತಿ ಹೊತ್ತೋರು, ಲಂಚ ನೀಡಲು ಸಾಧ್ಯವಾಗದೆ-ಹಕ್ಕುಪತ್ರ ಸಿಗದಂತಾದೋರು, ಎಲ್ಲರೂ ಬಡವರೇ, ಜೊತೆಗೆ ಕೃಷಿ ಕೂಲಿಯನ್ನು ನಂಬಿದ 5 ಸೆಂಟ್ಸ್ ನಿವೇಶನದಲ್ಲಿ ವಾಸ್ತವ್ಯವಿದ್ದರೂ ಅದರ ಹಕ್ಕುಪತ್ರವೂ ಸಿಗದೋರು. ಇವರಿಗೆಲ್ಲಾ ಸರಕಾರ ನೀಡಿದ್ದು ಎಪಿಎಲ್ ಕಾರ್ಡು. ಸರಕಾರಕ್ಕೆ ಇವರೆಲ್ಲಾ ಶ್ರೀಮಂತರು. ಇನ್ನು ಬಡವರ್ಯಾರು? ಬಿಪಿಎಲ್ ಯಾರಿಗೆ? ಒಟ್ಟಾರೆ ಬಡವರ ಸಂಖ್ಯೆ ಕಡಿಮೆ ಮಾಡೋದೆ ಸರಕಾರದ ಗುರಿ. ಬಡವರ ಅಭಿವೃದ್ಧಿ ಮಾಡೋದು ಇವರ ಜಾಯಮಾನವಲ್ಲ.

ಕರ್ನಾಟಕ ಪ್ರಾಂತ ರೈತ ಸಂಘ ಬೆಳ್ತಂಗಡಿ ತಾಲ್ಲೂಕು ಸಮಿತಿ ಈ ರೈತರ ಪರವಾಗಿ ನಿರಂತರ ಹೋರಾಡುತ್ತಿದೆ. ಪ್ರತಿ ಪಂಚಾಯ್ತಿ ಕೇಂದ್ರದಲ್ಲಿ ನಿರಂತರ ಹೋರಾಟ ನಡೆಸುತ್ತಿದೆ. ಹಕ್ಕುಪತ್ರಕ್ಕಾಗಿ, ಬಿಪಿಎಲ್ ಕಾರ್ಡಿಗಾಗಿ ವಿದ್ಯುತ್ ಸೌಲಭ್ಯಕ್ಕಾಗಿ, ನೀರಿನ ಸೌಲಭ್ಯಗಳಿಗಾಗಿ ಒಕ್ಕಲೆಬ್ಬಿಸುವ ಕುತಂತ್ರದ ವಿರುದ್ಧವಾಗಿ, ರೈತರ ಮನೆಗಳಿಗೆ, ರಸ್ತೆ ದಾರಿ ವ್ಯವಸ್ಥೆಗಾಗಿ ನಿರಂತರ ಹೋರಾಟ ನಡೆಸುತ್ತಿದೆ. ರೈತರ ಸೌಲಭ್ಯಗಳಿಗಾಗಿ, ಸಹಾಯಧನಕ್ಕಾಗಿ ಕೂಡಾ ಹೋರಾಟ ನಡೆಸುತ್ತಿದೆ.

ರೈತರ ಕೃಷಿಕರ, ಕೃಷಿಕೂಲಿ ಕಾರ್ಮಿಕರ ಆಶಾಕಿರಣ, ಕರ್ನಾಟಕ ಪ್ರಾಂತ ರೈತ ಸಂಘ, ಈ ಬಿಜೆಪಿ ಕಾಂಗ್ರೆಸ್ ಪಕ್ಷದವರು ಮತ ಕೇಳಲು ಬರುತ್ತಾರೆ. ಹಕ್ಕುಪತ್ರ ಕೊಡುತ್ತೇವೆ. ಬಿಪಿಎಲ್ ಕೊಡುತ್ತೇವೆ ಎಂದೆಲ್ಲಾ ಹೇಳಿ ಕೊನೆಗೆ ಮತ ಪಡೆದು ಆಯ್ಕೆ ಆದ ಮೇಲೆ ರೈತರ ನೆನಪಿಲ್ಲದಾಗುತ್ತಾರೆ. ರೈತರು ಒಗ್ಗಟ್ಟಾಗಿ ಹೋರಾಡುವುದೇ ಏಕೈಕ ದಾರಿ ಆಗಿದೆ. ಜಾತಿ ಧರ್ಮದ ಹೆಸರಲ್ಲಿ ಬರುವ ರಾಜಕೀಯದವರಿಗೂ ರೈತರ ಕಷ್ಟದ ಬಗ್ಗೆ ಚಿಂತೆ ಇಲ್ಲ. ಸರಕಾರ ಈಗ ನೀಡುತ್ತಿರುವ ಸೌಲಭ್ಯಗಳನ್ನು ಜನರಿಗೆ ತೆಗೆಸಿಕೊಡಲು ಈ ಜನಪ್ರತಿನಿಧಿಗಳು ಮುಂದೆ ಬರುತ್ತಿಲ್ಲ. ಆ ಕೆಲಸವನ್ನು ಹೋರಾಟದ ಮೂಲಕ ಸಂಘವೇ ಮಾಡುತ್ತಾ ಬಂದಿರುವುದು ರೈತರಿಗೆ ಸಂಘದ ಬಗ್ಗೆ ಅಭಿಮಾನ ಹೆಚ್ಚುತ್ತಿದೆ.

ಮಣ್ಣಲ್ಲೇ ದುಡಿಯುವ ರೈತ, ಮುದುಕನಾದರೂ ಮಣ್ಣಲ್ಲಿ ದುಡಿದು ಬದುಕಬೇಕಾಗಿದೆ. ನಿವೃತ್ತಿ ನೀಡಿ ನಿವೃತ್ತಿವೇತನ ನೀಡಬೇಕೆಂಬ ಭಾವನೆ ಬಿಜೆಪಿಗೂ ಇಲ್ಲ, ಕಾಂಗ್ರೆಸ್ಸಿಗೂ ಜೆಡಿಎಸ್‌ಗೂ ಇಲ್ಲ. ಈ ನಿಟ್ಟಿನಲ್ಲಿ ರೈತರು ಒಟ್ಟಾಗಿ ಹೋರಾಡಬೇಕಾಗಿದೆ. ರೈತರ ಸಂಘಟಿತ ಶಕ್ತಿಯನ್ನು ಮುಂದಿನ ದಿನಗಳಲ್ಲಿ ತೋರಿಸಲು ತಯಾರಾಗುತ್ತಿದ್ದಾರೆ.

○ ಬಿ.ಎಂ.ಭಟ್

.... ಜಂಟಿ ಕ್ರಿಯಾಸಮಿತಿ ಸಮಾವೇಶ

ಪುಟ 13 ರಿಂದ

ಡೆಪಾಸಿಟ್ ಇದ್ದು ಇದನ್ನು ಕೊಳ್ಳೆ ಹೊಡೆಯಲು ಅನುವು ಮಾಡಿಕೊಡುತ್ತಾರೆಂದು ಹೇಳಿದರು.

ನಂತರ ಬಿಇಎಫ್‌ಐನ ನಾಯಕರಾದ ಕಾಂ.ಎಂ.ಆರ್.ಶೆಣೈರವರು ಮಾತ ನಾಡುತ್ತಾ ಮಾಧ್ಯಮಗಳಲ್ಲು ಪ್ರಮುಖ ಸುದ್ದಿಗಳೆಂದರೆ 1.5 ಲಕ್ಷ ರೈತರ ಆತ್ಮಹತ್ಯೆ. ಇದಕ್ಕೆ ಕಾರಣ ಖಾಸಗಿ ಸಾಲ. ಇಂತಹ ಬಿಕ್ಕಟ್ಟುಗಳಿಗೆ ಬ್ಯಾಂಕಿಂಗ್ ವಲಯ ಪರಿಹಾರವಾಗಿ ಕಾರ್ಯ ನಿರ್ವಹಿಸುತ್ತಿದೆ. ಇಂತಹ ಬ್ಯಾಂಕ್‌ಗಳನ್ನು ಬಲಿಷ್ಠಗೊಳಿಸುವ ಬದಲು ನಾಶಗೊಳಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಸಾಮಾನ್ಯ ಜನರು ಬ್ಯಾಂಕಿಂಗ್ ಸೌಲಭ್ಯ ಪಡೆಯದ ಹಾಗೆ ಮಾಡುವುದು ಇವರ ಉದ್ದೇಶವಾಗಿದೆ. ಇಡೀ ಜಗತ್ತಿನಲ್ಲೆ ಬ್ಯಾಂಕಿಂಗ್ ಬಿಕ್ಕಟ್ಟಿನಲ್ಲಿದೆ. ಮೆರಿಟ್ ಸಾಲ ಕೊಡುವ ಸಂಸ್ಥೆ 40,000 ಕೋಟಿ ಕಳೆದುಕೊಂಡಿದೆ. ಇಂಗ್ಲೇಂಡ್‌ನಲ್ಲಿ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. ಖಾಸಗೀ ಸಂಸ್ಥೆಗಳಿಗೆ ಅಲ್ಲಿನ ಸರ್ಕಾರಗಳು ಸಹಾಯ ಹಸ್ತ ನೀಡುತ್ತಿವೆ. ಕತ್ರಿನಾ ದುರಂತ, ಡಬ್ಲ್ಯೂಟಿಸಿ ದುರಂತದಲ್ಲಿ ವಿಮಾ ಸಂಸ್ಥೆಗಳಿಗೆ ಸರ್ಕಾರ ಸಹಕರಿಸಿತ್ತು. ಜಪಾನ್‌ನಲ್ಲಿ 10 ಬ್ಯಾಂಕ್‌ಗಳಲ್ಲಿ 6 ಮುಳುಗುವ ಸ್ಥಿತಿ ತಲುಪಿದಾಗ ಅಲ್ಲಿನ ಸರ್ಕಾರ ನೆರವು ಕೊಟ್ಟಿದೆ. ಆದರೆ ನಮ್ಮ ದೇಶದಲ್ಲಿ ತದ್ವಿರುದ್ಧ ನೀತಿ ಅನುಸರಿಸುತ್ತಾರೆ.

ಶೇರು ಮಾರುಕಟ್ಟೆಯ ಬಗ್ಗೆ ಮಾತನಾಡಿದ ಅವರು 20,000 ಸೂಚ್ಯಂಕ ದಾಟಿದೆ. ಇದು ಅಪಾಯದ ಸೂಚನೆ. ಒಂದು ತಿಂಗಳಲ್ಲಿ ಸುಮಾರು 22,000 ಕೋಟಿ ಲೂಟಿಯಾಗಿದೆ ಎಂದರು. ಎಫ್‌ಡಿಐ ಮೂಲಕ ಬ್ಯಾಂಕಿಂಗ್ ಅನ್ನು ಸರ್ವನಾಶಗೊಳಿಸುವುದೇ ಇವರ ನೀತಿಯಾಗಿದೆ. ಈಗಾಗಲೇ ಬ್ಯಾಂಕಿಂಗ್ ನಲ್ಲಿರುವ ಜಂಟಿ ಹೋರಾಟ ಸಮಿತಿ 40 ಮುಷ್ಕರಗಳನ್ನು ಯಶಸ್ವಿಯಾಗಿ ನಡೆಸಿದೆ ಎಂದರು.

ಸಿಐಟಿಯುವಿನ ಕಾಂ.ಕೆ.ಎನ್. ಉಮೇಶ್, ಕಾಂ.ಬಸವಮ್ಮ, ಟಿಯುಸಿಸಿಯಿಂದ ಕಾಂ.ಶಿವಶಂಕರ್, ಕಾಂ.ಸಿದ್ದರಾಮಯ್ಯ, ಯುವಜನ ಸಂಘಟನೆಯ ಕಾಂ.ಮಹಾಂತೇಶ್, ಎಐಟಿಯುಸಿಯಿಂದ ಕಾಂ.ಪುಟ್ಟಲಕ್ಷ್ಮಿ, ಕಾಂ.ಶೇಷಾದ್ರಿ ಹೀಗೆ ಸುಮಾರು 24 ಸಂಗಾತಿಗಳು ಮಾತನಾಡಿದರು. ಎಲ್ಲರಲ್ಲೂ ಐಕ್ಯತೆ ಮತ್ತು ಹೋರಾಟ ಎಂಬ ಘೋಷಣೆ ಅಚಲವಾಗಿತ್ತು. ಡಿಸೆಂಬರ್ 4 ಮತ್ತು 5ರ ಸತ್ಯಾಗ್ರಹವನ್ನು ಭಾರೀ ಯಶಸ್ವಿ ಮಾಡಲು ಒಮ್ಮತದಿಂದ ತೀರ್ಮಾನ ಕೈಗೊಂಡರು.

ಕೊನೆಯಲ್ಲಿ ಎಐಟಿಯುಸಿಯ ಕಾಂ.ನಾಗರಾಜ್ ವಂದನಾರ್ಪಣೆ ಸಲ್ಲಿಸಿದರು.

ವರದಿ: ನಾಗರಾಜ್, ಎಲ್‌ಐಸಿ



ನಕುಲ

'ಗಣೇಶ' ಬ್ರಾಂಡ್‌ನ ನಗೆ ಪಟಾಕಿ

'ಗಣೇಶ' ಹೆಸರಿನ ಚಿತ್ರಗಳ ಸರಮಾಲೆ ಮತ್ತೆ ಆರಂಭವಾಗಿದೆ. ಹಿಂದೆ ಫಣಿ ರಾಮಚಂದ್ರ ಮತ್ತು ಅನಂತನಾಗ್ ಕಾಂಬಿನೇಷನ್‌ನಲ್ಲಿ ಈ ಹೆಸರಿನ ಸಾಕಷ್ಟು ಚಿತ್ರಗಳು ತೆರೆಕಂಡು, ಯಶಸ್ಸನ್ನೂ ಗಳಿಸಿದ್ದವು. ಈಗ ನಿರ್ದೇಶಕ ದಿನೇಶ್‌ಬಾಬು ಸರದಿ. ಆದರೆ ನಾಯಕ ಮಾತ್ರ ಜಗ್ಗೇಶ್. ಮಾಧ್ಯಮಗಳಲ್ಲಿ 'ಹೊಟ್ಟೆ ಹುಣ್ಣಾಗಿಸುವ ಹಾಸ್ಯ' ಎಂಬ ಪ್ರಚಾರ ಪಡೆದಿದ್ದರೂ ಹಿಂದಿನ ಅನಂತ್‌ನಾಗ್‌ರ ಚಿತ್ರಗಳಲ್ಲಿನ ಮಟ್ಟಕ್ಕೆ ಈ ಹಾಸ್ಯ ನಿಲ್ಲುವುದಿಲ್ಲ. ಈ ಚಿತ್ರದಲ್ಲೂ ಅನಂತ್‌ನಾಗ್ ಇದ್ದಾರೆ, ಆದರೆ ಅವರಿಗೆ ಇಲ್ಲಿ ನಗಿಸುವ ಜವಾಬ್ದಾರಿಯಿಲ್ಲ. ಅದೇನಿದ್ದರೂ ಜಗ್ಗೇಶ್ ಪಾಲಿಗೆ.

ಹಾಸ್ಯದ ಕಸರತ್ತು

ಮನಸ್ಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳಬೇಕು, ಅದೇ ನೆಮ್ಮದಿಯ ಜೀವನಕ್ಕೆ ದಾರಿ ಎಂಬ ಒಂದು ಸಾಲಿನ ಸಂದೇಶದ ಕಥೆಯೇ ಈ ಚಿತ್ರ. ಆದರೆ ಅದು ಗೊತ್ತಾಗುವುದೇ ಚಿತ್ರದ ಅಂತ್ಯದಲ್ಲಿ. ಅಲ್ಲಿಯವರೆಗೂ ಜಗ್ಗೇಶ್‌ರವ ವಿಚಿತ್ರ ಮ್ಯಾನರಿಸಂ ಬಳಸಿಕೊಂಡು ಹಾಸ್ಯಮಯ ಗೊಳಿಸಲು ಬಾಬು ಸಾಕಷ್ಟು ಕಸರತ್ತು ನಡೆಸಿದ್ದಾರೆ.

ಗಣೇಶ ಸ್ವಭಾವದಲ್ಲಿ ಸಜ್ಜನನಾದರೂ ಒಬ್ಬ ಬೇಜವಾಬ್ದಾರಿ ಯುವಕ. ದುಡಿಯದೇ ಕಂಡಕಂಡಲ್ಲಿ ಸಾಲ ಮಾಡಿಕೊಂಡಿರುತ್ತಾನೆ. ಅಪ್ಪ ಸತ್ತ ಮೇಲೆ ಮನೆ ಮಾರಿ, ಸಾಲ ತೀರಿಸಿ ನೆಮ್ಮದಿಯಾಗಿರಬಹುದು ಎಂಬುದು ಅವನ ಯೋಚನೆ. ಆದರೆ ಆತನ ಅಪ್ಪ (ಅನಂತನಾಗ್) ಸಾಯುವ ಮೊದಲು ಯಾವುದೇ ಕಾರಣಕ್ಕೂ ಮನೆ ಮಾರಬಾರದೆಂದು ಎಲ್ಲರ ಸಮ್ಮುಖದಲ್ಲಿ ಬಲವಂತವಾಗಿ ಮಾತು ತೆಗೆದುಕೊಂಡಿರುತ್ತಾನೆ. ಆದರೂ ಅಪ್ಪನ ಮಾತನ್ನು ಧಿಕ್ಕರಿಸಿ ಮನೆ ಮಾರಲು ಮುಂದಾಗುತ್ತಾನೆ. ಆದರೆ ಆತನ ಅಪ್ಪ ದೆವ್ವವಾಗಿ ಬಂದು ಮನೆ ಮಾರಾಟಕ್ಕೆ ಅಡ್ಡಿಪಡಿಸುತ್ತಾನೆ. ಇವೆಲ್ಲಾ ಹಾಸ್ಯಲೇಪಿತ ಧಾಟಿಯಲ್ಲೇ ಸಾಗಿ, ಜಗ್ಗೇಶ್ ಗಮನ ಸೆಳೆದರೆ ಅನಂತ್‌ನಾಗ್ ಮಂಕಾಗಿದ್ದಾರೆ ಎಂದೇ ಹೇಳಬಹುದು.



ತಿರುವು

ಮಧ್ಯಂತರದ ನಂತರ ಚಿತ್ರ ಗಂಭೀರ ತಿರುವು ಪಡೆದುಕೊಳ್ಳುತ್ತದೆ. ಗಣೇಶ್ ನಾನಾ ಸಂಕಷ್ಟಗಳಲ್ಲಿ ಸಿಲುಕಿಕೊಳ್ಳುತ್ತಾನೆ. ಮೊದಲು ತನ್ನ ಸ್ವಾರ್ಥಕ್ಕಾಗಿ, ತನ್ನ ಹಿತಕ್ಕಾಗಿ ಮನೆ ಮಾರಲು ನಿಶ್ಚಯಿಸಿದ್ದವನು ನಂತರ ಬೇರೆಯವರ ಉಳಿವಿಗಾಗಿ ಮನೆ ಮಾರಿ, ಅವರಿಗಾಗಿ ಹಣ ಖರ್ಚು ಮಾಡುತ್ತಾನೆ.

ಅಂತಿಮವಾಗಿ ಮನೆ ಬಿಟ್ಟು ಹೊರಡುವಾಗ ಅಪ್ಪ ದೆವ್ವವಾಗಿ ಮತ್ತೆ ಪ್ರತ್ಯಕ್ಷನಾಗುತ್ತಾನೆ. ಆಗ ಗಣೇಶ ಮನೆ ಮಾರಿದ್ದಕ್ಕಾಗಿ ಅಪ್ಪನಲ್ಲಿ ಕ್ಷಮೆ ಕೇಳುತ್ತಾನೆ. ಆದರೆ ಅಪ್ಪ ಮಗನ ಬಗ್ಗೆ ಹೆಮ್ಮೆ ಪಡುತ್ತಾನೆ. ತನ್ನ ಸ್ವಾರ್ಥಕ್ಕಾಗಿ ಮಾರದೆ ಇತರರ ಹಿತಕ್ಕಾಗಿ ತಾನೇ ಮಾರಿದ್ದು ಎಂದು ಹೇಳಿ, ಈ ಪುಣ್ಯದ ಫಲ ಮುಂದೆ ದಕ್ಕುವುದಾಗಿ ಹೇಳಿಹೋಗುತ್ತಾನೆ. ಹೋಗುವಾಗ 'ತಾನು ದೆವ್ವವಲ್ಲ. ನಿನ್ನ ಮನಸ್ಸಾಕ್ಷಿ. ಕೊಟ್ಟ ಮಾತಿಗೆ ವಿರುದ್ಧವಾಗಿ ಹೋಗಲು ಆಗದೇ ಮನಸ್ಸು ಚಡಪಡಿಸಿ, ಮನೆ ಮಾರಲು ಸಾಧ್ಯವಾಗಿರಲಿಲ್ಲ. ಈಗ ನಿನ್ನ ಮನಸ್ಸು ನಿರಾಳ. ಈಗ ಯಾವ ದೆವ್ವದ ಕಾಟವೂ ನಿನಗಿಲ್ಲ' ಎಂದು ಹೇಳಿ ಹೋಗುತ್ತಾ

ಇದಿಷ್ಟು ಹೇಳುವಷ್ಟರಲ್ಲಿ ಅನೇಕ ಪಾತ್ರಗಳ ಬಂದುಹೋಗುತ್ತವೆ. ಕೇಳಿದಾಗೆಲ್ಲ ಸಾಲ ಕೊಡುವ ರಂಗಾಯಣ ರಘು, ಗಣೇಶನ ಮನೆ ಬಾಡಿಗೆ ಬರುವ ಮೂವರು ಟೀಚರ್ಸ್, ಅವರಲ್ಲೊಬ್ಬಾಕೆಗೆ ಗಣೇಶನ ಜೊತೆ ಪ್ರೀತಿಯಾಗುವುದು, ಅನಿರೀ ತಿರುವಿನಲ್ಲಿ ಆತನ ತಂಗಿ ಪ್ರತ್ಯಕ್ಷಳಾಗುವುದು ಅಂದರೆ ಅಪ್ಪನ ಎರಡನೇ ಹೆಂಡತಿ ಮಗಳು ಮತ್ತು ಆತನ ಗಂಡ ಹಿಂದೆ ಬಿದ್ದ ಗೂಂಡಾಗಳು, ಅವರೊಂದಿಗೆ ಬಡಿದಾಡಿ ಅಂತಿಮವಾಗಿ ಅವರಿಗಾಗಿ ಹಣ ಖರ್ಚು ಮಾಡುವಷ್ಟ ಚಿತ್ರ ಅಂತ್ಯಕ್ಕೆ ಬಂದು ಮುಟ್ಟುತ್ತದೆ.

ಪ್ಲಸ್ - ಮೈನಸ್

ದಿನೇಶ್‌ಬಾಬು ಚಿತ್ರಗ ಸದಭಿರುಚಿಯ ಹಾಸ್ಯ ಸಾಮಾನ್ಯ. ಈ ಚಿತ್ರದ ಮೂಲಕ ಪೂರ್ಣ ಪ್ರಮಾಣದ ಹಾಸ್ಯ ಚಿತ್ರಕ ಅವರು ಕೈ ಹಾಕಿದ್ದಾರೆ. ಸಾಕಷ್ಟು ಗಮನ ಸೆಳೆದರೂ, ಹಾಸ್ಯ ನಟನೆಯಲ್ಲಿ ಅದ್ಭುತ ನಟ ಅನಂತನಾಗ್‌ರನ್ನು ಸಮರ್ಥವಾಗಿ ಬಳಸಿಕೊಂಡಿಲ್ಲದಿರುವುದು ಚಿತ್ರದ ಮೈನಸ್ ಪಾಯಿಂಟ್. ಉಳಿದಂತೆ ಅದ್ಭುತವೇನಲ್ಲದ ಕಳಪೆಯೂ ಅಲ್ಲದ ಸದಭಿರುಚಿಯ ಒಂದು ಸಾಧಾರಣ ಚಿತ್ರ 'ಗಣೇಶ'.

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH